# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ಸಂಪಾದಕರು : ಎಂ.ಎಸ್. ವಿಕಾಸ್

ದಾವಣಗೆರೆ
ಬುಧವಾರ, ಜನವರಿ 01, 2025

ಸಂಪುಟ : 51 ಸಂಚಿಕೆ : 229 ☎ 08192-254736 91642 99999 RNI No: 27369 ಪುಟ : 6 ರೂ : 5.00 www.janathavani.com janathavani@mac.com





2025ರ ಹೊಸ ಕ್ಯಾಲೆಂಡರ್ ವರ್ಷವನ್ನು ದಾವಣಗೆರೆ ನಗರದಲ್ಲಿ ಸಂಭ್ರಮದಿಂದ ಸ್ವಾಗತಿಸಲಾಯಿತು. ಕೇಕ್ ಕತ್ತರಿಸಿ ಸಂಭ್ರಮಿಸಲು ಮಂಗಳವಾರ ಸಂಜೆಯಿಂದಲೇ ಬೇಕರಿಗಳಲ್ಲಿ ಕೇಕ್‌ಗಳಿಗೆ ಭಾರೀ ಬೇಡಿಕೆ ಉಂಟಾಗಿತ್ತು.

# ನನ್ನ ಎನ್‌ಕೌಂಟರ್ ಮಾಡಿಸುವ ಪ್ರಯತ್ನ

## ರಾಜ್ಯ ಪೊಲೀಸ್ ಮಹಾನಿರ್ದೇಶಕರಿಗೆ ಪರಿಷತ್ ಸದಸ್ಯ ಸಿ.ಟಿ. ರವಿ ಲಿಖಿತ ದೂರು



**ಬೆಳಗಾವಿ ನಗರ ಪೊಲೀಸ್ ಕಮಿಷನರ್ ಯಡಾ ಮಾರ್ಟಿನ್ ಮತ್ತು ಬೆಳಗಾವಿ ಎಸ್ಪಿ ಭೀಮಾಶಂಕರ್ ಗುಳೇದ ವಿರುದ್ಧವೂ ರವಿ ಆರೋಪ ರಾಜ್ಯಪಾಲರಿಗೆ ನೀಡಿದ್ದ 8 ಪುಟಗಳ ದೂರಿನಲ್ಲೂ ಡಿ.ಕೆ.ಶಿವಕುಮಾರ್ ಮತ್ತು ಲಕ್ಷ್ಮೀ ಹೆಬ್ಬಾಳ್ಕರ್ ವಿರುದ್ಧ ಗಂಭೀರ ಆರೋಪ**

ಬೆಂಗಳೂರು, ಡಿ,31- ಬೆಳಗಾವಿಯ ಹಿರಿಯ ಪೊಲೀಸ್ ಅಧಿಕಾರಿಗಳ ಮೂಲಕ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ತಮ್ಮನ್ನು ಎನ್‌ಕೌಂಟರ್ ಮಾಡಿಸುವ ಪ್ರಯತ್ನ ಮಾಡಿದ್ದರೆಂದು ಬಿಜೆಪಿ ವಿಧಾನ ಪರಿಷತ್ ಸದಸ್ಯ ಸಿ.ಟಿ.ರವಿ ರಾಜ್ಯ ಪೊಲೀಸ್ ಮಹಾನಿರ್ದೇಶಕರಿಗೆ ಲಿಖಿತ ದೂರು ಸಲ್ಲಿಸಿದ್ದಾರೆ.

ಪಕ್ಷದ ಮುಖಂಡರ ಜೊತೆಗೂಡಿ ಇಂದು ಪೊಲೀಸ್ ಮಹಾನಿರ್ದೇಶಕ ಅಲೋಕ್ ಮೋಹನ್ ಅವರನ್ನು ಭೇಟಿ ಮಾಡಿ ಲಿಖಿತ ದೂರು ಸಲ್ಲಿಸಿದ್ದಲ್ಲದೇ, ಇವರುಗಳ ವಿರುದ್ಧ ಕಾನೂನು ಕ್ರಮ ಕೈಗೊಳ್ಳುವಂತೆ ಆಗ್ರಹಿಸಿದ್ದಾರೆ.

ನಾನು ದೂರು ಕೊಟ್ಟ ಬಳಿಕವೂ ಎಫ್‌ಐಆರ್ ಹಾಕದೆ, ನನ್ನನ್ನು ಅಕ್ರಮವಾಗಿ ಬಂಧಿಸಿ, ನನ್ನ ಮೇಲೆ ದೌರ್ಜನ್ಯ ಎಸಗಿ, ಈ ಪ್ರಭಾವಿಗಳ ನಿರ್ದೇಶನದಂತೆ ರಾತ್ರಿಯಿಡೀ ನಿರ್ಜನ ಪ್ರದೇಶಗಳಲ್ಲಿ ವಾಹನದಲ್ಲಿ ಸುತ್ತಾಡಿಸಿ ಕಾನೂನು ಉಲ್ಲಂಘನೆ ಮಾಡಿದ್ದು, ಈ ಪೊಲೀಸ್ ಅಧಿಕಾರಿಗಳ ವಿರುದ್ಧ ಕಾನೂನು ಕ್ರಮ ಜರುಗಿಸುವಂತೆ ಆಗ್ರಹಿಸಿದ್ದಾರೆ.

ಈ ಸಂಬಂಧ ಸರಣಿ ಟ್ವೀಟ್ ಮಾಡಿರುವ ರವಿ ಅವರು, ಪೊಲೀಸ್ ನಿರ್ದೇಶಕರು ಮತ್ತು ರಾಜ್ಯಪಾಲರಿಗೆ ನೀಡಿರುವ ದೂರಿನ ಮಾಹಿತಿಯನ್ನು ಹಂಚಿಕೊಂಡಿದ್ದಾರೆ.

ಬೆಳಗಾವಿಯ ಸುವರ್ಣ ಸೌಧದಿಂದ ತಮ್ಮನ್ನು ಪಶುವಿನ ರೀತಿ ಪೋಲಿಸರು ಕಿಡ್ನಾಪ್ ಮಾಡಿದ್ದರು. ಇಡೀ ಸನ್ನಿವೇಶ ಫೇಕ್ ಎನ್‌ಕೌಂಟರ್ ರೀತಿ ಹಾಗೂ ಲೈಸೆನ್ಸ್ಡ್ ಸುಪಾರಿ ಕಿಲ್ಲರ್‌ಗಳು ನಡೆದುಕೊಳ್ಳುವ ರೀತಿ ಇತ್ತು ಎಂದು ದೂರಿನಲ್ಲಿ ಉಲ್ಲೇಖಿಸಿದ್ದಾರೆ. ರಾಜ್ಯಪಾಲರ ಭೇಟಿ ವೇಳೆ ಉಪಮುಖ್ಯಮಂತ್ರಿ ಹಾಗೂ ಸಚಿವೆ ವಿರುದ್ಧ ಸವಿಸ್ತಾರವಾದ ವಿವರಣೆ ನೀಡಿದ್ದೇನೆ, ಅವರು ನ್ಯಾಯ ಕೊಡಿಸುತ್ತಾರೆಂಬ ವಿಶ್ವಾಸ ನನಗಿದೆ ಎಂದಿದ್ದಾರೆ.

ಬೆಳಗಾವಿಯ ಚಳಿಗಾಲದ ಅಧಿವೇಶನದ ಕೊನೆಯ ದಿನ, ರಾಜ್ಯಸಭೆಯಲ್ಲಿ ಕೇಂದ್ರ ಗೃಹ ಸಚಿವ ಅಮಿತ್ ಷಾ ನೀಡಿದ ಹೇಳಿಕೆ ಕುರಿತು ವಿಧಾನ ಪರಿಷತ್‌ನಲ್ಲಿ ಪರ-ವಿರೋಧ ಚರ್ಚೆಗಳು ತಾರಕಕ್ಕೇರಿ, ರವಿ ಮತ್ತು ಸಚಿವೆ ಹೆಬ್ಬಾಳ್ಕರ್ ನಡುವೆ ವಾಕ್ ಸಮರಕ್ಕೆ ಕಾರಣವಾಗಿತ್ತು.

ಈ ಹಂತದಲ್ಲಿ ರವಿ ಅವರು ಸಚಿವೆ ಬಗ್ಗೆ ಅವಾಚ್ಯ ಪದ ಬಳಸಿದರೆಂದು ಅವರ ಬೆಂಬಲಿಗರು ಸುವರ್ಣಸೌಧದೊಳಗೆ ನುಗ್ಗಿ ಹಲ್ಲೆಗೆ ಪ್ರಯತ್ನ ಮಾಡಿದ್ದರು.

ಮಾರ್ಷಲ್‌ಗಳ ಮಧ್ಯ ಪ್ರವೇಶದಿಂದ ರವಿ ಅವರ ಮೇಲೆ ನಡೆಸಿದ ಹಲ್ಲೆ ಯತ್ನ ವಿಫಲವಾಯಿತು, ನಂತರ ಸಚಿವೆ ನೀಡಿದ ದೂರಿನ ಆಧಾರದ ಮೇಲೆ ಸ್ಥಳೀಯ ಪೊಲೀಸರು ರವಿ ವಿರುದ್ಧ ಕ್ರಮಕ್ಕೆ ಮುಂದಾಗಿದ್ದರು.

# ಸ್ಪೇಡೆಕ್ಸ್ ಉಪಗ್ರಹಗಳ ಉಡಾವಣೆ ಯಶಸ್ವಿ

ಶ್ರೀಹರಿಕೋಟ, ಡಿ.31- 'ಸ್ಪೇಡೆಕ್ಸ್-ಎ' ಹಾಗೂ ಸ್ಪೇಡೆಕ್ಸ್-ಬಿ' ಎಂಬ ಎರಡು ಉಪಗ್ರಹಗಳ ಉಡಾವಣೆಯಲ್ಲಿ ಭಾರತೀಯ ಬಾಹ್ಯಾಕಾಶ ಸಂಸ್ಥೆ ಇಸ್ರೋ ಯಶಸ್ವಿಯಾಗಿದೆ.

ಪಿಎಸ್‌ಎಲ್‌ವಿ-ಸಿ60 ರಾಕೆಟ್ ಮೂಲಕ ಉಪಗ್ರಹಗಳನ್ನು ನಿಗದಿತ ಕಕ್ಷೆಗೆ ಸೇರಿಸಲಾಗಿದೆ ಎಂದು ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ (ಇಸ್ರೋ) ಘೋಷಿಸಿದೆ.

ಇದರೊಂದಿಗೆ ಮಹತ್ತರ ಸಾಧನೆ ಮಾಡಿರುವ ಇಸ್ರೋ, ಈಗ ಮಗದೊಂದು ಮೈಲಿಗಲ್ಲಿನತ್ತ ದೃಷ್ಟಿ ಹಾಯಿಸಿದೆ.

ಬಾಹ್ಯಕಾಶ ಡಾಕಿಂಗ್ ಪರೀಕ್ಷೆ ಕುರಿತು ಮಾಹಿತಿ ನೀಡಿರುವ ಇಸ್ರೊ ಅಧ್ಯಕ್ಷ ಎಸ್. ಸೋಮನಾಥ್, ಜನವರಿ 7ರ ವೇಳೆಗೆ ಡಾಕಿಂಗ್ ಪ್ರಕ್ರಿಯೆ ನಡೆಯುವ ನಿರೀಕ್ಷೆ ಇದೆ ಎಂದು ತಿಳಿಸಿದ್ದಾರೆ.

ಆನ್‌ಬೋರ್ಡ್ ಕ್ಯಾಮೆರಾದಿಂದ ಡಾಕಿಂಗ್ ಪ್ರಕ್ರಿಯೆಗಳ ಚಿತ್ರಗಳನ್ನು ಪ್ರಸಾರ ಮಾಡುವುದು ಸೇರಿದಂತೆ ಡಾಕಿಂಗ್‌ನ ಎಲ್ಲ ಚಟುವಟಿಕೆಗಳನ್ನು ಬೆಂಗಳೂರಿನ ಇಸ್ರೋ ಕೇಂದ್ರದಿಂದ ವೀಕ್ಷಿಸಲು ಸಾಧ್ಯವಾಗಲಿದೆ ಎಂದು ಅವರು ಹೇಳಿದ್ದಾರೆ.



ಪಿಎಸ್‌ಎಲ್‌ವಿ-ಸಿ60 ರಾಕೆಟ್ 220ಕೆ.ಜಿ ತೂಕದ ಎರಡು ಸ್ಪೇಡೆಕ್ಸ್ ಉಪಗ್ರಹ ಮತ್ತು 24 ಪೇಲೋಡ್‌ಗಳನ್ನು ಹೊಂದಿರುವ ಪಿಒಇಎಂ-4 ಅನ್ನು ನಿಗದಿತ ಕಕ್ಷೆಗೆ ಸೇರಿಸಿದೆ ಎಂದವರು ತಿಳಿಸಿದ್ದಾರೆ.

ಕಕ್ಷೆಯಲ್ಲಿ ಬಾಹ್ಯಾಕಾಶ ನೌಕೆಗಳ 'ಡಾಕಿಂಗ್' ಮತ್ತು 'ಅನ್‌ಡಾಕಿಂಗ್' ನಡೆಸುವ ಸಾಮರ್ಥ್ಯವನ್ನು ಪ್ರದರ್ಶಿಸುವ ಮಹತ್ತರ ಯೋಜನೆ ಇದಾಗಿದೆ. ಅಮೆರಿಕ, ರಷ್ಯಾ ಮತ್ತು ಚೀನಾ ಮಾತ್ರ ಬಾಹ್ಯಾಕಾಶ ನೌಕೆಗಳ 'ಡಾಕಿಂಗ್' ತಂತ್ರಜ್ಞಾನವನ್ನು ಹೊಂದಿರುವ ದೇಶಗಳಾಗಿವೆ. ಈ ಸಾಲಿಗೆ ಭಾರತ ಸಹ ಸೇರ್ಪಡೆಯಾಗಲಿದೆ.

# 2025ರಲ್ಲಿ 90 ಸಾವಿರದ ಗಡಿ ದಾಟಲಿದೆಯೇ ಬಂಗಾರ ?

ನವದೆಹಲಿ, ಡಿ. 31- ಬಂಗಾರ ಹೂಡಿಕೆಗೆ ಸುರಕ್ಷಿತ ಮಾರ್ಗ ಎಂಬ ಲೆಕ್ಕಾಚಾರದ ಕಾಣದಿಂದಾಗಿ 2024ರಲ್ಲಿ ಬಂಗಾರದ ಬೆಲೆ 85 ಸಾವಿರ ರೂ.ಗಳವರೆಗೆ ತಲುಪಿತ್ತು. 2025ರಲ್ಲೂ ಜಾಗತಿಕ ಪರಿಸ್ಥಿತಿ ಇದೇ ರೀತಿ ಮುಂದುವರೆದರೆ ಬಂಗಾರದ ಬೆಲೆ 90 ಸಾವಿರ ರೂ.ಗಳ ಹಂತಕ್ಕೆ ತಲುಪುವ ಸಾಧ್ಯತೆ ಇದೆ.

ವಿವಿಧ ಕೇಂದ್ರ ಬ್ಯಾಂಕುಗಳ ಹಣಕಾಸು ನೀತಿ ಹಾಗೂ ಕೇಂದ್ರ ಬ್ಯಾಂಕುಗಳ ಬಂಗಾರ ಖರೀದಿ ಕಾರಣದಿಂದಾಗಿ 2024ರಲ್ಲಿ ಬಂಗಾರದ ಬೆಲೆ ಏರಿಕೆಯಾಗಿತ್ತು. ಹಲವು ದೇಶಗಳ ನಡುವೆ ನಡೆದ ಸಂಘರ್ಷಗಳು ಬಂಗಾರದ ಬೇಡಿಕೆ ಹೆಚ್ಚಾಗಲು ಕಾರಣವಾಗಿತ್ತು.

ಪ್ರಸಕ್ತ ಬಂಗಾರದ ಬೆಲೆ 10 ಗ್ರಾಂಗಳಿಗೆ 79,350 ರೂ. ಹಂತದಲ್ಲಿದೆ. 2024ರಲ್ಲಿ ಬಂಗಾರದ ಬೆಲೆ ಶೇಕಡ 23ರ ವರೆಗೆ



ಹೆಚ್ಚಾಗಿತ್ತು. ಅಕ್ಟೋಬರ್ ತಿಂಗಳಲ್ಲಿ ಬಂಗಾರದ ಬೆಲೆ 82,400 ರೂ.ಗಳ ಹಂತರಕ್ಕೂ ತಲುಪಿತ್ತು. ಬೆಳ್ಳಿ ಬೆಲೆ ಸಹ ಶೇಕಡ 30ರಷ್ಟು ಹೆಚ್ಚಾಗಿ ಕೆ.ಜಿ.ಗೆ 1 ಲಕ್ಷ ರೂ.ಗಳ ಹಂತಕ್ಕೆ ತಲುಪಿತ್ತು.

ಜಾಗತಿಕವಾಗಿ 2024ರಲ್ಲಿ ಬಂಗಾರದ ಬೆಲೆ ಪ್ರತಿ ಔನ್ಸ್‌ಗೆ 2062 ಡಾಲರ್‌ಗಳಿಂದ ಆರಂಭವಾಗಿ 2790 ಡಾಲರ್ ವರೆಗೂ ತಲುಪಿತ್ತು. ಅಕ್ಟೋಬರ್ (2ನೇ ಪುಟಕ್ಕೆ)

# ಶಿಕ್ಷಣದ ಜೊತೆ ಸಂಸ್ಕೃತಿ, ಸಂಸ್ಕಾರ, ಮಾನವೀಯ ಮೌಲ್ಯ ಬೆಳೆಸಬೇಕು



**ಗದಗ-ಶಿವಮೊಗ್ಗ-ದಾವಣಗೆರೆ ವೀರೇಶ್ವರ ಪುಣ್ಯಾಶ್ರಮದ ಪೀಠಾಧಿಪತಿ ಶ್ರೀ ಕಲ್ಲಯ್ಯಜ್ಜ ಹಿತ ನುಡಿ**

ದಾವಣಗೆರೆ, ಡಿ. 31- ಮಕ್ಕಳಿಗೆ ಶಿಕ್ಷಣದ ಜೊತೆಗೆ ಸಂಸ್ಕೃತಿ, ಸಂಸ್ಕಾರ ಹಾಗೂ ಮಾನವೀಯ ಮೌಲ್ಯಗಳನ್ನು ಬೆಳೆಸಬೇಕು ಎಂದು ಗದಗ - ಶಿವಮೊಗ್ಗ - ದಾವಣಗೆರೆ ವೀರೇಶ್ವರ ಪುಣ್ಯಾಶ್ರಮದ ಪೀಠಾಧಿಪತಿ ಶ್ರೀ ಕಲ್ಲಯ್ಯಜ್ಜನವರು ಕರೆ ನೀಡಿದರು.

ನಗರದ ಚೌಕಿಪೇಟೆಯಲ್ಲಿರುವ ಶ್ರೀ ಗುರು ಬಕ್ಕೇಶ್ವರ ಮಹಾಸ್ವಾಮಿ ದೇವಸ್ಥಾನದ ಆವರಣದಲ್ಲಿ ಇಂದು ಏರ್ಪಾಡಾಗಿದ್ದ ಡಾ. ಪಂ. ಪುಟ್ಟರಾಜ ಕವಿ ಗವಾಯಿಗಳವರ ವಿರಚಿತ ಮಹಾ ದಾಸೋಹಿ ಕಲಬುರಗಿ ಶ್ರೀ ಶರಣ ಬಸವೇಶ್ವರರ ಪುರಾಣ ಪ್ರಾರಂಭೋತ್ಸವದ ನೇತೃತ್ವ ವಹಿಸಿ ಅವರು ಮಾತನಾಡಿದರು. ನಾಡಿನ ಅಂಧ ಮಕ್ಕಳಿಗೆ ಸಂಗೀತ ಶಿಕ್ಷಣ ನೀಡುವ ಮೂಲಕ ಸಮಾಜದ ಮುಖ್ಯ ವಾಹಿನಿಗೆ ತರುವಲ್ಲಿ ಪಂ. ಪುಟ್ಟರಾಜ ಕವಿ ಗವಾಯಿಗಳು ಲಕ್ಷಾಂತರ ಮಕ್ಕಳ ಬದುಕಿಗೆ ಬೆಳಕಾಗಿದ್ದಾರೆಂದರು.

ಸಂಸ್ಕೃತಿ, ಸಂಸ್ಕಾರದ ಜೊತೆ ಇಂತಹ ಪವಿತ್ರ ಪುರಾಣ ಕೇಳುವ ಆಸಕ್ತಿಯನ್ನು ಬೆಳೆಸುವಂತೆ ಮಕ್ಕಳನ್ನು ಪ್ರೇರೇಪಿಸಬೇಕು. ಪ್ರತಿಯೊಬ್ಬರೂ ಸಹ ಪುರಾಣ ಕೇಳಿ ಪುಣ್ಯ ಪ್ರಾಪ್ತಿಯನ್ನು ಪಡೆದುಕೊಳ್ಳಿ ಎಂದು ಹಿತ ನುಡಿದರು.

ಪುರಾಣಗಳಲ್ಲೇ ಅತ್ಯಂತ ಶ್ರೇಷ್ಠವಾದ ಪುರಾಣ ಎಂದರೆ ದಾಸೋಹ ಮೂರ್ತಿ ಶರಣ ಬಸವೇಶ್ವರರ ಪುರಾಣ. ಇಂತಹ ಪುರಾಣ (2ನೇ ಪುಟಕ್ಕೆ)



# 2024ರಲ್ಲಿ ಎಡವಿ ಮತ್ತೆ ಪುಟಿದೆದ್ದ ಬಿಜೆಪಿ



ನವದೆಹಲಿ, ಡಿ. 31- ಕಳೆದ ಜನವರಿಯಲ್ಲಿ ಅಯೋಧ್ಯೆಯಲ್ಲಿ ರಾಮ ಮಂದಿರ ಪ್ರಾಣ ಪ್ರತಿಷ್ಠಾಪನೆ ನಂತರ ಲೋಕಸಭಾ ಚುನಾವಣೆಯಲ್ಲಿ ಭಾರೀ ಬಹುಮತ ಪಡೆಯುವ ನಿರೀಕ್ಷೆಯಲ್ಲಿದ್ದ ಬಿಜೆಪಿ, ಸ್ವಂತ ಬಲದ ಮೇಲೆ ಬಹುಮತ ಪಡೆಯಲು ಸಾಧ್ಯವಾಗದೇ ಮುಗ್ಗರಿಸಿತ್ತು.

ಇದರಿಂದಾಗಿ ಬಿಜೆಪಿ ಬಲಕುಂದುವ ಸಮಯ ಆರಂಭವಾಗಿದೆ ಎಂದು ಹಲವರು ಭಾವಿಸಿದ್ದರು. ಆದರೆ, ವರ್ಷಾಂತ್ಯಗೊಳ್ಳುವ ವೇಳೆಗೆ ಬಿಜೆಪಿ ಮತ್ತೆ ಬಲವಾಗಿದೆ. ದೇಶದ ರಾಜಕೀಯದ ಮೇಲೆ ಮತ್ತೆ ತನ್ನ ಪ್ರಾಬಲ್ಯ ಸಾಬೀತು ಪಡಿಸಿದೆ. ಕಠಿಣ ಎನ್ನಲಾಗಿದ್ದ ಹರಿಯಾಣ ಮತ್ತು ಮಹಾರಾಷ್ಟ್ರ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ ಅಚ್ಚರಿಯ ಗೆಲುವು ಸಾಧಿಸಿದೆ.

2024ರಲ್ಲಿ ಬಿಜೆಪಿಯ ಶಕ್ತಿ ಹಾಗೂ ದೌರ್ಬಲ್ಯಗಳೆರಡು ಪ್ರದರ್ಶನಗೊಂಡವು. ಆದರೆ, ಬದಲಾದ ಪರಿಸ್ಥಿತಿಗೆ ಅನುಗುಣವಾಗಿ ಹೊಂದಿಕೊಂಡು ಕಾರ್ಯನಿರ್ವಹಿಸುವ ಗುಣದಿಂದ ಮತ್ತೆ ಬಿಜೆಪಿ ಪುಟ್ಟಿದೆದ್ದಿದೆ. ರಾಜ್ಯ ವಿಧಾನಸಭಾ ಚುನಾವಣೆಗಳಲ್ಲಿ ಜನರ ಅಪೇಕ್ಷೆಯ ಮಟ್ಟದಲ್ಲಿ ಪ್ರಚಾರ ಮಾಡಿ ಗೆಲುವು ಸಾಧಿಸುವಲ್ಲಿ ಯಶಸ್ವಿಯಾಗಿದೆ.

ಲೋಕಸಭಾ ಚುನಾವಣೆಯಲ್ಲಿ ಆರ್.ಎಸ್.ಎಸ್. ಹಾಗೂ ಅದರ ಅಂಗ ಪಕ್ಷಗಳು ಪೂರ್ಣ ಪ್ರಮಾಣದಲ್ಲಿ ಪ್ರಚಾರದಲ್ಲಿ ತೊಡಗಿದಂತೆ ಕಂಡು ಬರಲಿಲ್ಲ. ಆದರೆ ವಿಧಾನಸಭಾ ಚುನಾವಣೆಯಲ್ಲಿ ಆರ್.ಎಸ್.ಎಸ್. ಹಾಗೂ ಅಂಗ ಪಕ್ಷಗಳು ಸಂಪೂರ್ಣವಾಗಿ ಸಕ್ರಿಯವಾಗಿದ್ದವು.

ಬಿಜೆಪಿ ಅಧ್ಯಕ್ಷ ಜೆ.ಪಿ. ನಡ್ಡಾ ಅವರು ಕೇಂದ್ರ ಸಂಪುಟದಲ್ಲಿ ಸಚಿವರಾಗಿದ್ದಾರೆ. ಈ ಹಿನ್ನೆಲೆಯಲ್ಲಿ ಬಿಜೆಪಿ ನೂತನ ಅಧ್ಯಕ್ಷರನ್ನು ಪಡೆಯಲಿದೆ. ನೂತನ ಅಧ್ಯಕ್ಷರ ಆಯ್ಕೆಯಲ್ಲಿ ಆರ್.ಎಸ್.ಎಸ್. ಪ್ರಮುಖ ಪಾತ್ರ ವಹಿಸಲಿದೆ ಎಂದು ಹೇಳಲಾಗುತ್ತಿದೆ.

ಲೋಕಸಭಾ ಚುನಾವಣೆಯಲ್ಲಿ ಬಿಜೆಪಿ ಸುಲಭ ಜಯ ಸಾಧಿಸುವ ವಿಶ್ವಾಸ ಹೊಂದಿತ್ತು. ಅಬ್ ಕಿ ಬಾರ್ ಚಾರ್‌ಸೊ ಪಾರ್ ಎಂಬ ಘೋಷಣೆಯೊಂದಿಗೆ ಚುನಾವಣೆಗೆ ತೆರಳಿತ್ತು. ಆದರೆ ಫಲಿತಾಂಶ ಬಂದಾಗ ಬಿಜೆಪಿ ಸ್ವಂತ ಬಲದಲ್ಲಿ ಬಹುಮತ ಗಳಿಸಲು ಸಾಧ್ಯವಾಗಲಿಲ್ಲ. ಸಂವಿಧಾನ ಅಪಾಯದಲ್ಲಿದೆ ಎಂಬ ಎಂಬ ಘೋಷಣೆಯಲ್ಲಿ ಚುನಾವಣೆಗೆ ತೆರಳಿದ ಪ್ರತಿಪಕ್ಷಗಳು ನಿರೀಕ್ಷೆಗೂ ಮೀರಿ ಸ್ಥಾನಗಳಿಸಿದ್ದವು. ಆದರೂ ಮೋದಿ ನೇತೃತ್ವದ ಎನ್.ಡಿ.ಎ. ಮೈತ್ರಿಕೂಟ 294 ಸ್ಥಾನ ಗಳಿಸಿ ಅಧಿಕಾರ ಉಳಿಸಿಕೊಂಡಿತ್ತು.

ನಿರೀಕ್ಷೆಗೂ ಮೀರಿ 99 ಸ್ಥಾನ ಪಡೆದಿದ್ದ ಕಾಂಗ್ರೆಸ್ ಪಕ್ಷ, ದಶಕದ ಹಿನ್ನಡೆ ನಂತರ ಮತ್ತೆ (2ನೇ ಪುಟಕ್ಕೆ)

# ಎಸ್ಪಿ ಉಮಾ ಪ್ರಶಾಂತ್ ಸೇರಿ 65 ಐಪಿಎಸ್ ಅಧಿಕಾರಿಗಳಿಗೆ ಪದೋನ್ನತಿ



ಬೆಂಗಳೂರು, ಡಿ.31- ಕರ್ನಾಟಕ ರಾಜ್ಯ ಸರ್ಕಾರವು ಹೊಸ ವರ್ಷದ ಮುನ್ನಾ ದಿನವೇ ರಾಜ್ಯದ ಐಪಿಎಸ್ ಅಧಿಕಾರಿಗಳಿಗೆ ಪದೋನ್ನತಿ ನೀಡಿ ಇಂದು ಆದೇಶ ಹೊರಡಿಸಿದೆ.

ದಾವಣಗೆರೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಶ್ರೀಮತಿ ಉಮಾ ಪ್ರಶಾಂತ್, ಹುಬ್ಬಳ್ಳಿ - ಧಾರವಾಡ ಪೊಲೀಸ್ ಆಯುಕ್ತ ಎನ್.ಶಿವಕುಮಾರ್, ಬೆಳಗಾವಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಭೀಮಾ ಶಂಕರ ಗುಳೇದ, ಬೆಳಗಾವಿ ಲೋಕಾಯುಕ್ತ ಎಸ್ಪಿ ಹನುಮಂತರಾಯ, ನೇಮಕಾತಿ ವಿಭಾಗದ ಎಸ್.ಪಿ. ಧರ್ಮೇಂದ್ರ ಕುಮಾರ್ ಮೀನಾ, ಜೆ.ಸಂಗೀತಾ ಸೇರಿದಂತೆ, ಒಟ್ಟು 65 ಐಪಿಎಸ್ ಅಧಿಕಾರಿಗೆ ಪದೋನ್ನತಿ ನೀಡಿದೆ.

ಜೊತೆಗೆ, ಪದೋನ್ನತಿ ಹೊಂದಿರುವ ಬಹುತೇಕ ಐಪಿಎಸ್ ಅಧಿಕಾರಿಗಳಿಗೆ ಈಗಿರುವ ಸ್ಥಳದಲ್ಲೇ ಮುಂದುವರೆಸಿ ಸರ್ಕಾರ ಆದೇಶಿಸಿದೆ.

# ಬಾಂಗ್ಲಾ ಹಂಗಾಮಿ ಸರ್ಕಾರದಿಂದ 'ಜುಲೈ ದಂಗೆ ಘೋಷಣೆ'

ಢಾಕಾ, ಡಿ. 31- 'ಜುಲೈ ದಂಗೆ ಘೋಷಣೆ' ಮಾಡಲು ಸಿದ್ಧತೆ ನಡೆಸಿರುವುದಾಗಿ ಬಾಂಗ್ಲಾ ದೇಶದ ಹಂಗಾಮಿ ಸರ್ಕಾರ ಪ್ರಕಟಿಸಿದೆ.

ಬಾಂಗ್ಲಾದೇಶದ ಪ್ರಧಾನಮಂತ್ರಿಯಾಗಿದ್ದ ಶೇಕ್ ಹಸೀನಾ ಅವರನ್ನು ಪದಚ್ಯುತಗೊಳಿಸಲು ಕಾರಣವಾದ ವಿದ್ಯಾರ್ಥಿ (5ನೇ ಪುಟಕ್ಕೆ)

## ನೇತ್ರದಾನಿ, ದೇಹದಾನಿ ಶ್ರೀಮತಿ ಲಲಿತಮ್ಮ ಸಿದ್ದಪ್ಪ ಶೀಲವಂತರ ನಿಧನ



ದಾವಣಗೆರೆಯ ಶ್ರೀ ರುದ್ರೇಶ್ವರ ಪ್ರಿಂಟರ್ಸ್‌ನ ಸಂಸ್ಥಾಪಕ ಮಾಲೀಕರು ಮತ್ತು ಚಾರ್ಟರ್ಡ್ ಅಕೌಂಟೆಂಟ್ ಆದ ಸಿ.ಎ. ಲಿಂಗರಾಜ್ ಎಸ್. ಇವರ ಮಾತೋಶ್ರೀಯವರಾದ

**ಶ್ರೀಮತಿ ಲಲಿತಮ್ಮ ಸಿದ್ದಪ್ಪ ಶೀಲವಂತರ**

ಇವರು ದಿನಾಂಕ 31.12.2024ನೇ ಮಂಗಳವಾರ ಸಂಜೆ 5.05ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರು ಮೂವರು ಪುತ್ರರು, ಓರ್ವ ಪುತ್ರಿ ಮತ್ತು ಮೊಮ್ಮಕ್ಕಳು ಹಾಗೂ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. 'ಲಲಿತ', 1948/14, 3ನೇ ಮೇನ್, 8ನೇ ಕ್ರಾಸ್, ವಿನೋಬನಗರ, ದಾವಣಗೆರೆ ಮೃತರ ಸ್ವಗೃಹದಲ್ಲಿ ಬುಧವಾರ ಬೆಳಿಗ್ಗೆ 8 ಗಂಟೆಯವರೆಗೆ ಅಂತಿಮ ದರ್ಶನವನ್ನು ಏರ್ಪಡಿಸಲಾಗಿದೆ.

ಮೃತರು ನೇತ್ರದಾನ ಮತ್ತು ಸಂಪೂರ್ಣ ದೇಹದಾನ ಮಾಡಿರುತ್ತಾರೆ. ದಿನಾಂಕ 1.1.2025ನೇ ಬುಧವಾರ ಬೆಳಿಗ್ಗೆ 9 ಗಂಟೆಗೆ ದಾವಣಗೆರೆ ಜೆ.ಜೆ.ಎಂ. ವೈದ್ಯಕೀಯ ಮಹಾವಿದ್ಯಾಲಯ ಇವರಿಗೆ ದೇಹವನ್ನು ವಿಧಿ-ವಿಧಾನಗಳೊಂದಿಗೆ ಹಸ್ತಾಂತರಿಸಲಾಗುವುದು.

**ದುಃಖತಪ್ತ ಕುಟುಂಬ ವರ್ಗದವರು**
ಶ್ರೀಮತಿ ಸಿದ್ದಮ್ಮ, ಸಿಎ ಲಿಂಗರಾಜ್, ರುದ್ರೇಶ್, ಕರಿಬಸಪ್ಪ

## ಕೆ.ಎಂ. ಸದಾನಂದ ನಿಧನ




ದಾವಣಗೆರೆ ತಾಲ್ಲೂಕು ಅಭಿವೃದ್ಧಿ ಮಂಡಳಿ ಮಾಜಿ ಅಧ್ಯಕ್ಷರಾದ
ದಿ|| ಎಂ. ಭರಮಪ್ಪ, ಸೀತಮ್ಮ
ಇವರ ಹಿರಿಯ ಪುತ್ರ

**ಕೆ.ಎಂ. ಸದಾನಂದ**
ಬಿ.ಎ., ಎಲ್‌ಎಲ್‌ಬಿ

ಅವರು ದಿನಾಂಕ : 31.12.2024ರ ಮಂಗಳವಾರ ನಿಧನರಾದರು. ಇಬ್ಬರು ಪುತ್ರಿಯರು, ಇಬ್ಬರು ಪುತ್ರರು, ಅಳಿಯಂದಿರು, ಸೊಸೆಯಂದಿರು, ಮೊಮ್ಮಕ್ಕಳು ಮತ್ತು ಸಹೋದರರು, ಸಹೋದರಿಯರು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ : 01.01.2025ರ ಬುಧವಾರ ಮಧ್ಯಾಹ್ನ 1.00 ಗಂಟೆಗೆ ದಾವಣಗೆರೆ ತಾಲ್ಲೂಕು ಮೃತರ ಸ್ವಗ್ರಾಮ ಕಂದಗಲ್ಲು ಗ್ರಾಮದಲ್ಲಿ ನೆರವೇರಿಸಲಾಗುವುದು.

**ದುಃಖತಪ್ತ ಕುಟುಂಬ ವರ್ಗ**
ಮೊ. : 99729 68904, 96630 30270




# ಕರ್ನಾಟಕ ರಾಜ್ಯ ಸೌಹಾರ್ದ ಸಹಕಾರ ಕಾಯ್ದೆ - ಇಂದು ಬೆಳ್ಳಿ ಹಬ್ಬದ ಸಂಭ್ರಮ

'ಒಬ್ಬನು ಎಲ್ಲರಿಗಾಗಿ, ಎಲ್ಲರೂ ಒಬ್ಬನಿಗಾಗಿ' ಎಂಬ ಮೂಲತತ್ವದ ಮೇಲೆ ಸರ್ವರ ಆರ್ಥಿಕ ಬದುಕನ್ನು ಪ್ರಜಾಸತ್ತಾತ್ಮಕ ತಳಹದಿಯ ಮೇಲೆ ಸಂಘಟಿಸಲ್ಪಟ್ಟ ಸಹಕಾರ ಚಳವಳಿಗೆ ಭಾರತದಲ್ಲಿ 120 ವರ್ಷಗಳು ಕಳೆದಿವೆ. 'ಸರ್ವರಿಗೂ ಸಮಪಾಲು ಸರ್ವರಿಗೂ ಸಮಬಾಳು' ಎಂಬ ಆಶಯದೊಂದಿಗೆ ಸಂಪತ್ತಿನ ಸಮಾನ ಹಂಚಿಕೆಯ ಮೂಲಕ ಸರ್ವರ ಆರ್ಥಿಕ ಸಬಲೀಕರಣ ಮತ್ತು ಶೋಷಣೆ ರಹಿತ ಸಮಾಜ ನಿರ್ಮಾಣದ ಸಾಧನೆಯ ಗುರಿ ಹೊಂದಿದೆ. ಭಾರತದಲ್ಲಿ ಜಾಗತೀಕರಣದ ಆರ್ಥಿಕ ನೀತಿ ಸಹಕಾರ ಚಳವಳಿಯ ಮೇಲೆ ತೀವ್ರ ಪ್ರಭಾವ ಬೀರಿತ್ತು. ಮತ್ತು ಸ್ಪರ್ಧಾತ್ಮಕ ಯುಗದಲ್ಲಿ ತನ್ನ ಮಾರುಕಟ್ಟೆಯ ಪಾಲನ್ನು ಕಳೆದುಕೊಳ್ಳುತ್ತಾ ಸಾಗಿತ್ತು.

ಸರ್ಕಾರದ ಬೆಂಬಲ, ಪೋಷಣೆ, ಪ್ರೋತ್ಸಾಹವಿಲ್ಲದೆ ಸಹಕಾರ ಚಳವಳಿ ಸ್ವತಂತ್ರವಾಗಿ ಬೆಳೆಯಲು, ಬದುಕಲು ಸಾಧ್ಯವಾಗಬೇಕೆಂಬ ವಾತಾವರಣ ನಿರ್ಮಾಣವಾಗಿತ್ತು. ಇದರ ಪರಿಣಾಮವಾಗಿ 'ಮಾಡು ಇಲ್ಲವೇ ಮಡಿ' ಎಂಬ ಚಿಂತನೆಯ ಪ್ರತಿಫಲವಾಗಿ ಕರ್ನಾಟಕದಲ್ಲಿ ಸೌಹಾರ್ದ ಸಹಕಾರ ಚಳವಳಿ ಜನ್ಮ ತಾಳಿತು. ಸ್ವಾತಂತ್ರ್ಯದ ನಂತರ ಪಂಚವಾರ್ಷಿಕ ಯೋಜನೆಗಳ ಮೂಲಕ ಸಹಕಾರ ಕ್ಷೇತ್ರಕ್ಕೆ ಆರ್ಥಿಕ ಸಹಾಯ ನೀಡಿದರೂ ನಿರೀಕ್ಷಿತ ಯಶಸ್ಸು ದೊರೆಯಲಿಲ್ಲ.

ನಂತರ ಶೇರು ಬಂಡವಾಳ ನೀಡಿಕೆ, ಸುಲಭ ಸಾಲ ಸೌಲಭ್ಯ, ಸಬ್ಸಿಡಿ ಸಾಲಕ್ಕೆ ಖಾತ್ರಿ, ಈ ರೀತಿಯಲ್ಲಿ ಸರ್ಕಾರ ಬೆಂಬಲವಾಗಿ ನಿಂತಿತು. ಸಹಕಾರ ಚಳವಳಿ ಸರ್ಕಾರ ಅವಲಂಬಿತ ಚಳವಳಿ ಆಯಿತು ಇದಕ್ಕೆ ಪೂರಕವಾಗಿ ಸಹಕಾರ ಕಾಯ್ದೆಯಲ್ಲಿ ಸರ್ಕಾರ ಕೂಡ ಬಂಡವಾಳದಲ್ಲಿ ಪಾಲ್ಗೊಳ್ಳುವಿಕೆಗೆ ಅವಕಾಶ ಕಲ್ಪಿಸಲಾಯಿತು.


ಜೊತೆಗೆ ನಿಯಂತ್ರಣಗಳು, ಚುನಾಯಿತ ಆಡಳಿತ ಮಂಡಳಿಯ ಮೇಲೆ ಕ್ರಮಗಳು, ರದ್ದತಿ, ನಾಮನಿರ್ದೇಶನ, ಚುನಾವಣೆ ಒಳಗೊಂಡಂತೆ ವಾರ್ಷಿಕ ಸಭೆಗಳ ಮುಂದೂಡಿಕೆ ಸರ್ಕಾರಕ್ಕೆ ಮತ್ತು ನಿಬಂಧಕರಿಗೆ ನಿರ್ದೇಶನಗಳನ್ನು ನೀಡುವ ಅವಕಾಶಗಳಿದ್ದವು.

ಇವೆಲ್ಲವುಗಳು ಪ್ರಜಾಸತ್ತಾತ್ಮಕ ನಿಯಂತ್ರಣ ಸಂಸ್ಥೆಗಳಿಗೆ ಮಾರಕವಾಗಿಯೋ ಅತಿಯಾದ ಸರ್ಕಾರದ ಹಸ್ತಕ್ಷೇಪ ಎಂದು ಪರಿಗಣಿಸುವುದರ ಜೊತೆಗೆ ಇವುಗಳನ್ನು ಕ್ರೂರ ಕಾನೂನುಗಳು ಎಂದೇ ಪರಿಗಣಿಸಲಾಯಿತು. ಇದರಿಂದಾಗಿ ಸಹಕಾರದ ಸ್ವಾಯತ್ತತೆ ಮತ್ತು ಸ್ವಾತಂತ್ರ್ಯಕ್ಕೆ ಧಕ್ಕೆ ಆಗುತ್ತಿತ್ತು ಹಾಗೂ ಸಹಕಾರ ಚಳವಳಿ ಬೆಳವಣಿಗೆಗೆ ಮಾರಕವಾಗುವುದು ಕಂಡುಬಂದಿತು.

ಈ ಹಿನ್ನೆಲೆಯಲ್ಲಿ ಅಧ್ಯಯನ ನಡೆಸಲು ಕೇಂದ್ರ ಸರ್ಕಾರವು 1987ರಲ್ಲಿ ಶ್ರೀ ಅರ್ಧನಾರೀಶ್ವರನ್ ರವರ ಅಧ್ಯಕ್ಷತೆಯಲ್ಲಿ ಸಮಿತಿಯನ್ನು ರಚಿಸಿತು. ಈ ಸಮಿತಿ ತನ್ನ ವರದಿಯಲ್ಲಿ 'ಸರ್ಕಾರದ ಅತಿಯಾದ ಹಸ್ತಕ್ಷೇಪದಿಂದಾಗಿ ದೇಶದಲ್ಲಿ ಸಹಕಾರಿ ಚಳವಳಿ ವಿಫಲ'ವಾಗಿದೆ ಎಂದು ತಿಳಿಸಿತು.

ಸಹಕಾರ ಚಳುವಳಿ ವಿಫಲವಾದರೂ ಸಹ ಜನಸಾಮಾನ್ಯರು ತಮ್ಮ ಆರ್ಥಿಕ ಏಳಿಗೆಗಾಗಿ ತಾವೇ ಸ್ವಯಂ ಸ್ಫೂರ್ತಿಯಿಂದ ಭಾಗವಹಿಸುವ ಮೂಲಕ ಈ ಚಳವಳಿಯನ್ನು ಯಶಸ್ವಿಗೊಳಿಸುವ ಅಗತ್ಯತೆಯನ್ನು ಗುರುತಿಸಿದ ಕೇಂದ್ರ ಯೋಜನಾ ಆಯೋಗವು ಸರ್ಕಾರದ ಹಸ್ತ ಕ್ಷೇಪವನ್ನು ತಡೆಯಬಲ್ಲ, ಸದಸ್ಯರಿಗೆ ಹೆಚ್ಚು ಅಧಿಕಾರ ನೀಡುವ ಹಾಗೂ ಅವರ ಸಹಭಾಗಿತ್ವ ಹೆಚ್ಚಿಸುವ, ಸಹಕಾರಿ ಸಂಸ್ಥೆಗಳಿಗೆ ಮುಕ್ತ ವಾತಾವರಣ ನಿರ್ಮಿಸುವಂತಹ ಮಾದರಿ ಸಹಕಾರಿ ಕಾಯ್ದೆಯನ್ನು ರೂಪಿಸಲು ಚೌದರಿ ಬ್ರಹ್ಮ ಪ್ರಕಾಶರ ನೇತೃತ್ವದಲ್ಲಿ ಮತ್ತೊಂದು ಸಮಿತಿ ರಚಿಸಿತು.

ಈ ಸಮಿತಿ 1991ರಲ್ಲಿ ವಿವಿಧ ರಾಜ್ಯಗಳಲ್ಲಿ ಪ್ರಸ್ತುತ ಜಾರಿಯಲ್ಲಿರುವ ಸಹಕಾರಿ ಕಾಯ್ದೆಗಳ ಬಗ್ಗೆ ಅಧ್ಯಯನ ಮಾಡಿ ಆಯೋಗದವರು ಸರ್ಕಾರದ ಕನಿಷ್ಠ ಪಾತ್ರವಿರುವ ಮಾದರಿ





ಕಾಯ್ದೆಯನ್ನು ರೂಪಿಸಿ, ದೇಶದ ಎಲ್ಲಾ ರಾಜ್ಯಗಳಿಗೆ ಕಳಿಸಲಾಯಿತು. ಇದಕ್ಕೆ ಸ್ವಾಯತ್ತ ಕಾಯಿದೆ (ಲಿಬರಲ್ ಕಾಯಿದೆ) ಎಂದು ಹೆಸರಿಸಲಾಯಿತು. ಈ ಕಾಯ್ದೆಯ ಅನುಷ್ಠಾನವೇ ಕರ್ನಾಟಕ ಸೌಹಾರ್ದ ಸಹಕಾರಿ ಕಾಯ್ದೆ 1997 ಕರ್ನಾಟಕದಲ್ಲಿ ಸೌಹಾರ್ದ ಕಾಯಿದೆ 1 ಜನವರಿ 2001 ರಂದು ಜಾರಿಗೆ ಬಂದಿತು. ಇದರ ಜ್ಞಾಪಕಾರ್ಥವಾಗಿ ಜನವರಿ ಒಂದರಂದು ರಾಜ್ಯಾದ್ಯಂತ ಸೌಹಾರ್ದ ಸಹಕಾರಿ ದಿನವನ್ನಾಗಿ ಆಚರಿಸಲಾಗುತ್ತದೆ.

ಜನವರಿ 1, 2025ಕ್ಕೆ ಬೆಳ್ಳಿ ಹಬ್ಬದ ಸಂಭ್ರಮಾಚರಣೆಯನ್ನು ಆಚರಿಸಿಕೊಳ್ಳುತ್ತಾ ಇದೆ. ಈ ಸಂದರ್ಭದಲ್ಲಿ ಸೌಹಾರ್ದ ಸಹಕಾರಿಗಳು ಸಮಾಜದಲ್ಲಿ ತಮ್ಮನ್ನು ಗುರುತಿಸಿಕೊಳ್ಳುವ ತಮ್ಮ ಅಸ್ತಿತ್ವದ ಬಗ್ಗೆ ಅರಿವು ಮೂಡಿಸಬೇಕು. ಸೌಹಾರ್ದ ಸಹಕಾರಿಗಳು ಉತ್ತಮ ಆರ್ಥಿಕ ಸಂಘಟನೆಗಳು ಎಂದು ನಿರೂಪಿಸಬೇಕು.

ಸೌಹಾರ್ದ ಸಹಕಾರಿ ಕ್ಷೇತ್ರದ ಬೆಳವಣಿಗೆಗೆ ಶಾಸನಬದ್ಧ ಮಾರ್ಗದರ್ಶನಗಳ ಜೊತೆಗೆ ಅಭಿವೃದ್ಧಿಗೆ ಅವಶ್ಯಕವಿರುವ ಶಿಕ್ಷಣ ತರಬೇತಿ ಪ್ರಚಾರ ಕಾರ್ಯಗಳನ್ನು ಪರಿಣಾಮಕಾರಿಯಾಗಿ ಜರುಗುತ್ತಿರುವುದು ಶ್ಲಾಘನೀಯ. ಕರ್ನಾಟಕ ರಾಜ್ಯ ಸೌಹಾರ್ದ ಸಹಕಾರಿಯು ಸೌಹಾರ್ದ ಸಹಕಾರಿಗಳ ಮೇಲ್ವಿಚಾರಣೆ ಉಸ್ತುವಾರಿ ಹಾಗೂ ನಿಯಂತ್ರಣದ ಜವಾಬ್ದಾರಿ ನಿರ್ವಹಿಸುವ ಶಾಸನಬದ್ಧವಾಗಿ ರಚನೆಗೊಂಡು ಸದಸ್ಯ ಸಹಕಾರಿಗಳಿಂದಲೇ ಆಯ್ಕೆಯಾಗಿರುವ ಆಡಳಿತ ಮಂಡಳಿಯನ್ನು ಹೊಂದಿ ಕಾರ್ಯನಿರ್ವಹಿಸುತ್ತಿರುವ ದೇಶದ ಪ್ರಥಮ ಮಾದರಿ ಸಹಕಾರಿ ಸಂಸ್ಥೆಯಾಗಿದೆ.

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯೂ ತನ್ನದೇ ಆದ ಧ್ಯೇಯ, ದೃಷ್ಟಿ ಹಾಗೂ ಮೌಲ್ಯಗಳನ್ನು ಹೊಂದಿದೆ.

**ಧ್ಯೇಯ** : ಸ್ವಾಯತ್ತತೆ, ಸ್ವಯಂ ಆಡಳಿತ, ಸ್ವಯಂ ನಿಯಂತ್ರಣದ ಜೊತೆಗೆ ವೃತ್ತಿಪರ ಪಾರದರ್ಶಕ ಹಾಗೂ ಉತ್ತರದಾಯಿತ್ವದ ಸೌಹಾರ್ದ ಸಹಕಾರಿ ನಿರ್ಮಾಣ.

**ದೃಷ್ಟಿ**: ಸ್ವಾಯತ್ತ, ಸಾಮಾಜಿಕ ಬದ್ಧತೆ, ಸಕಾರಾತ್ಮಕ ಚಿಂತನೆ, ಅಭಿವೃದ್ಧಿಪರ ವಿಶ್ವ ಮಾದರಿ ಸಹಕಾರಿ ಸಂಸ್ಥೆಗಳಾಗಿ ಕಾರ್ಯನಿರ್ವಹಿಸುವುದು.

**ಮೌಲ್ಯಗಳು** : ಜ್ಞಾನ, ಸೇವೆ, ಬದ್ಧತೆ, ಭಾಗವಹಿಸುವಿಕೆ ಉತ್ತರದಾಯಿತ್ವ.

ಕರ್ನಾಟಕ ರಾಜ್ಯ ಸೌಹಾರ್ದ ಸಹಕಾರಿ ಕಾಯ್ದೆ ಇಡೀ ರಾಜ್ಯದಲ್ಲಿ 31.3.2024ಕ್ಕೆ ಒಟ್ಟು 6259 ಸೌಹಾರ್ದ ಸಹಕಾರಿ ಸಂಘಗಳಿದ್ದು, 43,704 ಕೋಟಿ ಠೇವಣಿ, ದುಡಿಯುವ ಬಂಡವಾಳ 49,396 ಕೋಟಿ, ಲಾಭ 626 ಕೋಟಿ, ಉದ್ಯೋಗದಲ್ಲಿರುವವರು 75,000, 1631 ಸೌಹಾರ್ದ ಸಹಕಾರ ಸಂಘಗಳು ಈ ಸ್ಟ್ಯಾಂಪಿಂಗ್ ಕೇಂದ್ರಗಳನ್ನು ಹೊಂದಿವೆ. ದಾವಣಗೆರೆ ಜಿಲ್ಲೆಯಲ್ಲಿ 96 ಸೌಹಾರ್ದ ಸಹಕಾರ ಸಂಘಗಳು ಇದ್ದು, ಇದರಲ್ಲಿ 30 ಸಂಘಗಳು ನಿಷ್ಕ್ರಿಯೆಗೊಂಡಿವೆ. ಸೌಹಾರ್ದ ಸಹಕಾರ ಸಂಘಗಳು ಉತ್ತಮವಾಗಿ ಕಾರ್ಯ ನಿರ್ವಹಿಸುತ್ತಿದ್ದು, ವಿಶೇಷವೆಂದರೆ ಯುವಕರು ಮತ್ತು ಮಹಿಳೆಯರು ಈ ಕ್ಷೇತ್ರದಲ್ಲಿ ಹೆಚ್ಚಾಗಿ ತೊಡಗಿಸಿಕೊಳ್ಳುತ್ತಿರುವುದರಿಂದ 'ಯುವ ಪೀಳಿಗೆಯ ನವ ಸಹಕಾರಿ ಸಂಸ್ಥೆ'ಗಳೆಂದು ಈ ಕ್ಷೇತ್ರವನ್ನು ಗುರುತಿಸಲಾಗುತ್ತದೆ. 2012ರಲ್ಲಿ ದೇಶದ 97ನೇ ಸಂವಿಧಾನ ತಿದ್ದುಪಡಿಯಿಂದಾಗಿ ಸಹಕಾರ ಕ್ಷೇತ್ರಕ್ಕೆ ಮಾನ್ಯತೆ ನೀಡಿ ಸಹಕಾರಿಯ ಆಡಳಿತ ಹಾಗೂ ವ್ಯವಹಾರಿಕ ಸ್ವಾತಂತ್ರ್ಯವನ್ನು ನೀಡಿ ಸಹಕಾರಿಗಳಿಗೆ ಸಂತೋಷವನ್ನುಂಟು ಮಾಡಿದೆ.

ಕೇಂದ್ರ ಸರ್ಕಾರ 'ಸಹಕಾರದಿಂದ ಸಮೃದ್ಧಿ' ಎಂಬ ದೃಷ್ಟಿಕೋನದ ಮೂಲಕ ಸಹಕಾರಿ ಸಂಸ್ಥೆಗಳನ್ನು ಪುನರುಜ್ಜೀವನಗೊಳಿಸಲು ಹಾಗೂ ಸಹಕಾರಿ ಕ್ಷೇತ್ರಗಳಲ್ಲಿ ಪಾರದರ್ಶಕತೆ, ಆಧುನೀಕರಣ, ಗಣಕೀಕರಣ ವ್ಯವಸ್ಥೆಯನ್ನು ಅಳವಡಿಸಿಕೊಂಡು ವಿಕಸಿತ ಭಾರತ ನಿರ್ಮಾಣದಲ್ಲಿ ಸಹಕಾರ ಸಂಸ್ಥೆಗಳ ಪಾತ್ರವನ್ನು ಹೆಚ್ಚಿಸಲು ಜುಲೈ 6, 2021 ರಂದು ಕೇಂದ್ರ ಸರ್ಕಾರ ಕೃಷಿ ಇಲಾಖೆಯಿಂದ ಸಹಕಾರ ಕ್ಷೇತ್ರವನ್ನು ಪ್ರತ್ಯೇಕಗೊಳಿಸಿ, ಪ್ರತ್ಯೇಕ ಸಚಿವಾಲಯವನ್ನು ಸ್ಥಾಪಿಸಿ, ಕಾಲಕ್ಕೆ ತಕ್ಕಂತೆ ಸಾಕಷ್ಟು ಕ್ರಮಗಳನ್ನು ಕೈಗೊಂಡಿದೆ. ದೆಹಲಿಯಲ್ಲಿ ದಿನಾಂಕ 25.11.2024 ರಿಂದ 29.11.2024ವರೆಗೆ ಐಸಿಎ ಏರ್ಪಡಿಸಿದ್ದ ಜಾಗತಿಕ ಸಹಕಾರ ಸಮ್ಮೇಳನ ಮತ್ತು ವಿಶ್ವಸಂಸ್ಥೆ ಸಹಕಾರ ಸಂಸ್ಥೆಗಳು ಉತ್ತಮ ರಾಷ್ಟ್ರವನ್ನು ನಿರ್ಮಾಣ ಮಾಡಬಲ್ಲವು ಎಂಬ ದೃಢ ಸಂಕಲ್ಪದಿಂದ 2025 ವರ್ಷವನ್ನು ಅಂತರರಾಷ್ಟ್ರೀಯ ಸಹಕಾರ ವರ್ಷವೆಂದು ಘೋಷಿಸಿರುವುದು ಸಹಕಾರ ಕ್ಷೇತ್ರ ಪ್ರಾಮುಖ್ಯತೆ ಮತ್ತು ಜವಾಬ್ದಾರಿಯನ್ನು ಹೆಚ್ಚಿಸಿದೆ.

ಸಂಕ್ಷಿಪ್ತವಾಗಿ ಹೇಳುವುದಾದರೆ ಸಹಕಾರ ಚಳವಳಿಯು ಸುದೀರ್ಘ ಮತ್ತು ವೈವಿಧ್ಯಮಯ ಇತಿಹಾಸ ಹೊಂದಿದ್ದು, ಗಮನಾರ್ಹ ಸಾಧನೆಗಳು ಮತ್ತು ಸವಾಲುಗಳಿಂದ ಗುರುತಿಸಲ್ಪಟ್ಟಿದೆ. ಇದು ಸಾಮಾಜಿಕ ಆರ್ಥಿಕ ಅಭಿವೃದ್ಧಿಯ ಭಾಗವಾಗಿ ಉಳಿದಿದೆಯಲ್ಲದೆ ಭವಿಷ್ಯದ ಭರವಸೆಯಂತೆ ಕಾಣುತ್ತಿದೆ.



**- ಡಾ. ಹೆಚ್.ಎಸ್. ಮಂಜುನಾಥ ಕುರ್ಕಿ.**


**ಬೇಕಾಗಿದ್ದಾರೆ**
ರಾತ್ರಿ ಶಿಫ್ಟ್‌ನಲ್ಲಿ ಕೆಲಸ ಮಾಡಲು ಕಂಪ್ಯೂಟರ್ ಆಪರೇಟರ್ ಬೇಕಾಗಿದ್ದಾರೆ
ಖುದ್ದಾಗಿ ಜನತಾವಾಣಿ ಕಚೇರಿಯನ್ನು ಬೆಳಿಗ್ಗೆ 12 ರಿಂದ ಸಂಜೆ 5 ಗಂಟೆಯ ಒಳಗೆ ಸಂಪರ್ಕಿಸಿ

**ಸೈಟುಗಳು, ಮನೆಗಳು ಮಾರಾಟಕ್ಕಿವೆ**
ಬನಶಂಕರಿ ಲೇಔಟ್, ಶಿವ-ಪಾರ್ವತಿ ಲೇಔಟ್, ಡಾಲರ್ಸ್ ಕಾಲೋನಿ, ಎಸ್.ಎಸ್. ಲೇಔಟ್, ವಿದ್ಯಾನಗರ, ಗ್ಲಾಸ್ ಹೌಸ್ ಲೇಔಟ್ ಹಾಗೂ ಕುಂದುವಾಡ, ಯರಗುಂಟೆಯಲ್ಲಿ ಇನ್‌ವೆಸ್ಟ್‌ಮೆಂಟ್ ಸೈಟುಗಳು, ಮನೆಗಳು & ಕಮರ್ಷಿಯಲ್ ಸೈಟ್ ಯೋಗ್ಯ ಬೆಲೆಯಲ್ಲಿ ದೊರೆಯುತ್ತವೆ. 30x40, 40x60, 30x50.
97315 12365

**ಬಾಡಿಗೆಗೆ ಇದೆ**
ಪುಷ್ಪಾಂಜಲಿ ಟಾಕೀಸ್ ರೋಡ್ ರೈಲ್ವೆ ಟ್ರ್ಯಾಕ್ ಪಕ್ಕ ಉತ್ತಾರಭಿಮುಖವಾಗಿ 16x3 ಮಳಿಗೆ. 1 ಮಳಿಗೆ 32x36 ಪೂರ್ವಾಭಿಮುಖ L ಶೇಪ್ ಕಾರ್ನರ್, ಲೋಡಿಂಗ್ ಮತ್ತು ಅನ್‌ಲೋಡಿಂಗ್ ಪಾರ್ಕಿಂಗ್ ಇರುತ್ತದೆ. ಪ್ಲೈವುಡ್ ಶಾಪ್, ಹಗ್ಗದ ಅಂಗಡಿ, ಬಳೆ ಶಾಪ್, ಪೈಪ್ ಅಂಗಡಿ, ಫಸ್ಟ್ ಫ್ಲೋರ್ 80x36 ಅಳತೆಯ ಲಿಫ್ಟ್ ವ್ಯವಸ್ಥೆರಯವ ಬಾತ್ ರೂಂ ವ್ಯವಸ್ಥೆ ಇರುತ್ತದೆ. ಹಾಸ್ಪಿಟಲ್ ಮತ್ತು ಸ್ಕೂಲ್ ಯೋಗ್ಯವಾಗಿದೆ.
99451 59582, 99451 99770

**ಗ್ಯಾಸ್ ಗೀಸರ್ ರಿಪೇರಿ**
ನಮ್ಮಲ್ಲಿ ಎಲ್ಲಾ ತರಹದ ಗ್ಯಾಸ್ ಗೀಸರ್‌ಗಳ ರಿಪೇರಿ ಹಾಗೂ ಮಾರಾಟ ಮಾಡಲಾಗುತ್ತದೆ.
ರತ್ನ ಮಾರ್ಕೆಟಿಂಗ್, ವಿದ್ಯಾನಗರ
99019 40727

**ಬೇಕಾಗಿದ್ದಾರೆ**
ನಂದಿನಿ ಹೋಟೆಲ್‌ನಲ್ಲಿ ಪಾತ್ರೆ ತೊಳೆಯಲು ಮಹಿಳೆಯರು ಬೇಕಾಗಿದ್ದಾರೆ. ಅಡುಗೆ ಮಾಡಲು ಪುರುಷ ಭಟ್ಟರು ಬೇಕಾಗಿದ್ದಾರೆ. ನಮ್ಮ ಹೋಟೆಲ್‌ನಲ್ಲಿ ಪ್ರತಿ ದಿನ ಹೋಳಿಗೆ ಸಿಗುತ್ತದೆ. ಸ್ಥಳ : ಶಕ್ತಿ ನಗರ ದಾವಣಗೆರೆ, ಜೀನಿಯಸ್ ಸ್ಕೂಲ್ ಪಕ್ಕ.
93835 32186

**ಸೇಲ್ಸ್ ಗರ್ಲ್ಸ್/ಸೇಲ್ಸ್ ಬಾಯ್ಸ್ ಬೇಕಾಗಿದ್ದಾರೆ**
ಗಾರ್ಮೆಂಟ್ಸ್ ಶಾಪ್‌ನಲ್ಲಿ ಕೆಲಸ ಮಾಡಲು ಬೇಕಾಗಿದ್ದಾರೆ
ಕಾವ್ಯಾಂಜಲಿ, ದಾವಣಗೆರೆ.
98445 52400

**ಮಾರಾಟಕ್ಕಿವೆ**
400 ಅಡಿಗಳಷ್ಟು ಅಲ್ಯುಮಿನಿಯಂ, ಗ್ಲಾಸ್ ಪಾರ್ಟಿಷಿಯನ್ ಮತ್ತು ಗ್ಲಾಸ್ ಡೋರ್‌ಗಳು ಮಾರಾಟಕ್ಕಿವೆ ಸಂಪರ್ಕಿಸಿ.
ಅಂದನೂರು ಚಿಟ್ಸ್
ರಾಮ್ & ಕೋ ಹತ್ತಿರ, ದಾವಣಗೆರೆ.

**ಶ್ರೀ ಅಂಜನಾದ್ರಿ ಜ್ಯೋತಿಷ್ಯ ಕೇಂದ್ರ**
ಕನ್ನಡ, ತೆಲುಗು, ಹಿಂದಿ ಭಾಷೆಗಳಲ್ಲಿ ಭವಿಷ್ಯ ಮತ್ತು ಸ್ತ್ರೀ-ಪುರುಷ ಎಲ್ಲಾ ಸಮಸ್ಯೆಗಳಿಗೆ ಪರಿಹಾರ ಹೇಳುತ್ತಾರೆ.
ಪಂಡಿತ್ ಶ್ರೀ ಲಕ್ಷ್ಮಿಕಾಂತ್ ಗುರೂಜಿ (ಆಂಧ್ರಪ್ರದೇಶ), ಲಾಯರ್ ರಸ್ತೆ, ದಾವಣಗೆರೆ.
9740064163

**WANTED**
* Marketing Executive
* Accountant
* godown Incharge
63620 23451, 97434 37003

**ಬೇಕಾಗಿದ್ದಾರೆ**
ಹೊಸದಾಗಿ ಪ್ರಾರಂಭವಾಗುತ್ತಿರುವ ಹೋಂ ಅಪ್ಲೈಯನ್ಸಸ್ ಶಾಪ್‌ಗೆ ಕೆಲಸ ಮಾಡಲು
* ಸೇಲ್ಸ್ ಗರ್ಲ್ಸ್ & ಬಾಯ್ಸ್
* ಅಕೌಂಟ್ಸ್ * ಟೆಲಿಕಾಲರ್ಸ್
ಅನುಭವವುಳ್ಳವರಿಗೆ ಪ್ರಥಮ ಆದ್ಯತೆ
ಸ್ಥಳ : ಹರಿಹರ.
77603 10603
99648 75861

**ಮದ್ಯವ್ಯಸನಿಗೆ ಅರಿವಿಲ್ಲದಂತೆ ಮದ್ಯ ಸೇವನೆ ಬಿಡಿಸಿರಿ**
ಪ್ರತಿ ತಿಂಗಳು 7ಮತ್ತು 21ನೇ ತಾರೀಖು ಜನತಾ ಡೀಲಕ್ಸ್ ಲಾಡ್ಜ್, KSRTC ಹೊಸ ಬಸ್ ಸ್ಟ್ಯಾಂಡ್ ಎದುರು, ದಾವಣಗೆರೆ.
4 ಮತ್ತು 18 ರಂದು ಕಾವೇರಿ ಲಾಡ್ಜ್, ಪೂನಾ - ಬೆಂಗಳೂರು ರೋಡ್, ಹಾವೇರಿ.
ಅಸ್ತಮಾ, ಕೀಲು ನೋವು
ಡಾ|| ಎಸ್.ಎಂ. ಸೇಠಿ. ಫೋ. : 96322 95561
ಸಮಯ: ಬೆಳಿಗ್ಗೆ 10 ರಿಂದ ಮಧ್ಯಾಹ್ನ 2 ರವರೆಗೆ

**ಕೆಲಸಕ್ಕೆ ಬೇಕಾಗಿದ್ದಾರೆ**
ಚಿಕಿತ್ಸಾ ಸಹಾಯಕರಾಗಿ 10th ಪಾಸ್ ಆದ ಪುರುಷರು ಕೆಲಸಕ್ಕೆ ಬೇಕಾಗಿದ್ದಾರೆ. ವಯೋಮಿತಿ 18-22 ವರ್ಷದೊಳಗೆ
ಅಶ್ವತ್ಥ ಆಯುರ್ವೇದ ಚಿಕಿತ್ಸಾಲಯ
SS ಲೇಔಟ್, ಎ ಬ್ಲಾಕ್, 10ನೇ ಕ್ರಾಸ್, ಅಥಣಿ ಕಾಲೇಜ್ ರೋಡ್, ದಾವಣಗೆರೆ.
88612 52768

**ಕಮರ್ಷಿಯಲ್ ಇಂಡಸ್ಟ್ರಿಯಲ್ ಸೈಟು ಮಾರಾಟಕ್ಕಿದೆ**
ದಾವಣಗೆರೆ ಪಿ.ಬಿ. ರಸ್ತೆ ಮತ್ತು ಸಬ್ ರಿಜಿಸ್ಟ್ರರ್ ಆಫೀಸ್‌ನಿಂದ 150 ಅಡಿ ದೂರದಲ್ಲಿ 40 ಅಡಿ ರಸ್ತೆಗೆ ಪೂರ್ವ ಮುಖಕ್ಕೆ ಇರುವ 20000 ಅಡಿ ಹಾಲಿ ಬಾಡಿಗೆ ಬರುತ್ತಿರುವ ಏಕ ನಿವೇಶನ ಇ-ಖಾತಾ ಡೋ.ನಂ. ಇರುವ ಸೈಟು ಮಾರಾಟಕ್ಕಿದೆ. ಸಂಪರ್ಕಿಸಿ : ಹೇಮಂತ್
94481 80019
78998 72391

**ಸಾಲಗಳಿಗಾಗಿ ಸಂಪರ್ಕಿಸಿ**
ಮನೆ ಕಟ್ಟಲು, ಮನೆ ಖರೀದಿ, ಸೈಟ್ ಖರೀದಿ ಮತ್ತು ಮನೆ ಕಟ್ಟಲು ಫೈನಾನ್ಸ್ ಕಂಪನಿಯಲ್ಲಿರುವ ಸಾಲ ವರ್ಗಾವಣೆ ಮತ್ತು ಅಧಿಕ ಸಾಲ ಅತೀ ಕಡಿಮೆ ಬಡ್ಡಿದರದಲ್ಲಿ ಸಾಲ ವರ್ಗಾವಣೆ ಮಾಡಿಕೊಡಲಾಗುವುದು.
73385 80345, 99455 22287

**BOYS REQUIRED**
Rs 15000 per month
CLEANING WORK
96202 83870
94488 86026, 94495 80761


## ರಮೇಶ್ ಸೋಲಾರ್ ನಿಧನ



ದಾವಣಗೆರೆ ವಿನೋಬನಗರ 1ನೇ ಮೇನ್, 17ನೇ ಕ್ರಾಸ್, ವಿಷ್ಣು ಕಾಲೋನಿ ವಾಸಿ ರಮೇಶ್ ಸೋಲಾರ್ (54) ಇವರು ದಿನಾಂಕ ಮಂಗಳವಾರ ಸಂಜೆ 4ಕ್ಕೆ ನಿಧನರಾದರು. ತಾಯಿ, ಪತ್ನಿ ಇಬ್ಬರು ಪುತ್ರರು ಹಾಗೂ ಅಪಾರ ಬಂಧು ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 1.1.2025ರ ಬುಧವಾರ ಮಧ್ಯಾಹ್ನ 1 ಗಂಟೆಗೆ ಗಾಂಧಿನಗರದ ಸಾರ್ವಜನಿಕ ರುದ್ರಭೂಮಿಯುಲ್ಲಿ ನೆರವೇರಲಿದೆ.

ರಕ್ತ ದಾನ ಶ್ರೇಷ್ಠ ದಾನ

## ಭಾವಪೂರ್ಣ ಶ್ರದ್ಧಾಂಜಲಿ



ದಿನಾಂಕ 31.12.2024ರ ಮಂಗಳವಾರ ನಿಧನರಾದ ಕಾಂಗ್ರೆಸ್ ಪಕ್ಷದ ಹಿರಿಯ ಕಾರ್ಯಕರ್ತ

**ರಮೇಶ್ ಸೋಲಾರ್**

ಇವರಿಗೆ ನಮ್ಮೆಲ್ಲರ ಭಾವಪೂರ್ಣ ಶ್ರದ್ಧಾಂಜಲಿ. ಮೃತರ ಆತ್ಮಕ್ಕೆ ಚಿರಶಾಂತಿ ನೀಡಲಿ ಹಾಗೂ ಭಗವಂತನು ಮೃತರ ಕುಟುಂಬ ವರ್ಗಕ್ಕೆ ದುಃಖವನ್ನು ಭರಿಸುವ ಶಕ್ತಿಯನ್ನು ದಯಪಾಲಿಸಲೆಂದು ಪ್ರಾರ್ಥಿಸುವ..

**ಎಸ್. ಎಸ್. ಮಲ್ಲಿಕಾರ್ಜುನ್,**
ಗಣಿ, ಭೂ ಮತ್ತು ವಿಜ್ಞಾನ ಇಲಾಖೆ ಹಾಗೂ ತೋಟಗಾರಿಕೆ ಸಚಿವರು
**ಡಾ. ಶಾಮನೂರು ಶಿವಶಂಕರಪ್ಪ,** ಶಾಸಕರು, ದಕ್ಷಿಣ ವಿಧಾನಸಭಾ ಕ್ಷೇತ್ರ
**ಡಾ. ಪ್ರಭಾ ಮಲ್ಲಿಕಾರ್ಜುನ್,** ದಾವಣಗೆರೆ ಲೋಕಸಭಾ ಸದಸ್ಯರು
**ಸಮರ್ಥ್ ಶಾಮನೂರು,** ಯುವ ಉದ್ಯಮಿಗಳು
**ಎ. ನಾಗರಾಜ್,** ಮಹಾನಗರ ಪಾಲಿಕೆ ಸದಸ್ಯರು,
**ದಿನೇಶ್ ಕೆ. ಶೆಟ್ಟಿ,** ಅಧ್ಯಕ್ಷರು, ದಾವಣಗೆರೆ-ಹರಿಹರ ಅಭಿವೃದ್ಧಿ ಪ್ರಾಧಿಕಾರ.
**ಚಮನ್ ಸಾಬ್** ಮಹಾಪೌರರು, ಮಹಾನಗರ ಪಾಲಿಕೆ ದಾವಣಗೆರೆ.
**ಶ್ರೀಮತಿ ರೇಖಾ ನಾಗರಾಜ್,**
**ಸುರೇಶ್** ಉತ್ತಂಗಿ, ವಿನೋಬನಗರ 16ನೇ ವಾರ್ಡ್ ಅಧ್ಯಕ್ಷರು
**ಸಮಸ್ತ ವಿನೋಬನಗರದ ಆತ್ಮೀಯ ಬಳಗ.**

# ಶಿಕ್ಷಣದ ಜೊತೆ ಸಂಸ್ಕೃತಿ, ಸಂಸ್ಕಾರ, ಮಾನವೀಯ ಮೌಲ್ಯ ಬೆಳೆಸಬೇಕು

**(1ನೇ ಪುಟದಿಂದ)** ಕೇಳುವ ಮನುಷ್ಯ ಜೀವಿಗೆ ಜೀವನದಲ್ಲಿ ಶ್ರೇಷ್ಠತೆ ಬರುತ್ತದೆ. ತಾವು ಮಾಡಿಕೊಂಡ ಸಂಕಲ್ಪ ಈಡೇರುತ್ತದೆ ಎಂಬುದನ್ನು ಉದಾಹರಣೆ ಸಹಿತ ವಿವರಿಸಿದರು.

ಕಾರ್ಯಕ್ರಮದ ಸಾನ್ನಿಧ್ಯ ವಹಿಸಿದ್ದ ಹೆಬ್ಬಾಳು ವಿರಕ್ತ ಮಠದ ಶ್ರೀ ಮಹಾಂತ ರುದ್ರೇಶ್ವರ ಸ್ವಾಮೀಜಿ ಆಶೀರ್ವಚನ ನೀಡಿ, ಪ್ರತಿಯೊಬ್ಬ ಮನುಷ್ಯ ಕೂಡ ಧರ್ಮದ ತಳಹದಿಯ ಮೇಲೆ ಜೀವನ ಸಾಗಿಸಬೇಕು. ಧರ್ಮ ಮನುಷ್ಯನಿಗೆ ಸಂಸ್ಕಾರವನ್ನು ಕಲಿಸುತ್ತದೆ. ಸಾಮಾಜಿಕ ಚಿಂತನೆಯನ್ನು ಬೆಳೆಸುತ್ತದೆ ಎಂದರು.

ಸಮಾಜದಲ್ಲಿ ವಿದ್ಯಾವಂತ ಜನರೇ ಹೆಚ್ಚು ಮೋಸ, ವಂಚನೆಗೆ ಬಲಿಯಾಗುತ್ತಿದ್ದಾರೆ. ದುಶ್ಚಟಗಳ ದಾಸರಾಗುವುದಲ್ಲದೇ, ತಂದೆ-ತಾಯಿಗಳನ್ನು ವೃದ್ಧಾಶ್ರಮಕ್ಕೆ ಸೇರಿಸುವಂತಹ ಮಕ್ಕಳನ್ನೂ ಸಹ ನಾವು ಕಾಣುತ್ತೇವೆ. ಮಕ್ಕಳಿಗೆ ಸಂಸ್ಕಾರ ಕೊಟ್ಟರೆ ತಂದೆ-ತಾಯಿಗಳ ರಕ್ಷಣೆ ಮಾಡುತ್ತಾರೆ. ಆದ್ದರಿಂದ ಅಧ್ಯಾತ್ಮದ ಬದುಕು ನಿಮ್ಮದಾಗಬೇಕೆಂದು ಕರೆ ನೀಡಿದರು.

ಡಿವೈಎಸ್ಪಿ ರುದ್ರೇಶ್ ಉಜ್ಜಿನಿಕೊಪ್ಪ ಮಾತನಾಡಿ, ಇಂದಿನ ತಾಂತ್ರಿಕ ಯುಗದಲ್ಲಿ ಸಂಸ್ಕೃತಿ, ಸಂಸ್ಕಾರವನ್ನು ಮರೆಯುತ್ತಿದ್ದೇವೆಯೇ ಎಂಬ ಆತಂಕ ನಮ್ಮದಾಗಿದೆ. ಭಾರತೀಯ, ಕರ್ನಾಟಕ ಸಂಸ್ಕೃತಿಗೆ ಮಾರು ಹೋಗಿ ಪಾಶ್ಚಾತ್ಯ ಸಂಸ್ಕೃತಿಯ ಮೊರೆ ಹೋಗುತ್ತಿರುವುದು ವಿಷಾದದ ಸಂಗತಿ ಎಂದು ಹೇಳಿದರು.

ನಾಡಿನ ಅನೇಕ ಮಠ - ಮಾನ್ಯಗಳು ಅನ್ನ ದಾಸೋಹದ ಜೊತೆಗೆ ಅಕ್ಷರ ದಾಸೋಹ ಮೂಲಕ ಜನರಿಗೆ ಧಾರ್ಮಿಕ ಶಿಕ್ಷಣ ನೀಡುವಲ್ಲಿ ಮುಂದಾಗಿರುವುದನ್ನು ನೋಡುತ್ತೇವೆ. ಪುಟ್ಟರಾಜ ಕವಿ ಗವಾಯಿಗಳು ಅಂಧ ಮಕ್ಕಳಿಗೆ ಸಂಗೀತ ಕಲಿಸುವ ಮೂಲಕ ಬಾಳಿಗೆ ಬೆಳಕಾಗಿದ್ದಾರೆ ಎಂದರು.

ಪುರಾಣಗಳಲ್ಲಿಯೇ ವಿಶೇಷವಾದುದು ಕಲಬುರಗಿ ಶರಣ ಬಸವೇಶ್ವರರ ಪುರಾಣ. ಪ್ರತಿಯೊಬ್ಬರೂ ಕೂಡ ಸತ್ಕಾರ್ಯಗಳನ್ನು ಮಾಡುವ ಮೂಲಕ ಉತ್ತಮ ಸಮಾಜ ನಿರ್ಮಾಣಕ್ಕೆ ಮುಂದಾಗುವಂತೆ ಕರೆ ನೀಡಿದರು.

ಇತ್ತೀಚಿನ ದಿನಗಳಲ್ಲಿ ಇಂಜಿನಿಯರ್, ಡಾಕ್ಟರ್ ಸೇರಿದಂತೆ ಅಧಿಕಾರಿಗಳೇ ಮೋಸ, ವಂಚನೆಗಳಿಗೆ ಬಲಿಯಾಗುತ್ತಿದ್ದು, ಹಣ ದ್ವಿಗುಣ ಮಾಡಿಕೊಡುತ್ತೇವೆ ಎಂಬುದು ಸೇರಿದಂತೆ ಅನೇಕ ಆಸೆ-ಆಮಿಷಗಳನ್ನು ವೊಡ್ಡಿ ಮೋಸದ ಜಾಲ ಬೀಸಿ ಹಣ ಲಪಟಾಯಿಸುವ ಕೆಲಸವನ್ನು ಮಾಡುತ್ತಿದ್ದು, ಇದರಿಂದ ಎಚ್ಚರ ವಹಿಸುವ ಅಗತ್ಯ ಇದೆ ಎಂದರು.

ಯಾರಾದರೂ ತಮಗೆ ಮೋಸ ಮಾಡಲು ಬಂದರೆ ಅಥವಾ ದೌರ್ಜನ್ಯ, ಕಳ್ಳತನ ಮಾಡಲು ಬಂದರೆ ತಕ್ಷಣ ಪೊಲೀಸರಿಗೆ ಕರೆ ಮಾಡಿ (1930 ಮತ್ತು 112 ಸಂಖ್ಯೆಗೆ ದೂರು ನೀಡಿ) ದೂರು ನೀಡಿದರೆ ತಕ್ಷಣ ಪೊಲೀಸರು ಬಂದು ಅಗತ್ಯ ಕ್ರಮ ಕೈಗೊಳ್ಳುತ್ತಾರೆಂದು ಸೂಚನೆ ನೀಡಿದರು.

ಶ್ರೀ ಗುರು ಬಕ್ಕೇಶ್ವರ ದೇವಸ್ಥಾನ ಸಮಿತಿಯ ಮಾಗಾನಹಳ್ಳಿ ಜಯದೇವಪ್ಪ, ಮುಖಂಡರುಗಳಾದ ರಾಜಶೇಖರ ಗುಂಡಗಟ್ಟಿ, ಎಂ. ಬಸವರಾಜ್, ಶಿವಕುಮಾರ್ ಶೆಟ್ಟರ್, ಚನ್ನಬಸಯ್ಯ ಸ್ವಾಮಿ, ಮಂಜುನಾಥ ಶಾಸ್ತ್ರಿ ಶಿವಪೂಜಿ ಅಬ್ಬಿಗೇರಿ, ಹುಚ್ಚಯ್ಯ ಗವಾಯಿಗಳು ಹಿರೇಮಠ ರಾವಿಹಾಳ, ವೀರೇಶ್ ಹಿರೇಮಠ ರಾವಿಹಾಳ, ಆನಂದ ಆರ್.ಪಾಟೀಲ್, ಸುರೇಶ್ ಕೊಪ್ಪಳ, ರವಿಕುಮಾರ್, ಹಲವಾಗಲು ಶಿವಕುಮಾರ್, ರುದ್ರಣ್ಣ, ಗೋಪಾಲಪುರ ಜಿ.ಎಸ್. ಗುರುಶಾಂತ, ಲಿಂಗರಾಜ್, ಡಿ. ನಾಗರಾಜಪ್ಪ ಮತ್ತಿತರರು ಭಾಗವಹಿಸಿದ್ದರು.

ಶ್ರೀ ವೀರೇಶ್ವರ ಪುಣ್ಯಾಶ್ರಮದ ಅಂಧ ಮಕ್ಕಳು ಪ್ರಾರ್ಥಿಸಿದರು. ಅಜ್ಜಂಪುರ ಶೆಟ್ರು ಮೃತ್ಯುಂಜಯ ಸ್ವಾಗತಿಸಿದರು. ವಿಘ್ನೇಶ್ವರ ಕಾನ್ವೆಂಟ್ ಕಾರ್ಯದರ್ಶಿ ಡಿ.ಎಸ್. ಪಂಚಾಕ್ಷರಿ ನಿರೂಪಿಸಿದರು. ಇದೇ ವೇಳೆ ಮಾಜಿ ಪ್ರಧಾನಿ ಮನಮೋಹನ್ ಸಿಂಗ್, ಲಿಂ. ಮಾಗಾನಹಳ್ಳಿ ಶಿವಾನಂದಪ್ಪ, ಲಿಂ. ವೀರಪ್ಪ ಎಂ.ಬಾವಿ, ಲಿಂ. ಟಿ.ಕೆ.ಕರಿಬಸಪ್ಪ ಅವರುಗಳಿಗೆ ಮೌನಾಚರಣೆ ಮೂಲಕ ಶ್ರದ್ಧಾಂಜಲಿ ಸಲ್ಲಿಸಲಾಯಿತು.

# ಅಮೆರಿಕದ ಖಜಾನೆ ಇಲಾಖೆ ಕಂಪ್ಯೂಟರ್‌ಗಳು ಹ್ಯಾಕ್

ವಾಷಿಂಗ್ಟನ್, ಡಿ. 31- ಚೀನಾದ ಹ್ಯಾಕರ್‌ಗಳು ಅಮೆರಿಕದ ಖಜಾನೆ ಇಲಾಖೆಯ ಕಂಪ್ಯೂಟರ್‌ಗಳನ್ನು ಹ್ಯಾಕ್ ಮಾಡಿ ದಾಖಲೆಗಳನ್ನು ಪಡೆದಿದ್ದಾರೆ ಎಂದು ಇಲಾಖೆ ತಿಳಿಸಿದೆ. ಆದರೆ, ಯಾವ ದಾಖಲೆಗಳನ್ನು ಹ್ಯಾಕರ್‌ಗಳು ಪಡೆದಿರಬಹುದು ಎಂಬ ಬಗ್ಗೆ ಮಾಹಿತಿ ನೀಡಿಲ್ಲ. ಇದು ಸೈಬರ್ ಸುರಕ್ಷತೆಗೆ ಸಂಬಂಧಿಸಿದ ಪ್ರಮುಖ ಘಟನೆ ಎಂದಷ್ಟೇ ತಿಳಿಸಲಾಗಿದೆ. ಚೀನಾದ ವಿದೇಶಾಂಗ ಸಚಿವಾಲಯದ ವಕ್ತಾರರು ಈ ಆರೋಪವನ್ನು ತಳ್ಳಿ ಹಾಕಿದ್ದು, ರಾಜಕೀಯ ಉದ್ದೇಶಕ್ಕೆ ಆಧಾರ ರಹಿತ ಆರೋಪ ಮಾಡಲಾಗುತ್ತಿದೆ ಎಂದಿದ್ದಾರೆ.


**ರೂಂ ಬಾಡಿಗೆಗೆ ಇದೆ**
1ನೇ ಮಹಡಿ, (ಬಾತ್ ರೂಂ ಸಹಿತ) ತರಳಬಾಳು ಬಡಾವಣೆ, ಶಿವಕುಮಾರಸ್ವಾಮಿ ಮಂಟಪದ ಹತ್ತಿರ, ದಾವಣಗೆರೆ.
9480343298, 87228 53979

**ಅಡಿಕೆ ತೋಟ ಮಾರಾಟಕ್ಕಿದೆ**
ದಾವಣಗೆರೆಯಿಂದ 10 ಕಿ.ಮೀ. ಹತ್ತಿರವಿರುವ 5 ಎಕರೆ 2 ವರ್ಷದ ಅಡಿಕೆ ತೋಟ, 3 ಬೋರ್‌ವೆಲ್ ಮತ್ತು ಚಾನಲ್ ನೀರಿನ ವ್ಯವಸ್ಥೆಯಿದೆ. ಪ್ರತಿ ಎಕರೆಗೆ 50 ಲಕ್ಷ ರೂ. ಜೀನಿಯಸ್ ಸ್ಕೂಲ್ ಹತ್ತಿರ, ಹಿರೇತೊಗಲೇರಿ.
82172 37969, 97413 48103

**ROOM FOR RENT**
Single Attached room with all facilities available with wardrobe and cots system at MCC 'A' Block, Near Ram Krishna Ashrama, Beside Ganesh temple.
97405 69252

**ಬೇಕಾಗಿದ್ದಾರೆ**
ನಮ್ಮ ಕಾಫೀ ಶಾಪ್‌ನಲ್ಲಿ ಮತ್ತು ಕಾಫೀ ಕೌಂಟರ್‌ಗಳಲ್ಲಿ ಕೆಲಸಕ್ಕೆ ಬೇಕಾಗಿದ್ದಾರೆ.
ಆಸಕ್ತಿವುಳ್ಳವರು ತಮ್ಮ ವಿವರಗಳೊಂದಿಗೆ ಸಂಪರ್ಕಿಸಿ :
ANS ಫುಡ್ಸ್
ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಎದುರು, ಮಂಡಿಪೇಟೆ, ದಾವಣಗೆರೆ-1.
86604 12149

**Avoid Mosquiteos**
Mosquito Nets for doors & windows
Sri Gowri Enterprises
#7C2, 4th cross Near Shaneshwara Temple Karur Industrial Area, P.B Road, Davanagere -577006
72049 94628

**WANTED**
Banking Sector
Tele Caller (Female only)
Qualification : Any Degree
85500 23110
Interview time : 11 am

**ಅಡಿಕೆ ತೋಟ ಮಾರಾಟಕ್ಕಿವೆ**
NH-4 ರಸ್ತೆಯಲ್ಲಿ 5 1/2 ವರ್ಷದ ಗಿಡ, 6 1/2 ಎಕರೆ ಅಡಿಕೆ ತೋಟ ಮಾರಾಟಕ್ಕಿದೆ. 200 ಮೀ ಒಳಗೆ ಇವೆ. 2 ಎಕರೆ ಗದ್ದೆ ಇದೆ, ಕಲ್ಲು ಬಂಡೆ ಹತ್ತಿರ.
ಏಜೆಂಟರು
81231 15137

**ಎಲೆಕ್ಟ್ರಿಕ್ ಶಾಪ್ ಮಾರಾಟಕ್ಕಿದೆ**
ಎಲೆಕ್ಟ್ರಿಕಲ್ ಸಾಮಾನುಗಳ ಸಮೇತವಾಗಿ (ರ್‍ಯಾಕ್ + ಟೇಬಲ್‌ಗಳು) ಮಾರಾಟಕ್ಕಿವೆ. 60 ಅಡಿ ರಿಂಗ್ ರೋಡ್, ಶ್ರೀನಿವಾಸ ನಗರ, ದಾವಣಗೆರೆ ತಾ.
99165 25870, 99866 29551


## ಎನ್.ವಿ.ವಿ. ಸತ್ಯನಾರಾಯಣ ನಿಧನ



ದಾವಣಗೆರೆ ಸಿದ್ದವೀರಪ್ಪ ಬಡಾವಣೆ 5ನೇ ಕ್ರಾಸ್ ನಿವಾಸಿಗಳು ಹಾಗೂ ಶ್ರೀ ಶ್ರೀನಿವಾಸ ಚಿಟ್ ಫಂಡ್ ಸಂಸ್ಥಾಪಕರಾದ

**ಎನ್.ವಿ.ವಿ. ಸತ್ಯನಾರಾಯಣ**

ಅವರು ದಿನಾಂಕ 31.12.2024ರ ಮಂಗಳವಾರ ಸಂಜೆ 7:05ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ.

ಮೃತರಿಗೆ 75 ವರ್ಷ ವಯಸ್ಸಾಗಿತ್ತು. ಮೃತರು ಪತ್ನಿ, ಇಬ್ಬರು ಪುತ್ರಿಯರು, ಓರ್ವ ಪುತ್ರ, ಅಳಿಯಂದಿರು, ಸೊಸೆ, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುತ್ತಾರೆ.

ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 01.01.2025ರ ಬುಧವಾರ ಬೆಳಿಗ್ಗೆ 11 ಗಂಟೆಗೆ ನಗರದ ಪಿ.ಬಿ. ರಸ್ತೆಯಲ್ಲಿರುವ ವೈಕುಂಠಧಾಮದಲ್ಲಿ ನೆರವೇರಿಸಲಾಗುವುದು.

**ದುಃಖತಪ್ತ ಕುಟುಂಬ ವರ್ಗ**
**ಮೊ.: 94488 50414, 94496 27797**

# ಐಗೋಳ ಚಿದಾನಂದ ಸಹಕಾರ ಸಂಘದ ನಿರ್ದೇಶಕರಾಗಿ ಆಯ್ಕೆ



**ಹರಪನಹಳ್ಳಿ**

ಹರಪನಹಳ್ಳಿ, ಡಿ. 31 - ನಗರ ಮನೋರಂಜನಾ ಕೇಂದ್ರದ ಅಧ್ಯಕ್ಷ ಐಗೋಳ ಚಿದಾನಂದ ಅವರು ಹಡಗಲಿ ತಾಲ್ಲೂಕು ಸಹಕಾರ ಸಂಘದ ಚುನಾವಣೆಯಲ್ಲಿ ನಿರ್ದೇಶಕರಾಗಿ ಆಯ್ಕೆಯಾದ ಹಿನ್ನೆಲೆಯಲ್ಲಿ ಪಟ್ಟಣದ ನಗರ ಮನೋರಂಜನಾ ಕೇಂದ್ರದ ವತಿಯಿಂದ ಸನ್ಮಾನಿಸಿ, ಗೌರವಿಸಲಾಯಿತು.

ಈ ಸಂದರ್ಭದಲ್ಲಿ ನಗರ ಮನೋರಂಜನಾ ಕೇಂದ್ರದ ಸದಸ್ಯ ಕಟ್ಟಿ ರಂಗಣ್ಣ, ಮುದ್ಗಲ್ ಶ್ರೀಧರ್ ಶೆಟ್ರು, ಕಾರ್ಯದರ್ಶಿ ಸಿ. ವಸಂತಕುಮಾರ, ಅಂಬ್ಲಿ ಮಂಜುನಾಥ, ಶಂಬಣ್ಣ, ಗೊಂಗಡಿ ನಾಗರಾಜ, ವೀರನಗೌಡ ಸೇರಿದಂತೆ ಇತರರು ಇದ್ದರು.

# ಉಗ್ರ ಜೈದುಲ್ಲಾ ಇಸ್ಲಾಂಗೆ 7 ವರ್ಷ ಶಿಕ್ಷೆವಿಧಿಸಿದ ನ್ಯಾಯಾಲಯ

ಬೆಂಗಳೂರು, ಡಿ.31- ಜಮಾತ್–ಉಲ್–ಮುಜಾಹಿದ್ದೀನ್ ಬಾಂಗ್ಲಾದೇಶ (ಜೆಎಂಬಿ) ಸಂಘಟನೆಯಲ್ಲಿ ಗುರುತಿಸಿಕೊಂಡಿದ್ದ ಉಗ್ರ ಜೈದುಲ್ಲಾ ಇಸ್ಲಾಂ ಅಲಿಯಾಸ್ ಕೌಸರ್‌ಗೆ ರಾಷ್ಟ್ರೀಯ ತನಿಖಾ ದಳದ (ಎನ್‌ಐಎ) ಪ್ರಕರಣಗಳ ವಿಶೇಷ ನ್ಯಾಯಾಲಯ ಏಳು ವರ್ಷ ಕಠಿಣ ಶಿಕ್ಷೆ, 57 ಸಾವಿರ ರೂ. ದಂಡ ವಿಧಿಸಿದೆ.

ಅಕ್ರಮವಾಗಿ ರಾಜ್ಯದಲ್ಲಿ ವಾಸವಿದ್ದ ಕೌಸರ್, ತನ್ನ ಸಂಘಟನೆಗೆ ಹಣ ಕಳುಹಿಸಲು ಬೆಂಗಳೂರು ನಗರ ಹಾಗೂ ಗ್ರಾಮಾಂತರ ಭಾಗದಲ್ಲಿ ಡಕಾಯಿತಿ ನಡೆಸುತ್ತಿದ್ದ. ರಾಮನಗರದಲ್ಲಿ ಈತನನ್ನು ಬಂಧಿಸಲಾಗಿತ್ತು. ತನಿಖೆ ನಡೆಸಿದ್ದ ಎನ್‌ಐಎ ಅಧಿಕಾರಿಗಳು ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಿದ್ದರು.

ಬಾಂಗ್ಲಾದೇಶದಲ್ಲಿ 2005ರಲ್ಲಿ ನಡೆದ ಸರಣಿ ಸ್ಫೋಟ ಪ್ರಕರಣದಲ್ಲೂ ಕೌಸರ್‌ನನ್ನು ಬಂಧಿಸಲಾಗಿತ್ತು. ನಂತರ ಬಿಡುಗಡೆಯಾಗಿದ್ದ ಕೌಸರ್, 2014ರಲ್ಲಿ ಸಂಘಟನೆಯ ಮುಖ್ಯಸ್ಥ ಸಲಾವುದ್ದೀನ್ ಸಲೇಹಿನ್ ಜತೆ ಸೇರಿ ಭಾರತ ಪ್ರವೇಶಿಸಿದ್ದ. ಬಳಿಕ ತಮ್ಮ ತಂಡಗಳನ್ನು ಪ್ರತ್ಯೇಕಗೊಳಿಸಿ ದಕ್ಷಿಣ ರಾಜ್ಯಗಳ ಕಡೆ ಕಳುಹಿಸಿದ್ದ.

# ಸ್ಪೇಡೆಕ್ಸ್ ಉಪಗ್ರಹಗಳ ಉಡಾವಣೆ ಯಶಸ್ವಿ

**(1ನೇ ಪುಟದಿಂದ)** ಪ್ರಬಲವಾಗುವ ವಿಶ್ವಾಸ ಪಡೆಯಿತು. ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರ ವರ್ಚಸ್ಸು ಹಾಳು ಮಾಡಿರುವುದಾಗಿ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಹೇಳಿದ್ದರು. ರಾಹುಲ್ ಗಾಂಧಿ ಅವರು ವಿರೋಧ ಪಕ್ಷದ ನಾಯಕರು ಆಗಲು ಸಾಧ್ಯವಾಯಿತು. ರಾಹುಲ್ ಗಾಂಧಿ ಅವರೇ ಜನರ ನಿಜವಾದ ಧ್ವನಿ ಎಂದು ಕಾಂಗ್ರೆಸ್ ಬಣ್ಣಿಸಿತ್ತು.

ಆದರೆ, 2024 ಮುಗಿಯುವಷ್ಟರಲ್ಲಿ ಮೋದಿ ಮತ್ತೆ ಪ್ರಶ್ನಾತೀತ ನಾಯಕರಾಗಿದ್ದಾರೆ. ಮೋದಿ ನೇತೃತ್ವದ ಕೇಂದ್ರ ಸರ್ಕಾರ ಮೈತ್ರಿಕೂಟದ ವಿಷಯದಲ್ಲಿ ಯಾವುದೇ ದೌರ್ಬಲ್ಯ ಪ್ರದರ್ಶಿಸಿಲ್ಲ. ಮತ್ತೊಂದೆಡೆ ವಿರೋಧ ಪಕ್ಷವಾದ ಐ.ಎನ್.ಡಿ.ಐ.ಎ. ಮೈತ್ರಿ ಕೂಟ ಕಾಂಗ್ರೆಸ್ ಪಕ್ಷದಿಂದ ದಿನದಿಂದ ದಿನಕ್ಕೆ ದೂರವಾಗುತ್ತಿದೆ.

ಮೈತ್ರಿಯ ವಿಷಯದಲ್ಲಿ ಬಿಜೆಪಿ ತೆಗೆದುಕೊಂಡ ಹಲವು ನಿರ್ಧಾರಗಳು ಪಕ್ಷಕ್ಕೆ ನೆರವಾಗಿವೆ. ಆಂಧ್ರಪ್ರದೇಶದಲ್ಲಿ ತೆಲುಗು ದೇಶಂ ಪಾರ್ಟಿ ಜೊತೆ ಕೈ ಜೋಡಿಸಿದ್ದು ಹಾಗೂ ಒಡಿಶಾದಲ್ಲಿ ಬಿಜು ಜನತಾದಳ ಜೊತೆಗಿನ ಮೈತ್ರಿ ಮಾತುಕತೆಯಿಂದ ಹಿಂದೆ ಸರಿದಿದ್ದು ಬಿಜೆಪಿಗೆ ಅನುಕೂಲವಾಗಿದೆ. ಆಂಧ್ರಪ್ರದೇಶದಲ್ಲಿ ಚಂದ್ರ ಬಾಬು ನಾಯ್ಡು ನೇತೃತ್ವದ ತೆಲುಗು ದೇಶಂ ಪಾರ್ಟಿ ಅಧಿಕಾರಕ್ಕೆ ಬಂದಿದೆ. ಒಡಿಶಾದಲ್ಲಿ ಬಿಜೆಪಿ ಸ್ವಂತ ಬಲದಿಂದ ಅಧಿಕಾರಕ್ಕೆ ಬಂದಿದೆ. ಈ ಎರಡು ರಾಜ್ಯಗಳಿಗೆ ಲೋಕಸಭೆಯ ಜೊತೆಗೆ ವಿಧಾನಸಭಾ ಚುನಾವಣೆಗಳೂ ನಡೆದಿದ್ದವು. ಈ ಎರಡೂ ರಾಜ್ಯಗಳಿಂದ ಎನ್‌ಡಿಎ ಮೈತ್ರಿಕೂಟಕ್ಕೆ 41 ಸ್ಥಾನಗಳು ದೊರೆತಿದ್ದವು, ಇದು ಲೋಕಸಭೆಯಲ್ಲಿ ಬಹುಮತ ಪಡೆಯಲು ನಿರ್ಣಾಯಕವಾಗಿ ಪರಿಣಮಿಸಿತು.

ಉತ್ತರ ಪ್ರದೇಶದ ನಂತರ ಎರಡನೆಯ ಅತಿ ದೊಡ್ಡ ರಾಜ್ಯವಾಗಿರುವ ಮಹಾರಾಷ್ಟ್ರದಲ್ಲಿ ಬಿಜೆಪಿ ಲೋಕಸಭಾ ಚುನಾವಣೆಯಲ್ಲಿ ಮುಖಭಂಗಕ್ಕೆ ಗುರಿಯಾಗಿತ್ತು. ಲೋಕಸಭೆಗೆ ಹೋಲಿಸಿದರೆ ವಿಧಾನಸಭೆಯಲ್ಲಿ ಬಿಜೆಪಿ ಕಡಿಮೆ ಮತ ಪಡೆಯುವುದು ಸಾಕಷ್ಟು ಬಾರಿ ಕಂಡುಬಂದಿತ್ತು. ಹರಿಯಾಣದಲ್ಲೂ ಇದೇ ರೀತಿಯ ಪರಿಸ್ಥಿತಿ ಇತ್ತು.

ಇದೇ ಲೆಕ್ಕಾಚಾರದ ಮೇಲೆ ಎರಡು ರಾಜ್ಯಗಳಲ್ಲಿ ಪ್ರತಿಪಕ್ಷಗಳು ಸುಲಭವಾಗಿ ಗೆಲ್ಲಲಿವೆ ಎಂಬ ಅಭಿಪ್ರಾಯ ವ್ಯಾಪಕವಾಗಿತ್ತು. ಆದರೆ, ಬಿಜೆಪಿ ಹಾಗೂ ಸಂಘ ಪರಿವಾರಗಳು ಚುನಾವಣಾ ನಿರ್ವಹಣೆಯಲ್ಲಿ ಗಣನೀಯ ಬದಲಾವಣೆ ತಂದು ಸ್ಥಳೀಯ ಲೆಕ್ಕಾಚಾರಗಳಿಗೆ ಅನುಗುಣವಾಗಿ ವರ್ತಿಸಿದ್ದವು. ಇದರಿಂದಾಗಿ ಎರಡು ರಾಜ್ಯಗಳಲ್ಲಿ ಬಿಜೆಪಿ ಅನಿರೀಕ್ಷಿತ ಮುನ್ನಡೆ ಪಡೆದು ಸರ್ಕಾರ ರಚಿಸಲು ಸಾಧ್ಯವಾಯಿತು. ಆದರೆ, ಮಹಾರಾಷ್ಟ್ರದ ಜೊತೆಗೆ ನಡೆದ ಜಾರ್ಖಂಡ್ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ ಮುಗ್ಗರಿಸಿತು. ಹೇಮಂತ್ ಸೊರೇನ್ ಅವರ ನೇತೃತ್ವದ ಐ.ಎನ್.ಡಿ.ಐ.ಎ. ಮೈತ್ರಿ ಕೂಟ ಸತತ ಎರಡನೇ ಬಾರಿ ಅಧಿಕಾರಕ್ಕೆ ಬಂದಿತು.

ಸ್ಥಳೀಯ ನಾಯಕತ್ವದ ಕೊರತೆಯಿಂದಾಗಿ ಜಾರ್ಖಂಡ್‌ನಲ್ಲಿ ಬಿಜೆಪಿಯು ಹೊರಗಿನ ರಾಜ್ಯಗಳ ಮುಖಂಡರನ್ನು ಅವಲಂಬಿಸಿತ್ತು. ಇದು ಪಕ್ಷಕ್ಕೆ ಹಿನ್ನಡೆ ತಂದಿತು.



# ಜನತಾವಾಣಿ ಸಿಂಹಾವಲೋಕನ



## ರಾಮನಿಗೆ ವಿಶ್ವ ನಮನ...

ಬಹು ನಿರೀಕ್ಷಿತ ಅಯೋಧ್ಯೆ ರಾಮ ಮಂದಿರದ ಪ್ರಾಣ ಪ್ರತಿಷ್ಠಾಪನೆ. ರಾಮ ದೇವಾಲಯವನ್ನು ಪುಷ್ಪ ಹಾಗೂ ದೀಪಗಳಿಂದ ಅಲಂಕರಿಸಿದ ಅಯೋಧ್ಯೆ ಸಂಪೂರ್ಣ ರಾಮಮಯವಾಗಿತ್ತು...



✍ ಉತ್ತಂಗಿ ಕೊಟ್ರೇಶ್





**ರಾಮಜನ್ಮಭೂಮಿ ಆಯೋಧ್ಯೆ ಭವ್ಯ ಮಂದಿರದಲ್ಲಿ "ರಾಮಲಲ್ಲಾ" ಪ್ರಾಣ ಪ್ರತಿಷ್ಠಾಪನೆ, ಹೆಲಿಕ್ಯಾಪ್ಟರ್‌ಗಳಿಂದ ಹೂಮಳೆ, ದೇಶದೆಲ್ಲೆಡೆ ಸಂಭ್ರಮ, ಕರ್ನಾಟಕದ ಕಲಾವಿದ ರಚಿಸಿದ "ಮೂರ್ತಿಗೆ" ಪೂಜಾವಕಾಶ.**

### ಜೀವನಾಡಿ ...



**ಪ್ರಸಕ್ತ ವರ್ಷ ಅತಿ ವೇಗವಾಗಿ ಭರ್ತಿಯಾಗಿರುವ ಭದ್ರಾ ಜಲಾಶಯದಿಂದ ನೀರನ್ನು ಹೊರ ಬಿಟ್ಟಾಗಿನ ರಮಣೀಯ ದೃಶ್ಯ...**



**ಕೇರಳದ ವಯನಾಡಿನ ಪ್ರಕೃತಿಯ ರುದ್ರ ನರ್ತನ....**



**ವಾಹ್.. ! ಇದು ಸ್ಮಾರ್ಟ್ ಬಸ್ ನಿಲ್ದಾಣ : ಖಾಸಗಿ ಬಸ್ ನಿಲ್ದಾಣದ ತೆಗಳಿಕೆ ಬೆನ್ನಲ್ಲೇ, ಕೆಎಸ್ಸಾರ್ಟಿಸಿ ಬಸ್ ನಿಲ್ದಾಣಕ್ಕೆ ಮೆಚ್ಚುಗೆ.**



**ಎಪಿಎಂಸಿಗೆ ಜೀವಕಳೆ ....! ಸುಗ್ಗಿಯ ಕಾಲ ಆರಂಭವಾಗಿದ್ದು, ದಿನೇ ದಿನೇ ಮಾರುಕಟ್ಟೆಗೆ ಹೆಚ್ಚಾಗುತ್ತಿರುವ ಆವಕ.**



**ಆತಂಕ ಮೂಡಿಸಿದ್ದ ಭದ್ರಾ ಡ್ಯಾಂ ಗೇಟ್ ದುರಸ್ತಿ ಪೂರ್ಣ...**



**ಬೆಳ್ಳಾನೆ ಎರಡೆತ್ತು ಬೆಳ್ಳಿಯ ಬಾರಕೋಲು...ಮುಂಗಾರು ಪೂರ್ವ ಮಳೆ. ಉತ್ತಮವಾಗಿದ್ದ ಪರಿಣಾಮ ಗರಿಗೆದರಿದ ಕೃಷಿ ಚಟುವಟಿಕೆಗಳು.**

☛ **ಜನವರಿ :**

**ಆಯೋಧ್ಯೆ ರಾಮಮಂದಿರಕ್ಕೆ ಮೈಸೂರು ಕಲಾವಿದನ ಮೂರ್ತಿ**

ಜ. 1- ಹೊಸ ವರ್ಷವನ್ನು 'ಮದ್ಯ'ರಾತ್ರಿ ನಗರದ ಹಲವೆಡೆ ಉತ್ಸಾಹದಿಂದ ಸ್ವಾಗತಿಸಿದ ಯುವಪಡೆ. ಶುಭಾಶಯಗಳ ವಿನಿಮಯ.

* ಬೆಂಗಳೂರು ಪ್ರೆಸ್‌ಕ್ಲಬ್‌ನ 'ವರ್ಷದ ವ್ಯಕ್ತಿ-ವಿಶೇಷ ವ್ಯಕ್ತಿ' ಪ್ರಶಸ್ತಿಗೆ ಬಾವಿಸಂ ಗೌರವ ಕಾರ್ಯದರ್ಶಿ, ಶಾಸಕ ಶಾಮನೂರು ಶಿವಶಂಕರಪ್ಪ ಭಾಜನ.

* ಮೀಸಲಾತಿಗಾಗಿ ಮತ್ತೆ ಹೋರಾಟ: ಭಗೀರಥ ಪೀಠದ ಶ್ರೀ ಪುರುಷೋತ್ತಮಾನಂದ ಪುರಿ ಸ್ವಾಮೀಜಿ ಎಚ್ಚರಿಕೆ.

ಜ. 2- ಕಾರ್ಮಿಕ ಕಾಯ್ದೆ ಉಲ್ಲಂಘನೆ: ಬಾಂಗ್ಲಾದ ನೋಬೆಲ್ ಪ್ರಶಸ್ತಿ ವಿಜೇತ ಯೂನಸ್‌ಗೆ ಜೈಲು.

* ಅಯೋಧ್ಯೆ ರಾಮಮಂದಿರಕ್ಕೆ ಮೈಸೂರು ಕಲಾವಿದನ ಮೂರ್ತಿ ಆಯ್ಕೆ.

ಜ. 5- ಉಚಿತ ಕೊಡುಗೆಗಳ ಘೋಷಣೆ ಬಗ್ಗೆ ಪರಿಶೀಲನೆ: ಸುಪ್ರೀಂ ಕೋರ್ಟ್.

ಜ. 7- ಕಾಂತರಾಜ್ ವರದಿ ಅನುಷ್ಠಾನಕ್ಕೆ ಒತ್ತಾಯಿಸಿ ಮುಖ್ಯಮಂತ್ರಿಗೆ ಹಿಂದುಳಿದ, ದಲಿತ ಮಠಾಧೀಶರ ಮನವಿ.

* ಕಾಂಗ್ರೆಸ್ ಬಣ ರಾಜಕೀಯ ಶಮನಕ್ಕೆ ರಾಜ್ಯ ಉಸ್ತುವಾರಿ ರಣದೀಪ್ ಸುರ್ಜೇವಾಲಾ ಮಧ್ಯಸ್ಥಿಕೆ.



ಜ. 8- ದಾವಣಗೆರೆ ಲೋಕಸಭಾ ಕ್ಷೇತ್ರದ ಸಂಯೋಜಕರಾಗಿ ಎಸ್ಸೆಸ್ಸೆಂ.

* ದೇಶದಲ್ಲಿ 29273 ಬೋಗಸ್ ಕಂಪನಿಗಳು ಪತ್ತೆ.

ಜ. 9- ರಾಜ್ಯದಲ್ಲಿ ಮಲ ಹೊರುವ ಪದ್ಧತಿ ಒಂದು ಪ್ರಕರಣದಲ್ಲೂ ಶಿಕ್ಷೆಯಿಲ್ಲ: ರಾಜ್ಯ ಸರ್ಕಾರಕ್ಕೆ ಹೈಕೋರ್ಟ್ ತರಾಟೆ.

* ಸಿರಿಗೆರೆಯ ನೀಲಾಂಬಿಕೆ ಅವರಿಗೆ ಕದಳಿಶ್ರೀ ಪ್ರಶಸ್ತಿ.

* 'ಬೆಳಗಾವಿ ಮಹಾರಾಷ್ಟ್ರಕ್ಕೆ ಸೇರಿತ್ತು' ಎಂಬ ಸಚಿವೆ ಲಕ್ಷ್ಮಿ ಹೆಬ್ಬಾಳ್ಕರ್ ಹೇಳಿಕೆಗೆ ಖಂಡನೆ.

ಜ. 10- ರಾಜ್ಯಪಾಲ ಥಾವರ್‌ಚಂದ್ ಅವರಿಗೆ ಕೋವಿಡ್ ಪಾಸಿಟಿವ್.

ಜ. 11- ಮಹಾರಾಷ್ಟ್ರ: ಶಿಂಧೆ ಬಣವೇ ನಿಜವಾದ ಶಿವಸೇನೆ : ವಿಧಾನಸಭಾಧ್ಯಕ್ಷರ ತೀರ್ಮಾನ.

* ಅಯೋಧ್ಯೆ ಆಹ್ವಾನ 'ಗೌರವದಿಂದ ನಿರಾಕರಿಸಿದ' ಸೋನಿಯಾ, ಖರ್ಗೆ.

* ಜಿಲ್ಲೆಯ ಜಬೀನಾ, ಜ್ಯೋತಿ ಅವರಿಗೆ ರಾಜ್ಯಮಟ್ಟದ ಸಾವಿತ್ರಿಬಾಯಿ ಫುಲೆ ಪ್ರಶಸ್ತಿ.

ಜ. 12- ಚಿಕ್ಕಬಳ್ಳಾಪುರ: 14 ವರ್ಷಕ್ಕೆ ತಾಯಿಯಾದ ಸರ್ಕಾರಿ ವಸತಿ ನಿಲಯದ ವಿದ್ಯಾರ್ಥಿನಿ, ವಾರ್ಡನ್ ಸಸ್ಪೆಂಡ್.

ಜ. 13- ಯುವನಿಧಿಗೆ ಚಾಲನೆ ನೀಡಿದ ರಾಜ್ಯ ಸರ್ಕಾರ.

* ಮಹಿಳಾ ಮೀಸಲಾತಿ ಜಾರಿ: ತ್ವರಿತ ವಿಚಾರಣೆಗೆ ಸುಪ್ರೀಂ ನಕಾರ.

* ಹೊಸ ಪೀಳಿಗೆಯ ಆಕಾಶ್ ಕ್ಷಿಪಣಿ ಪರೀಕ್ಷೆ ಯಶಸ್ವಿ.

ಜ. 14- ಐ.ಎನ್.ಡಿ.ಐ.ಎ ಅಧ್ಯಕ್ಷರಾಗಿ ಮಲ್ಲಿಕಾರ್ಜುನ ಖರ್ಗೆ.

ಜ. 15- ದಾವಣಗೆರೆ ಜಿಲ್ಲಾ ಬಿಜೆಪಿ ಅಧ್ಯಕ್ಷರಾಗಿ ಎನ್.ರಾಜಶೇಖರ್

ಜ. 17- ಅಯೋಧ್ಯೆ ಶ್ರೀರಾಮ ಮಂದಿರದಲ್ಲಿ ಪ್ರಾಣ ಪ್ರತಿಷ್ಠಾಪನೆ ಪೂಜಾ ವಿಧಿಗಳು ಆರಂಭ.

ಜ. 23. ಪ್ರಧಾನಿ ಮೋದಿ ನೇತೃತ್ವದಲ್ಲಿ ಅಯೋಧ್ಯೆ ಭವ್ಯ ಮಂದಿರದಲ್ಲಿ ರಾಮಲಲ್ಲಾ ಪ್ರಾಣ ಪ್ರತಿಷ್ಠಾಪನೆ, ಹೆಲಿಕ್ಯಾಪ್ಟರ್‌ಗಳಿಂದ ಹೂಮಳೆ. ದೇಶದೆಲ್ಲೆಡೆ ಸಂಭ್ರಮ.

* ಕರ್ನಾಟಕದ ಮತದಾರರ ಸಂಖ್ಯೆ 5.37 ಕೋಟಿಗೆ ಏರಿಕೆ.

ಜ. 24- ಮಾಜಿ ಸಿಎಂ ಕರ್ಪೂರಿ ಠಾಕೂರ್‌ಗೆ ಮರಣೋತ್ತರವಾಗಿ ದೇಶದ ಅತ್ಯುನ್ನತ 'ಭಾರತ ರತ್ನ' ಪ್ರಶಸ್ತಿ ಪ್ರಕಟ.

* ಭಾನುವಳ್ಳಿ: ಸಂಗೊಳ್ಳಿ ರಾಯಣ್ಣ ಪ್ರತಿಮೆ ತೆರವುಗೊಳಿಸಿದ ಜಿಲ್ಲಾಡಳಿತ, ನಿಷೇಧಾಜ್ಞೆ ಜಾರಿ.

ಜ. 26- ಕಾಂಗ್ರೆಸ್ ತೆಕ್ಕೆಗೆ ಡಿಸಿಸಿ ಬ್ಯಾಂಕ್. ಸಚಿವ ಎಸ್ಸೆಸ್ಸೆಂ ನೇತೃತ್ವದ ಗುಂಪಿಗೆ ಜಯ.

* ಮಾಜಿ ಮುಖ್ಯಮಂತ್ರಿ ಜಗದೀಶ್ ಶೆಟ್ಟರ್ ಮರಳಿ ಬಿಜೆಪಿಗೆ ಸೇರ್ಪಡೆ.

* ನಗರದ ದಾದಾಪೀರ್ ಸೇರಿದಂತೆ 23 ಪೊಲೀಸರಿಗೆ ರಾಷ್ಟ್ರಪತಿ ಪದಕ.

* ರಾಜ್ಯದ 9 ಜನರಿಗೆ 'ಪದ್ಮ ಗೌರವ' ಉದ್ಯಮಿ ಜಿಂದಾಲ್‌ಗೆ ಪದ್ಮ ಭೂಷಣ ಪ್ರಶಸ್ತಿ.

ಜ. 27- ನಿಗಮ, ಮಂಡಳಿ ನೇಮಕ ಮೊದಲ ಪಟ್ಟಿ ಬಿಡುಗಡೆ.

ಜ. 29- ಮಂಡ್ಯದಲ್ಲಿ ಹನುಮ ಧ್ವಜ ವಿವಾದ, ಪೊಲೀಸರ ಲಾಠಿ ಪ್ರಹಾರ.

* ಬಿಹಾರ ಸಿಎಂ ಆಗಿ ನಿತೀಶ್ ಕುಮಾರ್ ಪ್ರಮಾಣ ವಚನ.

ಜ. 30- ರಾಜ್ಯ ಬಿಜೆಪಿ ನೂತನ ಉಸ್ತುವಾರಿ ಭೂಪಿಂದರ್ ಸಿಂಗ್ ಯಾದವ್.

* ಪಂಡಿತಾರಾಧ್ಯ ಶ್ರೀಗಳಿಗೆ 'ಡಾ.ಎಂ.ಎಂ ಕಲಬುರ್ಗಿ ಪ್ರಗತಿಪರ ಚಿಂತಕ ಪ್ರಶಸ್ತಿ.

ಜ.31- ನಗರದಲ್ಲಿ ಐವರು ಅಂತರರಾಜ್ಯ ಸೈಬರ್ ಕ್ರೈಂ ಅಪರಾಧಿಗಳ ಬಂಧನ.

☛ **ಫೆಬ್ರವರಿ**

**ದೇಶದ ನಾಲ್ವರು ಗಣ್ಯರಿಗೆ 'ಭಾರತ ರತ್ನ'**

ಫೆ. 1- ರಾಜದಂಡದೊಂದಿಗೆ ನೂತನ ಸಂಸತ್ ಪ್ರವೇಶಿಸಿದ ರಾಷ್ಟ್ರಪತಿ ದ್ರೌಪದಿ ಮುರ್ಮು.

ಫೆ. 2- ಜನಪ್ರಿಯ ಘೋಷಣೆ ರಹಿತ, ಬೆಳವಣಿಗೆ ಬಜೆಟ್ ಮಂಡಿಸಿದ ಕೇಂದ್ರ ಹಣಕಾಸು ಸಚಿವೆ ನಿರ್ಮಲ ಸೀತಾರಾಮನ್.

* ವಾರಣಾಸಿ ಜ್ಞಾನವಾಪಿ ನೆಲಮಾಳಿಗೆಯಲ್ಲಿ 31 ವರ್ಷಗಳ ನಂತರ ಪೂಜಾ ಪದ್ಧತಿ ಪುನರಾರಂಭ.

ಫೆ. 3- ರಾಜಕೀಯಕ್ಕೆ ತಮಿಳು ನಟ ವಿಜಯ್.

* ಪತ್ರಕರ್ತರ ಸಮ್ಮೇಳನಕ್ಕೆ ಬೆಣ್ಣೆ ನಗರಿ ಸಿದ್ಧ.

ಫೆ. 4- ಸಂವಿಧಾನ ರಕ್ಷಣೆ ಪತ್ರಿಕೋದ್ಯಮದ ಕಾರ್ಯ: ರಾಜ್ಯ ಪತ್ರಕರ್ತರ ಸಮ್ಮೇಳನದಲ್ಲಿ ಮುಖ್ಯ ಮಂತ್ರಿ ಸಿದ್ದರಾಮಯ್ಯ.

* ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿಯಾಗಿ ದಿನೇಶ್‌ಕುಮಾರ್.

* ಬಿಜೆಪಿ ಹಿರಿಯ ನಾಯಕ ಲಾಲ್‌ಕೃಷ್ಣ ಅದ್ವಾನಿಗೆ 'ಭಾರತ ರತ್ನ' ಪ್ರಕಟ.

ಫೆ. 5- ಏಕರೂಪ ನಾಗರಿಕ ಸಂಹಿತೆಗೆ ಉತ್ತರಾಖಂಡ ಸಂಪುಟ ಒಪ್ಪಿಗೆ.

ಫೆ. 6- ಸ್ಥಳೀಯರಿಗೆ ಶೇ.75 ಮೀಸಲಾತಿ ಕೇಂದ್ರಕ್ಕೆ ಸುಪ್ರೀಂ ನೋಟಿಸ್.

* ಚುನಾವಣೆ ವೇಳೆ ಪ್ರಚಾರಕ್ಕೆ ಮಕ್ಕಳ ಬಳಕೆ ಬೇಡ ಆಯೋಗದ ಎಚ್ಚರಿಕೆ.

ಫೆ. 7- ರೂಪಾಯಿ 29 ದರದಲ್ಲಿ ಅಕ್ಕಿ ಮಾರಾಟಕ್ಕೆ ಕೇಂದ್ರ ಚಾಲನೆ.

* ರಾಜ್ಯಸಭೆಯಲ್ಲಿ ಮೇಕೆದಾಟು ಯೋಜನೆ ಜಾರಿಗೆ ಕೈಮುಗಿದು ಬೇಡಿದ ಮಾಜಿ ಪ್ರಧಾನಿ ಹೆಚ್.ಡಿ ದೇವೇಗೌಡ.

ಫೆ. 8- ಡಿಡಿಸಿಸಿ ಬಾಂಕ್ ಅಧ್ಯಕ್ಷರಾಗಿ ಕೋಗುಂಡಿ ಬಕ್ಕೇಶಪ್ಪ ಆಯ್ಕೆ.

ಫೆ. 10-ಮಾಜಿ ಪ್ರಧಾನಿ ಪಿ.ವಿ ನರಸಿಂಹರಾವ್, ಚೌಧರಿ ಚರಣ್‌ಸಿಂಗ್ ಮತ್ತು ಕೃಷಿ ತಜ್ಞ ಸ್ವಾಮಿನಾಥನ್‌ಗೆ ಭಾರತ ರತ್ನ' ಪ್ರಶಸ್ತಿ ಪ್ರಕಟ.

* ಪ್ರಚೋದನಾಕಾರಿ ಹೇಳಿಕೆ: ಕೆ.ಎಸ್ ಈಶ್ವರಪ್ಪ ವಿರುದ್ಧ ಬಡಾವಣೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲು.

ಫೆ. 13- ಕತಾರ್‌ನಲ್ಲಿ ಬಂಧಿತ ಎಂಟು ಭಾರತೀಯರ ಬಿಡುಗಡೆ.

* ಸರ್ಕಾರಿ ಕಚೇರಿಗಳಲ್ಲಿ ಬಸವಣ್ಣನವರನ್ನು 'ಸಾಂಸ್ಕೃತಿಕ ನಾಯಕ' ಉಲೇಖಕ್ಕೆ ಸರ್ಕಾರದ ಆದೇಶ.

ಫೆ. 14- ರಂಗಭೂಮಿಯ ಹಿರಿಯ ಕಲಾವಿದ ಮೆಹಬೂಬ್ ಅಲಿ ಇನ್ನಿಲ್ಲ.

ಫೆ. 15- ಬಿಜೆಪಿ ಶಾಸಕನಿಗೆ ಪ್ರಾಣ ಬೆದರಿಕೆ; ಕಾಂಗ್ರೆಸ್‌ನ ಪದ್ಮರಾಜ್ ಬಂಧನ.

ಫೆ.16- ಚುನಾವಣಾ ಬಾಂಡ್ ನೀಡಿಕೆ ಸಂವಿಧಾನ ಬಾಹಿರ: ಸುಪ್ರೀಂಕೋರ್ಟ್.

* ಆರ್ಥಿಕ ಹಿಂಜರಿತ: ನಾಲ್ಕನೇ ಸ್ಥಾನಕ್ಕೆ ಕುಸಿದ ಜಪಾನ್.

ಫೆ.17-ಬಜೆಟ್ ಮಂಡಿಸಿದ ಸಿಎಂ ಸಿದ್ದರಾಮಯ್ಯ: ಜನ ಭಾರವಿಲ್ಲದೇ ಸಂಪನ್ಮೂಲ ಕ್ರೋಢೀಕರಣ; ಅಭಿವೃದ್ಧಿಗೆ 1.05 ಕೋಟಿ ರೂ. ಸಾಲ.

* 'ಬರ' ಬಗ್ಗೆ ಪ್ರಸ್ತಾಪವಿಲ್ಲದ ಬಜೆಟ್ ಎಂದ ಯಡಿಯೂರಪ್ಪ. ಇದು ಬಜೆಟ್ ಅಲ್ಲ ಡಿ.ಪಿ.ಆರ್ ಎಂದು ಕುಮಾರಸ್ವಾಮಿ ಲೇವಡಿ.

* ಗ್ರಾಮೀಣ ಪತ್ರಕರ್ತರಿಗೆ ಉಚಿತ ಬಸ್ ಪಾಸ್ ಯೋಜನೆ ಪ್ರಕಟಿಸಿದ ಸಿಎಂ.: ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಸಂತಸ.

ಫೆ. 18- ಪ್ರತಿ ಜಿಲ್ಲೆಯಲ್ಲಿಯೂ ಬಸವ ಭವನ ನಿರ್ಮಿಸಲು, ಸಾಂಸ್ಕೃತಿಕ ನಾಯಕ ಬಸವಣ್ಣನವರ ಭಾವಚಿತ್ರ ಅನಾವರಣ ಕಾರ್ಯಕ್ರಮದಲ್ಲಿ ಎಸ್ಸೆಸ್.

* ವೀರಶೈವ ಲಿಂಗಾಯತ ನಿಗಮದ ಅಧ್ಯಕ್ಷರಾಗಿ ಕಾಶಪ್ಪನವರ್.

ಫೆ. 21- ರಾಜ್ಯಸಭೆಗೆ ಸೋನಿಯಾ, ನಡ್ಡಾ ಅವಿರೋಧ ಆಯ್ಕೆ.

* ಜಯಲಲಿತಾರ 27 ಕೆಜಿ ಬಂಗಾರದ ಆಭರಣ ತಮಿಳುನಾಡು ಸರ್ಕಾರಕ್ಕೆ ವರ್ಗಾಯಿಸಲು ನ್ಯಾಯಾಲಯ ಆದೇಶ.

ಫೆ. 22- 'ಖಾಸಗಿ ಶಾಲೆಗಳಿಗಿಲ್ಲ ನಾಡಗೀತೆ' ಸರ್ಕಾರಿ ಆದೇಶದಲ್ಲಿ ಯಡವಟ್ಟು ನಂತರ ಸರಿಪಡಿಸಲು ಕ್ರಮ.

ಫೆ. 23- ಮಲಬಾರ್ ಗೋಲ್ಡ್‌ಗೆ ರ್‍ಯಾಂಕಿಂಗ್ ಪಟ್ಟಿಯಲ್ಲಿ ಅಗ್ರಸ್ಥಾನ.

ಫೆ. 24. ಭದ್ರಾ ನಾಲೆಗೆ ನೀರು ಬಿಡುವ ಅವೈಜ್ಞಾನಿಕ ವೇಳಾಪಟ್ಟಿ ರದ್ದುಗೊಳಿಸಲು ಒತ್ತಾಯಿಸಿ ಹೆದ್ದಾರಿ ತಡೆ ನಡೆಸಿ ಒತ್ತಾಯಿಸಿದ ರೈತರು.

* ದಲಿತರಿಗೆ ಮೀಸಲಿಟ್ಟ ಹಣ 'ಗ್ಯಾರಂಟಿ' ಬಳಕೆ; ಕಾಂಗ್ರೆಸ್ ನಡೆ ಖಂಡಿಸಿ ನಗರದಲ್ಲಿ ಬಿಜೆಪಿ ಪ್ರತಿಭಟನೆ.

ಫೆ. 26- ಸಮುದ್ರ ತಳದ ದ್ವಾರಕೆ ವೀಕ್ಷಿಸಿದ ಪ್ರಧಾನಿ; ಸ್ಕೂಬಾ ಡೈವಿಂಗ್ ಮೂಲಕ ಕೃಷ್ಣನಿಗೆ ನಮನ ಸಲ್ಲಿಸಿದ ನರೇಂದ್ರ ಮೋದಿ.

* ಹೃದಯಾಘಾತದಿಂದ ಶಾಸಕ ರಾಜಾ ವೆಂಕಟಪ್ಪ ನಾಯಕ ನಿಧನ.

ಫೆ. 27- ಸುಪ್ರಸಿದ್ಧ ಮೈಲಾರ ಕಾರಣಿಕ: 'ಸಂಪಾದಿತಲೇ ಪರಾಕ್'.

ಫೆ. 28- ಪಾಲಿಕೆ: 17.65 ಕೋಟಿ ರೂ. ಉಳಿತಾಯ ಬಜೆಟ್ ಮಂಡಿಸಿದ ಮೇಯರ್ ವಿನಾಯಕ ಪೈಲ್ವಾನ್.

* ವಿಧಾನಸೌಧದಲ್ಲಿ ಪಾಕ್ ಪರ ಘೋಷಣೆ: ಪೊಲೀಸರಿಂದ ಸ್ವಯಂ ಪ್ರೇರಿತ ಮೊಕದ್ದಮೆ ದಾಖಲು.

ಫೆ. 29- ಬೇಸಿಗೆಯ ಆರಂಭಿಕ ದಿನದಲ್ಲಿಯೇ ಕುಡಿಯುವ ನೀರಿನ ಸಮಸ್ಯೆ : ಪಾಲಿಕೆ ಸದಸ್ಯರ ಆತಂಕ.

☛ **ಮಾರ್ಚ್**

**ಲೋಕಸಭೆ ಚುನಾವಣೆ ಘೋಷಣೆ**

ಮಾ. 1-ಜಾತಿ ಗಣತಿ ವರದಿ ಸ್ವೀಕರಿಸಿದ ಸಿಎಂ ಸಿದ್ದರಾಮಯ್ಯ.

* ಅವೈಜ್ಞಾನಿಕ ಜಾತಿ ಗಣತಿಯನ್ನು ಸಮಾಜ ಒಪ್ಪುವುದಿಲ್ಲ: ಎಸ್ಸೆಸ್.

* ಜಯಪ್ರಕಾಶ ಹೆಗಡೆ ವರದಿ ಸ್ವೀಕಾರ ಬೇಡ: ರಂಭಾಪುರಿ ಶ್ರೀ

* ಕನ್ನಡದಲ್ಲಿ ಮೊದಲ ಐಎಎಸ್ ಪಡೆದ ಕೆ.ಶಿವರಾಮ್ ಇನ್ನಿಲ್ಲ.

ಮಾ. 2- ಬೆಂಗಳೂರು ರಾಮೇಶ್ವರ ಕೆಫೆಯಲ್ಲಿ ಸ್ಫೋಟ 10 ಜನರಿಗೆ ಗಾಯ.

* ಮುರುಘಾ ಮಠ ಆಡಳಿತ ಸಮಿತಿ ಅಧ್ಯಕ್ಷರಾಗಿ ಕಳಸದ ನೇಮಕ.

ಮಾ. 3- ಬೆಂಗಳೂರು ಸ್ಫೋಟ; ನಾಲ್ವರ ಬಂಧನ.

* ಮೋದಿ ಸರ್ಕಾರದ ಕೊನೆಯ ಮಂತ್ರಿಮಂಡಲದ ಸಭೆ.

ಮಾ. 6- ದುಗ್ಗಮ್ಮನ ಜಾತ್ರೆ: ಭಕ್ತಾದಿಗಳಿಗೆ ಮೂಲಭೂತ ಸೌಲಭ್ಯ ಕಲ್ಪಿಸಲು ಅಧಿಕಾರಿಗಳಿಗೆ ಶಾಸಕ ಶಾಮನೂರು ಶಿವಶಂಕರಪ್ಪ ಸೂಚನೆ.

ಮಾ. 7- ಸರ್ಕಾರ ನಡೆಸಲು ಉದ್ದೇಶಿಸಿದ್ದ 5,8,9 ಹಾಗೂ 11ನೇ ತರಗತಿಗಳ ಪಬ್ಲಿಕ್ ಪರೀಕ್ಷೆ ರದ್ದು ಮಾಡಿದ ಹೈಕೋರ್ಟ್.

ಮಾ. 8- ವಚನ ವಿಶ್ವವಿದ್ಯಾಲಯ ಸ್ಥಾಪನೆ: ಬಸವ ಕಲ್ಯಾಣದಲ್ಲಿ ಸಿಎಂ ಭರವಸೆ.

ಮಾ. 9- ರಾಜ್ಯಸಭೆಗೆ ಸುಧಾಮೂರ್ತಿ ನಾಮ ನಿರ್ದೇಶನ.

* ಕರ್ನಾಟಕ ಮುಕ್ತ ವಿವಿ ಕುಲಸಚಿವರಾಗಿ ಡಾ.ಹೆಚ್. ವಿಶ್ವನಾಥ್.

ಮಾ. 10- ಕೆಎಸ್ಸಾರ್ಟಿಸಿ ಮುಖ್ಯ ಬಸ್ ನಿಲ್ದಾಣಕ್ಕೆ ಪಂಪಾಪತಿ ಹೆಸರು; ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಸಹಮತ.

* ಆಂಧ್ರದಲ್ಲಿ ಬಿಜೆಪಿ-ಟಿಡಿಪಿ ಮೈತ್ರಿಗೆ ಸಮ್ಮತಿ.

ಮಾ. 11- ಲೋಕಪಾಲ್ ಅಧ್ಯಕ್ಷರಾಗಿ ಖಾನ್ವಿಲ್ಕರ್ ಪ್ರಮಾಣ ವಚನ.

* ಕಾಂಗ್ರೆಸ್ ಸಂವಿಧಾನ ತಿರುಚಿದ್ದನ್ನು ಸರಿಪಡಿಸಬೇಕಿದೆ:

ಮಾ. 12- ಭಾನುವಳ್ಳಿ : ಜಿಲ್ಲಾಡಳಿತದಿಂದ ಮಹಾದ್ವಾರ, ವೃತ್ತಗಳ ನಾಮಫಲಕ ದಿಢೀರ್ ತೆರವು, ಸೆಕ್ಷನ್ ಜಾರಿ.

ಮಾ. 13- ನಾಮಫಲಕದಲ್ಲಿ ಕನ್ನಡ ಭಾಷೆ ಶೇ. 60 ರಷ್ಟು ಪ್ರದರ್ಶನ ಕಡ್ಡಾಯ: ಜಿಲ್ಲಾಧಿಕಾರಿ ಡಾ. ಎಂ.ವಿ. ವೆಂಕಟೇಶ್ ಸೂಚನೆ.

ಮಾ. 14- ಸಿದ್ದೇಶ್ವರ ಬಿಗಿ ಪಟ್ಟಿಗೆ ಯಶಸ್ಸು; ಪತ್ನಿ ಗಾಯತ್ರಿ ಸಿದ್ದೇಶ್ವರಗೆ ಲೋಕಸಭೆ ಟಿಕೆಟ್ ಘೋಷಣೆ.

* ಕಾಂಗ್ರೆಸ್ ಗೆದ್ದರೆ ಮಹಿಳೆಯರಿಗೆ ವರ್ಷಕ್ಕೆ ಲಕ್ಷ ರೂ. ರಾಹುಲ್ ಗಾಂಧಿ ಘೋಷಣೆ.


* ಪುತ್ರನಿಗೆ ತಪ್ಪಿದ ಹಾವೇರಿ ಟಿಕೆಟ್, ಬಂಡಾಯದ ಸೂಚನೆ ನೀಡಿದ ಕೆ.ಎಸ್ ಈಶ್ವರಪ್ಪ.

ಮಾ. 15- ದಾವಣಗೆರೆ ಜಿಲ್ಲಾ ಬಿಜೆಪಿಯಲ್ಲಿ ಭುಗಿಲೆದ್ದ ಬಂಡಾಯ: ರವೀಂದ್ರನಾಥ್ ಮನೆಯಲ್ಲಿ ಸಭೆ, ಅಭ್ಯರ್ಥಿ ಗಾಯತ್ರಿ ಸಿದ್ದೇಶ್ವರ ಬದಲಾವಣೆಗೆ ಒತ್ತಾಯ.

* ಜಗಳೂರು ಮಾಜಿ ಶಾಸಕ ಹೆಚ್.ಪಿ ರಾಜೇಶ್ ಬಿಜೆಪಿಗೆ ಸೇರ್ಪಡೆ.

ಮಾ. 17- ಸರ್ಕಾರಿ ನೌಕರರ ವೇತನ ಶೇ.27.5 ಹೆಚ್ಚಳಕ್ಕೆ ಶಿಫಾರಸ್ಸು.

* ಲೋಕಸಭೆ ಚುನಾವಣೆ ಘೋಷಣೆ. ಏಪ್ರಿಲ್ 19 ರಿಂದ 7 ಹಂತಗಳಲ್ಲಿ ಚುನಾವಣೆ ನಡೆಸಲು ಆಯೋಗದ ತೀರ್ಮಾನ.



* 'ದಾವಣಗೆರೆ ಮದರ್ ಥರೇಸಾ' ನಾಗಮ್ಮ ಕೇಶವಮೂರ್ತಿ ಇನ್ನಿಲ್ಲ.

ಮಾ. 18- ನಗರದೇವತೆ ದುರ್ಗಾಂಬಿಕಾ ದೇವಿ ಜಾತ್ರೆಗೆ ಸಜ್ಜಾದ ದೇವನಗರಿ.

* ಭಾರತ್ ಜೋಡೋ ಯಾತ್ರೆ ಸಂಪೂರ್ಣ: ಇವಿಎಂ ಇಲ್ಲದೇ ಮೋದಿ ಗೆಲ್ಲಲಾಗದು ಎಂದ ರಾಹುಲ್ ಗಾಂಧಿ.

ಮಾ. 20- ಕಾಂಗ್ರೆಸ್‌ನಿಂದ ಐದು ನ್ಯಾಯ, ಇಪ್ಪತ್ತೈದು ಗ್ಯಾರಂಟಿ ಪ್ರಣಾಳಿಕೆ.

ಮಾ. 21- ಸಂಪ್ರದಾಯದಂತೆ ನಡೆದ ನಗರದೇವತೆ ದುಗ್ಗಮ್ಮನ ಜಾತ್ರೆ.

ಮಾ. 22-ದಾವಣಗೆರೆ ಲೋಕಸಭಾ ಕ್ಷೇತ್ರ; ಪ್ರಭಾ ಮಲ್ಲಿಕಾರ್ಜುನ್‌ಗೆ ಟಿಕೆಟ್.

* ಅಬಕಾರಿ ಅಕ್ರಮ : ದೆಹಲಿ ಮುಖ್ಯಮಂತ್ರಿ ಕೇಜ್ರಿವಾಲ್ ಬಂಧನ.

ಮಾ. 23- ದೇಶದ 150 ಪ್ರಮುಖ ಜಲಾಶಯಗಳಲ್ಲಿ ನೀರಿನ ಸಂಗ್ರಹ ಕುಸಿತ.

* ಭಾರತಿ ಏರ್‌ಟೆಲ್, ಅಧೀನ ಸಂಸ್ಥೆಯಿಂದ ಬಿಜೆಪಿಗೆ 234 ಕೋಟಿ ರೂಪಾಯಿ ದೇಣಿಗೆ.

ಮಾ. 24- ಬರ ಪರಿಹಾರದ ಹಣ; ಸುಪ್ರೀಂ ಕೋರ್ಟ್‌ಗೆ ರಾಜ್ಯದ ಮೊರೆ.

ಮಾ. 25- ಎಲ್ಲ ಅನುದಾನ ಬಿಡುಗಡೆಯಾಗಿದೆ. ಕರ್ನಾಟಕ ಸರ್ಕಾರ ಹೇಳುತ್ತಿ ರುವುದು ಸಂಪೂರ್ಣ ಸುಳ್ಳು; ಕೇಂದ್ರ ಹಣಕಾಸು ಸಚಿವೆ ಸ್ಪಷ್ಟನೆ.

ಮಾ. 26- ಮತ್ತೆ ಬಿಜೆಪಿ ಸೇರಿದ ಗಾಲಿ ಜನಾರ್ದನ ರೆಡ್ಡಿ.

* ಹರಿಹರ ನದಿಯಲ್ಲಿ ಮುಳುಗಿ ಇಬ್ಬರು ಸಹೋದರ ಬಾಲಕರ ಸಾವು

ಮಾ. 27- ಬಿ.ಎಸ್.ಯಡಿಯೂರಪ್ಪ ನೇತೃತ್ವದಲ್ಲಿ ಸಭೆ. ಬಿಜೆಪಿ ಭಿನ್ನಮತಕ್ಕೆ ತೇಪೆ. ಎಸ್.ಎ. ರವೀಂದ್ರನಾಥ್‌ಗೆ ಗಾಯತ್ರಿ ಸಿದ್ದೇಶ್ವರ ಗೆಲುವಿನ ನೇತೃತ್ವ.

ಮಾ. 29- ರಾಮೇಶ್ವರ ಕೆಫೆ ಸ್ಫೋಟ: ಪ್ರಮುಖ ಆರೋಪಿ ಬಂಧನ.

ಮಾ. 30- ಲೋಕಸಭೆ ಚುನಾವಣೆ: ಒಗ್ಗಟ್ಟಿನ ಹೋರಾಟಕ್ಕೆ ಬಿಜೆಪಿ-ಜೆಡಿಎಸ್ ಸಮನ್ವಯ ಸಮಿತಿ ಸಭೆಯಲ್ಲಿ ವರಿಷ್ಠರ ಕರೆ.

ಮಾ. 31- ಕಾಂಗ್ರೆಸ್ ಟಿಕೆಟ್ ಬದಲಾಗದು, ಪ್ರಭಾ ಗೆಲುವಿಗೆ ವಿನಯ್‌ಕುಮಾರ್ ಕೈಜೋಡಿಸಲಿ : ಪತ್ರಿಕಾಗೋಷ್ಠಿಯಲ್ಲಿ ಕಾಂಗ್ರೆಸ್ ಜಿಲ್ಲಾಧ್ಯಕ್ಷ ಮಂಜಪ್ಪ ಕರೆ.

☛ **ಏಪ್ರಿಲ್**

**ಮತಯಂತ್ರ ಪ್ರಶ್ನಿಸುವ ಮನವಿ ಸು.ಕೋ ತಿರಸ್ಕಾರ**

ಏ. 1- ಮನೆಗೆ ತೆರಳಿ ಎಲ್.ಕೆ ಅಡ್ವಾಣಿಯವರಿಗೆ 'ಭಾರತ ರತ್ನ' ಪ್ರದಾನ ಮಾಡಿದ ರಾಷ್ಟ್ರಪತಿ ದ್ರೌಪದಿ ಮುರ್ಮು.

ಏ. 2- ಉತ್ತರ ಕರ್ನಾಟಕದಲ್ಲಿ ಬಿಸಿಗಾಳಿ ಪ್ರಕೋಪ.

ಏ. 4- ಮಂಡ್ಯ ಚುನಾವಣಾ ಸ್ಪರ್ಧೆಯಿಂದ ಹಿಂದೆ ಸರಿದ ಸುಮಲತಾ.

* ಕೆಪಿಸಿಸಿ ಉಪಾಧ್ಯಕ್ಷರಾಗಿ ಹೆಚ್.ಆಂಜನೇಯ, ಪ್ರಧಾನ ಕಾರ್ಯದರ್ಶಿ ಯಾಗಿ ಡಿ.ಬಸವರಾಜ್ ನೇಮಕ.

ಏ. 5- ಲೋಕಸಭೆ: ಮೊದಲ ಹಂತದ ಚುನಾವಣೆಗೆ ನಾಮಪತ್ರ ಸಲ್ಲಿಕೆ ಮುಕ್ತಾಯ: ಅಭ್ಯರ್ಥಿಗಳಿಂದ ಬಿರುಸಿನ ಪ್ರಚಾರ ಆರಂಭ.

ವಿಜಯಪುರ: ಕೊಳವೆ ಬಾವಿಯಲ್ಲಿ ಬಿದ್ದಿದ್ದ ಎರಡು ವರ್ಷದ ಮಗುವಿನ ರಕ್ಷಣೆ.

ಏ. 9- ಜೋಷಿ ವಿರುದ್ಧ ಸ್ಪರ್ಧಿಸಲು ಶ್ರೀ ದಿಂಗಾಲೇಶ್ವರ ಸ್ವಾಮೀಜಿ ನಿರ್ಧಾರ.

* ಪರಿಶಿಷ್ಟ, ಒಬಿಸಿ ಮಹಿಳೆಯರಿಗೆ ವರ್ಷಕ್ಕೆ ಲಕ್ಷ ರೂ. ರಾಹುಲ್.

ಏ. 11- ಪಿಯು: ಜಿಲ್ಲೆಗೆ 21 ನೇ ಸ್ಥಾನ. ರಾಜ್ಯಾದ್ಯಂತ ಶೇ.81.15 ಫಲಿತಾಂಶ.

* ಅಕ್ರಮ ಆಸ್ತಿ: ಡಿಕೆಶಿಗೆ ಲೋಕಾಯುಕ್ತ ನೋಟಿಸ್.

ಏ. 12- ವಾಗೀಶ್ ಸ್ವಾಮಿ ಸೇರಿ ನಾಲ್ವರು ಬಿಜೆಪಿ ಪುರಸಭೆ ಸದಸ್ಯರು ಕಾಂಗ್ರೆಸ್‌ಗೆ ಸೇರ್ಪಡೆ.

* ಕಾಂಗ್ರೆಸ್ ಹಿರಿಯ ಮುಖಂಡ ಶಿವನಳ್ಳಿ ರಮೇಶ್ ಬಿಜೆಪಿ ಸೇರ್ಪಡೆ.

ಏ. 13- ಕಾಂಗ್ರೆಸ್‌ನಿಂದ ಪ್ರಭಾ ಮಲ್ಲಿಕಾರ್ಜುನ್, ಪಕ್ಷೇತರರಾಗಿ ವಿನಯ್‌ಕುಮಾರ್ ನಾಮಪತ್ರ ಸಲ್ಲಿಕೆ.

* ಮಾಜಿ ಶಾಸಕ ಬಿಜೆಪಿಯ ಗುರುಸಿದ್ದನಗೌಡ ಕಾಂಗ್ರೆಸ್ ಸೇರ್ಪಡೆ.

ಏ. 15- ಇಸ್ರೇಲ್ ಮೇಲೆ ಇರಾನ್ ದಾಳಿ; 300 ಕ್ಕೂ ಹೆಚ್ಚು ದ್ರೋಣ್, ಕ್ಷಿಪಣಿ ಬಳಕೆ, ದಾಳಿಯ ಶೇ.99ರಷ್ಟನ್ನು ತಡೆದ ಇಸ್ರೇಲ್.

ಏ. 17-ಯುಪಿಎಸ್‌ಸಿ: ದಾವಣಗೆರೆ ಸೌಭಾಗ್ಯಗೆ 101ನೇ ರ್‍ಯಾಂಕ್.

* ನಟ, ನಿರ್ಮಾಪಕ, ನಿರ್ದೇಶಕ ದ್ವಾರಕೀಶ್ ಇನ್ನಿಲ್ಲ.

ಏ. 19- ಹುಬ್ಬಳ್ಳಿ: ಕಾಲೇಜು ಆವರಣದಲ್ಲಿಯೇ ವಿದ್ಯಾರ್ಥಿನಿ ನೇಹಾ ಹಿರೇಮಠ್ ಹತ್ಯೆ; ಚಾಕುವಿನಿಂದ ಹಿರಿದ ಫಯಾಜ್ ಬಂಧನ.

* ನಟಿ ಶಿಲ್ಪಾ ಶೆಟ್ಟಿ ದಂಪತಿಗೆ ಸೇರಿದ 98 ಕೋಟಿ ರೂ. ಆಸ್ತಿ ವಶಪಡಿಸಿಕೊಂಡ ಜಾರಿ ನಿರ್ದೇಶನಾಲಯ.

ಏ. 20- ದೇಶದಲ್ಲಿ ಮೊದಲ ಹಂತದ ಚುನಾವಣೆ: ಶೇ.63 ರಷ್ಟು ಮತದಾನ.

* ದಾವಣಗೆರೆ: 33 ಅಭ್ಯರ್ಥಿಗಳ ನಾಮಪತ್ರ ಸಿಂಧು.

ಏ. 23- ಚುನಾವಣೆಗೆ ಮೊದಲೇ ಅರಳಿದ ಕಮಲ.!, ಸೂರತ್‌ನಲ್ಲಿ ಬಿಜೆಪಿ ಅಭ್ಯರ್ಥಿ ಮುಕೇಶ್ ದಲಾಲ್ ಅವಿರೋಧ ಆಯ್ಕೆ.

* ಮಾಗಾನಹಳ್ಳಿ ರತ್ನಮ್ಮ ಅವರಿಗೆ 'ಅಕ್ಕ ಶ್ರೀ' ಪ್ರಶಸ್ತಿ.

ಏ. 27-ಮತಯಂತ್ರ ಪ್ರಶ್ನಿಸುವ ಮನವಿಗಳ ತಿರಸ್ಕರಿಸಿದ ಸುಪ್ರೀಂ ಕೋರ್ಟ್. ಮತಪತ್ರ ವ್ಯವಸ್ಥೆಗೆ ಮರಳಲು ನಕಾರ.

* ರಾಜ್ಯದಲ್ಲಿ ನಡೆದ ಮೊದಲ ಹಂತದ ಲೋಕಸಭೆ ಚುನಾವಣೆಯಲ್ಲಿ ಶೇ.69.23ರಷ್ಟು ಮತದಾನ.

ಏ. 29- ಗೆಲುವಿನ ಬೆಣ್ಣೆ ದೋಸೆ ಸವಿಯಲು ಸಿದ್ಧರಾಗಿ; ದಾವಣಗೆರೆಯಲ್ಲಿ ಬಿಜೆಪಿ ಅಭ್ಯರ್ಥಿಗಳ ಪರ ಚುನಾವಣಾ ಪ್ರಚಾರದಲ್ಲಿ ಪ್ರಧಾನಿ ಮೋದಿ.

ಏ. 30- ಚಾಮರಾಜ ನಗರ ಸಂಸದ ಶ್ರೀನಿವಾಸ ಪ್ರಸಾದ್ ನಿಧನ.

☛ **ಮೇ**

**ಬ್ಯಾಡಗಿ ಮೆಣಸಿನಕಾಯಿಗೆ ಅಂತರರಾಷ್ಟ್ರೀಯ ಮನ್ನಣೆ**

ಮೇ 1- ಮತ ಎಣಿಕೆ ಕೇಂದ್ರದ ಪರಿಶೀಲನೆ ಮಾಡಿದ ಜಿಲ್ಲಾಧಿಕಾರಿ.

* ಪ್ರಜ್ವಲ್ ಪೆನ್‌ಡ್ರೈವ್ ಪ್ರಕರಣಕ್ಕೆ ದಿನಕ್ಕೊಂದು ತಿರುವು. ಮಹಿಳಾ ಅಧಿಕಾರಿಗಳ ವಿಡಿಯೋ ಸರ್ಕಾರಕ್ಕೆ ತಲೆನೋವು. ವಿದೇಶದಲ್ಲಿರುವ ಪ್ರಜ್ವಲ್.

ಮೇ 2- ದೆಹಲಿಯ 150ಕ್ಕೂ ಹೆಚ್ಚು ಶಾಲೆಗಳಿಗೆ ಹುಸಿ ಬಾಂಬ್ ಬೆದರಿಕೆ.'

ಮೇ 6- ಲೋಕಸಭೆ: 2ನೇ ಹಂತಹ ಚುನಾವಣಾ ಪ್ರಚಾರಕ್ಕೆ ತೆರೆ.

* ಅಭ್ಯರ್ಥಿಗಳ ಭರ್ಜರಿ ಪ್ರಚಾರ; ಪರಸ್ಪರ ಕೆಸರೆರಚಾಟ.

ಮೇ 7- ರಾಜ್ಯದಲ್ಲಿ ಇಂದು ದಾವಣಗೆರೆ ಸೇರಿದಂತೆ 14 ಕ್ಷೇತ್ರಗಳಿಗೆ ಮತದಾನ.

* ಪ್ರಜ್ವಲ್ ಪ್ರಕರಣದಲ್ಲಿ ದೇವೇಗೌಡ, ಕುಮಾರಸ್ವಾಮಿ ಹೆಸರು ಬಳಸದಂತೆ ನ್ಯಾಯಾಲಯದ ತಡೆಯಾಜ್ಞೆ.

ಮೇ 8- ದಾವಣಗೆರೆ ಲೋಕಸಭಾ ಕ್ಷೇತ್ರದಲ್ಲಿ ಶೇ.77 ಮತದಾನ.

* ಬಿಜೆಪಿ ಅಭ್ಯರ್ಥಿ ಗಾಯತ್ರಿ ಮತದಾನದ ಗೌಪ್ಯತೆ ಉಲ್ಲಂಘನೆ. ಎಸ್ಸೆಸ್ಸೆಂ ಆರೋಪ. ಸಂಸದ ಸಿದ್ದೇಶ್ವರ ವಿರುದ್ಧ ದೂರು ದಾಖಲು.

ಮೇ 9- ಅಪಹರಣ ಪ್ರಕರಣ: ರೇವಣ್ಣ ಏಳು ದಿನ ನ್ಯಾಯಾಂಗ ಕಸ್ಟಡಿಗೆ.

* ಸೌರ ವಿದ್ಯುತ್ ಉತ್ಪಾದನೆ: 3ನೇ ಸ್ಥಾನಕ್ಕೆ ಬಂದ ಭಾರತ.

ಮೇ 10- ಎಸ್ಸೆಸ್ಸೆಲ್ಸಿ ಫಲಿತಾಂಶ: 23ನೇ ಸ್ಥಾನಕ್ಕೆ ಕುಸಿದ ಜಿಲ್ಲೆ:

* ಸಿದ್ಧಗಂಗಾ ಶಾಲೆ ವಿದ್ಯಾರ್ಥಿನಿ ಹೆಚ್.ಜಿ ಗಾನವಿ ಜಿಲ್ಲೆಗೆ ಟಾಪರ್.

ಮೇ 11- ಸೈಬರ್ ಅಪರಾಧ: 28 ಸಾವಿರ ಮೊಬೈಲ್, 20 ಲಕ್ಷ ಸಂಪರ್ಕಗಳ ವಿರುದ್ಧ ಕ್ರಮಕ್ಕೆ ಕೇಂದ್ರದ ಸೂಚನೆ.

* ಚುನಾವಣಾ ಪ್ರಚಾರಕ್ಕೆ ಮುಖ್ಯಮಂತ್ರಿ ಕೇಜ್ರಿವಾಲ್‌ಗೆ ಜಾಮೀನು.

ಮೇ 15- ವಕೀಲರು ಗ್ರಾಹಕರ ಕಾಯ್ದೆಯಡಿ ಬರುವುದಿಲ್ಲ: ಸುಪ್ರೀಂ ಕೋರ್ಟ್

ಮೇ 17- ಕೋವ್ಯಾಕ್ಸಿನ್ ಲಸಿಕೆ ಪಡೆದ ಮೂರನೇ ಒಂದರಷ್ಟು ಜನರಲ್ಲಿ ಅಡ್ಡ ಪರಿಣಾಮ ಅಧ್ಯಯನ ವರದಿ.

* ಚಿತ್ರದುರ್ಗ ಮಾದಾರ ಚೆನ್ನಯ್ಯ ಗುರುಪೀಠಕ್ಕೆ ಬಾಲ ವಟುವಿನ ಸ್ವೀಕಾರ.

ಮೇ 20- ಸಿಐಎಸ್‌ಎಫ್‌ಗೆ ಸಂಸತ್ ಭದ್ರತಾ ಹೊಣೆ.

* ಮುಜಾಫರಪುರ: ಮೋದಿಗೆ ಮತ ನೀಡದಂತೆ ಹೇಳಿದ ಸರ್ಕಾರಿ ಶಾಲಾ ಶಿಕ್ಷಕನ ಬಂಧನ.

* ಭದ್ರಾ ಜಲಾಶಯಕ್ಕೆ ಹೆಚ್ಚಿದ ಒಳ ಹರಿವು.

ಮೇ 21- ಹೆಲಿಕ್ಯಾಪ್ಟರ್ ಅಪಘಾತದಲ್ಲಿ ಇರಾನ್ ಅಧ್ಯಕ್ಷ ಇಬ್ರಾಹಿಂ ರೈಸಿ ಸಾವು.

ಮೇ 22- ರಾಜ್ಯದಲ್ಲಿ ವಿದ್ಯುತ್ ಅಭಾವ ನೀಗಿಸಿದ ಮಳೆ.

* ಬ್ಯಾಡಗಿ ಮೆಣಸಿನಕಾಯಿ ಮಾರುಕಟ್ಟೆಗೆ ಅಂತರರಾಷ್ಟ್ರೀಯ ಮನ್ನಣೆ.

26- ಪೊಲೀಸ್ ವಶದಲ್ಲಿದ್ದ ವ್ಯಕ್ತಿ ಸಾವು; ಚನ್ನಗಿರಿ ಪೊಲೀಸ್ ಠಾಣೆ ಧ್ವಂಸ, 13 ಜನ ಪೊಲೀಸರಿಗೆ ಗಾಯ. ಇನ್ಸ್‌ಪೆಕ್ಟರ್-ಡಿವೈಎಸ್ಪಿ ಅಮಾನತ್ತಿಗೆ ಮುಖ್ಯಮಂತ್ರಿ ಆದೇಶ.

**(ಮುಂದುವರೆದಿದೆ...)**




# ಜನತಾವಾಣಿ ಸಿಂಹಾವಲೋಕನ ...



27- ಚನ್ನಗಿರಿ ಠಾಣೆ ಧ್ವಂಸ ಪ್ರಕರಣ ಸಿಐಡಿ ತನಿಖೆಗೆ ಆದೇಶ: 25 ಜನ ಆರೋಪಿಗಳ ಬಂಧನ.

* ಲೋಕಸಭೆ 6ನೇ ಹಂತದ ಚುನಾವಣೆಯಲ್ಲಿ ಶೇ.63.36 ಮತದಾನ.

28- ಪಶ್ಚಿಮ ಬಂಗಾಳದಲ್ಲಿ ರೆಮಲ್ ಚಂಡಮಾರುತದಿಂದ ಏಳು ಜನರ ಸಾವು; 15 ಸಾವಿರ ಮನೆಗಳಿಗೆ ಹಾನಿ.

* ಯಡಿಯೂರಪ್ಪ ವಿರುದ್ಧ ಪೋಕ್ಸೋ ಪ್ರಕರಣ ದಾಖಲಿಸಿದ್ದ ಮಹಿಳೆ ಸಾವು.

ಮೇ 31- ಸಂಸದ ಪ್ರಜ್ವಲ್ ರೇವಣ್ಣ ಎಸ್‌ಐಟಿ ವಶಕ್ಕೆ.

* ವಾಲ್ಮೀಕಿ ನಿಗಮದ ಅವ್ಯವಹಾರ : ಯೂನಿಯನ್ ಬ್ಯಾಂಕ್‌ನ ಮೂವರು ಅಧಿಕಾರಿಗಳ ಅಮಾನತ್ತು.

* ಕೇರಳ, ಈಶಾನ್ಯಕ್ಕೆ ಮುಂಗಾರು ಆಗಮನ.

## ☛ ಜೂನ್

**ದೇಶದಲ್ಲಿ ಮತ್ತೆ ಮೋದಿ ಸರ್ಕಾರ**

ಜೂ. 1- ಬ್ರಿಟನ್‌ನಿಂದ ಭಾರತಕ್ಕೆ 100 ಮೆಟ್ರಿಕ್ ಟನ್ ಬಂಗಾರ ವಾಪಾಸ್.

* ಬಿಸಿಲ ಆಘಾತಕ್ಕೆ ಸಿಲುಕಿ ಉತ್ತರಪ್ರದೇಶ ಮತ್ತು ಬಿಹಾರದಲ್ಲಿ 25 ಚುನಾವಣಾ ಸಿಬ್ಬಂದಿ ಸಾವು.

ಜೂ. 2 ಜಾನಪದ ವಿದ್ವಾಂಸ ಡಾ.ಎಂ.ಜಿ ಈಶ್ವರಪ್ಪ ಇನ್ನಿಲ್ಲ.

* ಮತದಾನೋತ್ತರ ಸಮೀಕ್ಷೆ: ಮೋದಿಗೆ ಮೂರನೇ ಬಾರಿ ಮುಕುಟ.

ಜೂ. 3- ವೀರಶೈವ ಲಿಂಗಾಯತ ಮಹಾಸಭಾ ಸದಸ್ಯತ್ವ ಅಭಿಯಾನಕ್ಕೆ ಎಸ್ಸೆಸ್ ಚಾಲನೆ.

ಜೂ. 5- ಮುಗ್ಗರಿಸಿದ ಮೋದಿಗೆ ಮೈತ್ರಿಯೇ ಆಸರೆ. ಲೋಕಸಭೆ ಬಲಾಬಲ: ಎನ್‌ಡಿಎ -292, ಐಎನ್‌ಡಿಐಎ-232. ಮಣ್ಣು ಮುಕ್ಕಿದ ಸಮೀಕ್ಷೆಗಳು.

* ದಾವಣಗೆರೆ ಬಿಜೆಪಿ ಭದ್ರಕೋಟೆ ಛಿದ್ರ. 25 ವರ್ಷಗಳ ನಂತರ ದಾವಣಗೆರೆ ಕೈವಶ: ಪ್ರಥಮ ಮಹಿಳಾ ಸಂಸದರಾಗಿ ಡಾ.ಪ್ರಭಾ ಮಲ್ಲಿಕಾರ್ಜುನ್.



* ದೇಶದ ಹಿಂದಿ ಭಾಷಿಗರ ನಾಡಿನಲ್ಲಿ ಪುಟಿದ ಐಎನ್‌ಡಿಐಎ.

* ರಾಜ್ಯದಲ್ಲಿ ಗ್ಯಾರಂಟಿ ಬಿಟ್ಟು ಕಮಲ ಹಿಡಿದ ಮತದಾರ. ಎನ್.ಡಿ.ಎ.ಗೆ-19, ಕಾಂಗ್ರೆಸ್‌ಗೆ 9 ಸ್ಥಾನಕ್ಕೆ ಸೀಮಿತ.

* ರಾಜ್ಯದ ಮೂವರು ಮಾಜಿ ಮುಖ್ಯಮಂತ್ರಿಗಳು ಲೋಕಸಭೆಗೆ (ಕುಮಾರಸ್ವಾಮಿ, ಜಗದೀಶ್ ಶೆಟ್ಟರ್, ಬಸವರಾಜ ಬೊಮ್ಮಾಯಿ).

ಜೂ. 7- ವಾಲ್ಮೀಕಿ ನಿಗಮ ಹಗರಣ : ಸಚಿವ ನಾಗೇಂದ್ರ ತಲೆದಂಡ.

ಜೂ. 9- ಮಾಧ್ಯಮ ವಲಯದ ದಿಗ್ಗಜ ರಾಮೋಜಿರಾವ್ ಇನ್ನಿಲ್ಲ.

* ಮಣಿಪುರದಲ್ಲಿ ಪೊಲೀಸ್ ಠಾಣೆಗಳು, ಮನೆಗಳಿಗೆ ಉಗ್ರರಿಂದ ಬೆಂಕಿ.

ಜೂ. 10- ಮೂರನೇ ಬಾರಿ ಮೋದಿಗೆ ರಾಜ್ಯಭಾರ. ರಾಷ್ಟ್ರಪತಿ ಭವನದಲ್ಲಿ ನಡೆದ ಸಮಾರಂಭದಲ್ಲಿ ಪ್ರಧಾನಿ, ಸಚಿವರಿಗೆ ಪ್ರಮಾಣ ವಚನ.

* ಸಂಪುಟದಲ್ಲಿ ರಾಜ್ಯದ ಐವರಿಗೆ ಸ್ಥಾನ: ನಿರ್ಮಲ ಸೀತಾರಾಮನ್, ಕುಮಾರಸ್ವಾಮಿ, ಜೋಷಿ, ಸೋಮಣ್ಣ ಮತ್ತು ಶೋಭಾಗೆ ಸಂಪುಟ ದರ್ಜೆ.

* ಸೋಲಿಗೆ ಯಾರನ್ನೂ ನಿಂದಿಸಿದರೂ ಪ್ರಯೋಜನವಿಲ್ಲ: ಬಿಜೆಪಿ ಮುಖಂಡರು, ಕಾರ್ಯಕರ್ತರ ಕೃತಜ್ಞತಾ ಸಭೆಯಲ್ಲಿ ಜಿ.ಎಂ ಸಿದ್ದೇಶ್ವರ.

ಜೂ. 11- ಎಸ್ಸೆಸ್-94; ಕ್ರಿಕೆಟ್ ಪಂದ್ಯಾವಳಿಗೆ ಚಾಲನೆ.

ಜೂ. 12- ಕೊಲೆ ಪ್ರಕರಣದಲ್ಲಿ ಸಿಲುಕಿದ ದರ್ಶನ್ ಸೇರಿ 13 ಜನರ ಬಂಧನ.

* ಒಡಿಶಾದ ನೂತನ ಮುಖ್ಯಮಂತ್ರಿಯಾಗಿ ಮೋಹನ್ ಮಾಂಝಿ.

* ಕೊಲೆಗೀಡಾದ ರೇಣುಕಾಸ್ವಾಮಿ ಚಿತ್ರದುರ್ಗ ನಿವಾಸದಲ್ಲಿ ಸ್ಮಶಾನ ಮೌನ

* ಮೋದಿ ಮಂತ್ರಿಮಂಡಲ 'ಪರಿವಾರ ಮಂಡಳಿ' ರಾಹುಲ್ ಗಾಂಧಿ ಟೀಕೆ.

ಜೂ. 15 - ಒಂದು ದೇಶ, ಒಂದು ಚುನಾವಣೆ: ಸಂಪುಟಕ್ಕೆ ವರದಿ ಮಂಡನೆ

* ಹೊಂದಾಣಿಕೆ ರಾಜಕೀಯ ಮಾಡಿದ್ದಾರೆಂಬ ಆರೋಪದಲ್ಲಿ ಹುರುಳಿಲ್ಲ; ಸಂಸದೆ ಡಾ.ಪ್ರಭಾ ಮಲ್ಲಿಕಾರ್ಜುನ್ ಸ್ಪಷ್ಟನೆ.

ಜೂ. 16- ಪಹಣಿಗೆ ಆಧಾರ್ ಲಿಂಕ್: ಜಿಲ್ಲೆಗೆ 3ನೇ ಸ್ಥಾನ.

* ಐದು ದಿನಗಳ ಕಾಲ ನಟ ದರ್ಶನ್ ಪೊಲೀಸ್ ವಶಕ್ಕೆ.

ಜೂ. 17- 94ಕ್ಕೆ ಎಸ್ಸೆಸ್: ಶುಭಾಶಯಗಳ ಮಹಾಪೂರ.

* ದರ ಏರಿಕೆಗೆ ಬಿಜೆಪಿ ನೀತಿಯೇ ಕಾರಣ: ಪೆಟ್ರೋಲ್, ಡೀಸೆಲ್ ದರ ಏರಿಕೆ ಸಮರ್ಥಿಸಿಕೊಂಡ ಸಿಎಂ ಸಿದ್ದರಾಮಯ್ಯ.

ಜೂ. 19- ಪ್ರಜ್ವಲ್ ಪ್ರಕರಣ: ಅಪಹರಣಕ್ಕೆ ಸಂಬಂಧಿಸಿದ ಪ್ರಕರಣದಲ್ಲಿ ಭವಾನಿ ರೇವಣ್ಣಗೆ ಜಾಮೀನು.

ಜೂ. 21- ತಮಿಳುನಾಡು: ಕಳ್ಳಭಟ್ಟಿ ದುರಂತದಲ್ಲಿ 34 ಸಾವು.

* ದೆಹಲಿ ಮುಖ್ಯಮಂತ್ರಿ ಕೇಜ್ರಿವಾಲ್‌ಗೆ ಜಾಮೀನು.

* ದೇಶದಲ್ಲಿ ಬಿಸಿಲ ಆಘಾತಕ್ಕೆ 110 ಜನರ ಸಾವು.

ಜೂ. 22- ಪ್ರಜ್ವಲ್ ಸಹೋದರ ಸೂರಜ್ ರೇವಣ್ಣ ವಿರುದ್ಧ ಅಸಹಜ ಲೈಂಗಿಕ ದೌರ್ಜನ್ಯ ಆರೋಪ.

* ಹಜ್ ಯಾತ್ರೆಯಲ್ಲಿ 98 ಭಾರತೀಯರ ಸಾವು.

ಜೂ. 23- ಪರಪ್ಪನ ಅಗ್ರಹಾರಕ್ಕೆ ದರ್ಶನ್: ಹತ್ಯೆ ತನಿಖೆಗೆ ಐಟಿ ಪ್ರವೇಶ.

* ಹಿರಿಯ ಸಾಹಿತಿ ಕಮಲಾ ಹಂಪನಾ ಇನ್ನಿಲ್ಲ.

ಜೂ. 24- ನೀಟ್ ಅಕ್ರಮ 17 ವಿದ್ಯಾರ್ಥಿಗಳ ಡಿಬಾರ್, ಐವರ ಬಂಧನ.

* ವಿಧಾನ ಪರಿಷತ್ ಸದಸ್ಯ ಸೂರಜ್ ರೇವಣ್ಣ ಬಂಧನ, 14 ದಿನಗಳು ನ್ಯಾಯಾಂಗ ಕಸ್ಟಡಿಗೆ.

ಜೂ. 25- ಕನ್ನಡದಲ್ಲಿ ಪ್ರಮಾಣವಚನ ಸ್ವೀಕರಿಸಿದ ಸಂಸದೆ ಡಾ.ಪ್ರಭಾ.

* ರಾಜ್ಯ ತಾಂಡ ಅಭಿವೃದ್ಧಿ ನಿಗಮದ ಅಧ್ಯಕ್ಷರಾಗಿ ಜಯದೇವನಾಯ್ಕ.

ಜೂ. 26- ನಂದಿನ ಹಾಲಿನ ದರ ಲೀಟರ್‌ಗೆ 2 ರೂ.ಹೆಚ್ಚಳ.

* ಲೋಕಸಭೆ ವಿರೋಧ ಪಕ್ಷದ ನಾಯಕರಾಗಿ ರಾಹುಲ್ ಗಾಂಧಿ.

ಜೂ. 27- ಹಿಜಾಬ್ ನಿಷೇಧ ತಡೆಗೆ ಹೈಕೋರ್ಟ್ ನಕಾರ.

* ಲೋಕಸಭಾಧ್ಯಕ್ಷರಾಗಿ ಓಂ ಬಿರ್ಲಾ ಆಯ್ಕೆ.

ಜೂ. 29- ಹಾವೇರಿ ಬಳಿ ಅಪಘಾತ: 13 ಮಂದಿ ಸಾವು.

ಜೂ. 30- ರೋಚಕ ಪಂದ್ಯದಲ್ಲಿ ಭಾರತಕ್ಕೆ 'ಟಿ-20' ವಿಶ್ವಕಪ್ ಗರಿ.

* 'ಟಿ-20' ಅಂತರಾಷ್ಟ್ರೀಯ ಪಂದ್ಯಗಳಿಗೆ ಕೊಯ್ಲಿ ವಿದಾಯ.

## ☛ ಜುಲೈ

**ವಾಲ್ಮೀಕಿ ನಿಗಮದ ಅಕ್ರಮ: ಜೈಲು ಪಾಲಾದ ನಾಗೇಂದ್ರ**

ಜು. 1- ಬ್ರಿಟೀಷ್ ಕಾಯ್ದೆಗಳಿಗೆ ತೆರೆ: ಇಂದಿನಿಂದ ನೂತನ ಅಪರಾಧಿಕ ಕಾಯ್ದೆಗಳು ಜಾರಿ.

* ಟಿ-20 ವಿಶ್ವಕಪ್ ಗೆದ್ದ ಭಾರತೀಯ ತಂಡಕ್ಕೆ ಬಿಸಿಸಿಐನಿಂದ 125 ಕೋಟಿ ರೂ.ಬಹುಮಾನ.

ಜು. 2- ಹಿಂದೂ ಎಂದು ಹೇಳಿಕೊಳ್ಳುವವರು ಸದಾ ಹಿಂಸೆ, ದ್ವೇಷ ಹಾಗೂ ಅಸತ್ಯದಲ್ಲಿ ತೊಡಗಿದ್ದಾರೆ: ರಾಹುಲ್ ಗಾಂಧಿ ಆರೋಪ.

ಜು. 3- ಉತ್ತರಪ್ರದೇಶದ ಹತ್ರಾಸ್ ಸತ್ಸಂಗ: ಕಾಲ್ತುಳಿತಕ್ಕೆ 116 ಸಾವು.

* ಆರು ದಿನ ಮೊದಲೇ ದೇಶ ಆವರಿಸಿದ ಮುಂಗಾರು.

* ಮತಾಂತರ ಸಮಾವೇಶ ತಕ್ಷಣಕ್ಕೆ ನಿಲ್ಲದಿದ್ದರೆ ಬಹುಸಂಖ್ಯಾತರು ಅಲ್ಪಸಂಖ್ಯಾತರಾಗುತ್ತಾರೆ: ಅಲಹಾಬಾದ್ ಹೈಕೋರ್ಟ್ ಟಿಪ್ಪಣೆ.

ಜು. 6- ದಾವಣಗೆರೆ ನೂತನ ಜಿಲ್ಲಾಧಿಕಾರಿಯಾಗಿ ಜಿ.ಎಂ ಗಂಗಾಧರಸ್ವಾಮಿ.

* ಭದ್ರಾ ಜಲಾಶಯಕ್ಕೆ ಒಳ ಹರಿವು ಹೆಚ್ಚಳ.

ಜು. 8- ಭದ್ರಾ ಡ್ಯಾಂ ರಿವರ್ ಗೇಟ್ ದುರಸ್ತಿ ಪೂರ್ಣ. ಹೊರ ಹೋಗುತ್ತಿದ್ದ ನೀರು ಬಂದ್.

ಜು. 9- ವೀರಶೈವ ಮಹಾಸಭಾ ಜಿಲ್ಲಾಧ್ಯಕ್ಷರಾಗಿ ಐಗೂರು ಚಂದ್ರಶೇಖರ್.

* ಮಾಜಿ ಸಚಿವ ಬಿ.ಸಿ ಪಾಟೀಲ್ ಅಳಿಯ ಪ್ರತಾಪ್ ಆತ್ಮಹತ್ಯೆ.

ಜು. 11- ವಿಚ್ಛೇದಿತ ಮುಸ್ಲಿಂ ಮಹಿಳೆಯರಿಗೆ ಜೀವನಾಂಶಕ್ಕೆ ಸೆಕ್ಯುಲರ್ ಕಾನೂನು ಪಾಲನೆಯಾಗಲಿ ಸುಪ್ರೀಂ ಕೋರ್ಟ್ ಮಹತ್ವದ ತೀರ್ಪು.

ಜು. 12- ನಟಿ, ನಿರೂಪಕಿ ಅಪರ್ಣಾ ನಿಧನ.

* ಇನ್ನೂ ಎರಡು ತಿಂಗಳು ಡೆಂಗ್ಯೂ ಹಾವಳಿ ಇರಲಿದೆ, ಜಾಗೃತರಾಗಿರಲು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಸೂಚನೆ.

* ತಮಿಳುನಾಡಿಗೆ ನಿತ್ಯ 1 ಟಿಎಂಸಿ ನೀರು ಹರಿಸಲು ಕಾನೀನಿಸ ಆದೇಶ.

ಜು. 13- ವಾಲ್ಮೀಕಿ ನಿಗಮದಲ್ಲಿ ನಡೆದ 187 ಕೋಟಿ ಹಗರಣದ ಹಿನ್ನೆಲೆ: ಶಾಸಕ ನಾಗೇಂದ್ರ ಇಡಿ ವಶಕ್ಕೆ.

* ಪೋಕ್ಸೋ: ಕೋರ್ಟ್ ಎದುರು ಖುದ್ದು ಹಾಜರಿಯಿಂದ ಬಿ.ಎಸ್ ಯಡಿಯೂರಪ್ಪಗೆ ವಿನಾಯಿತಿ.

ಜು. 15- ಅಮೆರಿಕಾದ ಮಾಜಿ ಅಧ್ಯಕ್ಷ ಟ್ರಂಪ್ ಮೇಲೆ ಗುಂಡಿನ ದಾಳಿ.

* 46 ವರ್ಷಗಳ ನಂತರ ತೆರೆದ 'ಪುರಿ ಜಗನ್ನಾಥ' ರತ್ನ ಭಂಡಾರ.

ಜು. 16- ರಾಜಕೀಯವಾಗಿ ಇಕ್ಕಟ್ಟಿನಲ್ಲಿ ಡಿಕೆಶಿ: ಡಿಕೆಶಿ ವಿರುದ್ಧದ ಎಫ್‌ಐಆರ್ ರದ್ಧತಿಗೆ ಸುಪ್ರೀಂ ಕೋರ್ಟ್ ನಕಾರ.

* ನಾಗಮ್ಮ ಕೇಶವಮೂರ್ತಿಗೆ ವಿಧಾನಸಭೆಯಲ್ಲಿ ಶ್ರದ್ಧಾಂಜಲಿ ಸಲ್ಲಿಕೆ.

ಜು. 17- 7ನೇ ವೇತನ ಆಯೋಗದ ಶಿಫಾರಸ್ಸು ಜು.1ರಿಂದಲೇ ಪೂರ್ವಾನ್ವಯ ವಿಧಾನಸಭೆಯಲ್ಲಿ ಸಿದ್ದರಾಮಯ್ಯ ಘೋಷಣೆ.

ಜು. 19- ಢಾಕಾ: ಮೀಸಲಾತಿ ವಿರೋಧಿ ಹೋರಾಟದಲ್ಲಿ 18 ಸಾವು, 2500 ಜನರಿಗೆ ಗಾಯ. ಬಾಂಗ್ಲಾಗೆ ತೆರಳದಂತೆ ಭಾರತೀಯರಿಗೆ ಎಚ್ಚರಿಕೆ.

ಜು. 22- ಮರು ಆಯ್ಕೆ ಬೇಡವೆಂದ ಜೋ ಬಿಡೆನ್; ಸ್ಪರ್ಧೆಯಿಂದ ಹಿಂದಕ್ಕೆ ಸರಿದ ಅಮೆರಿಕಾದ ಅಧ್ಯಕ್ಷ.

* ಜಿಲ್ಲೆಯಲ್ಲಿ ವಾಡಿಕೆಗಿಂತ ಅಧಿಕ ಮಳೆ 12.30 ಲಕ್ಷ ರೂ.ಗಳಷ್ಟು ಹಾನಿ.

ಜು. 23- ಲೈಂಗಿಕ ಪೀಡನೆ ಪ್ರಕರಣ: ಸೂರಜ್‌ಗೆ ಜಾಮೀನು.

* ವಾಲ್ಮೀಕಿ ನಿಗಮದ ಅಕ್ರಮ: ಮಾಜಿ ಸಚಿವ ನಾಗೇಂದ್ರ ಜೈಲು ಪಾಲು.

ಜು. 24-ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಮಂಡಿಸಿದ ಬಜೆಟ್; ತೆರಿಗೆ ವಿನಾಯತಿ, ಉದ್ಯೋಗ ಸೃಷ್ಟಿಗೆ ಒತ್ತು.

* ರಾಜ್ಯದ ಯಾವ ಬೇಡಿಕೆಗೂ ಮನ್ನಣೆ ನೀಡದ ಬಜೆಟ್: ಸಿಎಂ ಟೀಕೆ.

* ಕರ್ನಾಟಕಕ್ಕೆ ಹೂರಣವಿಲ್ಲದ ಹೋಳಿಗೆ ನೀಡಿದ ಕೇಂದ್ರ: ಸಂಸದೆ ಡಾ. ಪ್ರಭಾ ಮಲ್ಲಿಕಾರ್ಜುನ್ ಟೀಕೆ.

* ಬಂಗಾರದ ಬೆಲೆ 3,340 ರೂ.ಇಳಿಕೆ.

ಜು. 25- ಹಣ ದುರುಪಯೋಗ ಪ್ರಕರಣ : ಬಸವರಾಜನ್ ದೋಷಮುಕ್ತ.

* ಬ್ರಹ್ಮೋಸ್ ಸೂಪರ್‌ಸಾನಿಕ್ ಖಂಡಾಂತರ ಕ್ಷಿಪಣೆ ಪರೀಕ್ಷೆ ಯಶಸ್ವಿ.

ಜು. 26- ಖನಿಜಗಳ ಮೇಲಿನ ತೆರಿಗೆಗೆ ರಾಜ್ಯಗಳಿಗೆ ಅಧಿಕಾರ: ಸುಪ್ರೀಂ ಕೋರ್ಟ್ ಮಹತ್ವದ ತೀರ್ಪು.

ಜು. 27- ವಾಲ್ಮೀಕಿ ನಿಗಮ ಹಗರಣ: 16 ಕೆ.ಜಿ. ಬಂಗಾರ, 2.55 ಕೋಟಿ ರೂ. ವಶಪಡಿಸಿಕೊಂಡ ವಿಶೇಷ ತನಿಖಾ ತಂಡ.

ಜು. 29- ಭದ್ರಾ ಡ್ಯಾಂ ಬಹುತೇಕ ಭರ್ತಿ: ನದಿಗೆ ನೀರು ಬಿಡುಗಡೆ.

* ಫ್ರಾನ್ಸ್ ಒಲಿಂಪಿಕ್‌ನಲ್ಲಿ ಭಾರತಕ್ಕೆ ಕಂಚು: ಶೂಟಿಂಗ್‌ನಲ್ಲಿ ಮೊದಲ ಪದಕ ತಂದ ಮನು ಭಾಕರ್.

ಜು. 30- ದಾವಣಗೆರೆ-ಹರಿಹರ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾಗಿ ದಿನೇಶ್ ಕೆ.ಶೆಟ್ಟಿ ನೇಮಕ.

* ಕರ್ನಾಟಕ ದಲಿತ ಚಳವಳಿಗೆ 50 ವರ್ಷ; ಹರಿಹರದಲ್ಲಿ ಸಂಭ್ರಮೋತ್ಸವ.

ಜು. 31- ವಯನಾಡ್: ಭೀಕರ ಭೂಕುಸಿತ, ಪ್ರವಾಹದಲ್ಲಿ 123 ಸಾವು.

## ☛ ಆಗಸ್ಟ್

**ಭುಗಿಲೆದ್ದ ಹಿಂಸಾಚಾರ; ಬಾಂಗ್ಲಾ ಪ್ರಧಾನಿ ಪಲಾಯನ**

ಆ. 1-ಮಲೆನಾಡಿನಲ್ಲಿ ವ್ಯಾಪಕ ಮಳೆ ತುಂಗಭದ್ರಾ ನದಿಯಲ್ಲಿ ಪ್ರವಾಹ.

* ಮುಡಾ: ಸಿಎಂ ಸಿದ್ದರಾಮಯ್ಯ ಪ್ರತಿಕ್ರಿಯೆ ಕೇಳಿದ ರಾಜ್ಯಪಾಲರು.

ಆ. 2- ಒಳಮೀಸಲಾತಿ: ರಾಜ್ಯಗಳಿಗೆ ಅಧಿಕಾರ. ಏಳು ಸದಸ್ಯರ ಸಂವಿಧಾನಿಕ ಪೀಠದ 6-1 ಅಂತರದ ಬಹುಮತದ ತೀರ್ಪು.

* ಪರಿಶಿಷ್ಟರಿಗೆ ಕೆನೆಪದರ ಅನ್ವಯಿಸಬೇಕು. ರಾಜ್ಯಗಳು ಈ ಬಗ್ಗೆ ನೀತಿ ರೂಪಿಸಬೇಕು ಎಂದ ಸುಪ್ರೀಂ ಕೋರ್ಟ್.

* ಕೋರ್ಟ್ ತೀರ್ಪಿಗೆ ಸಿಎಂ ಸಿದ್ದರಾಮಯ್ಯ ಸ್ವಾಗತ: ಸಮಾಲೋಚಿಸಿ ಕ್ರಮ ತೆಗೆದುಕೊಳ್ಳುವುದಾಗಿ ಭರವಸೆ.

ಆ. 5- ಬಾಂಗ್ಲಾ ಹಿಂಸಾಚಾರದಲ್ಲಿ 91 ಸಾವು: ಪ್ರಧಾನಿ ರಾಜೀನಾಮೆಗೆ ಒತ್ತಾಯಿಸಿ ಪ್ರತಿಭಟನೆ.

* ಒಳ ಮೀಸಲಾತಿ ತೀರ್ಪಿಗೆ ಬಿಎಸ್‌ಪಿ ಅಧ್ಯಕ್ಷೆ ಮಾಯಾವತಿ ವಿರೋಧ.

ಆ. 6- ಬಾಂಗ್ಲಾದಲ್ಲಿ ಭುಗಿಲೆದ್ದ ಹಿಂಸಾಚಾರ: ಪ್ರಧಾನಿ ಹಸೀನಾ ಪಲಾಯನ- ಸೈನ್ಯಕ್ಕೆ ಅಧಿಕಾರದ ಚುಕ್ಕಾಣಿ.

ಆ. 9- ನಿಗಮ ಹಗರಣ: ಸಿಎಂ ಬೆನ್ನಿಗೆ ಬಿದ್ದ ಇಡಿ.

* ಬಾಂಗ್ಲಾ ಹಂಗಾಮಿ ಮುಖ್ಯಸ್ಥರಾಗಿ ಮೊಹಮ್ಮದ್ ಯೂನಸ್.

* ಬ್ಯಾಂಕ್ ಬಡ್ಡಿದರ ಯಥಾಸ್ಥಿತಿಗೆ ರಿಜರ್ವ್ ಬ್ಯಾಂಕ್ ನಿರ್ಧಾರ.

ಆ. 10- ಒಲಿಂಪಿಕ್: ಜಾವಲಿನ್‌ನಲ್ಲಿ ನೀರಜ್ ಚೋಪ್ರಾಗೆ ಬೆಳ್ಳಿ. ಕುಸ್ತಿಯಲ್ಲಿ ಅಮನ್ ಸೆಹ್ರಾವತ್‌ಗೆ ಕಂಚು.

ಆ. 11- ಬಾಂಗ್ಲಾದಲ್ಲಿ ಹಿಂದೂಗಳ ಮೇಲೆ 200ಕ್ಕೂ ಹೆಚ್ಚು ದಾಳಿ.

ಆ. 12- ತುಂಗಭದ್ರಾ ಜಲಾಶಯದ ಗೇಟ್ ಕುಸಿತ.

ಆ. 13- ಅದಾನಿ ಕುರಿತ ಹಿಂಡನ್‌ಬರ್ಗ್ ಆರೋಪ; ಯಥಾಸ್ಥಿತಿಯಲ್ಲಿ ಮುಂಬೈ ಷೇರುಪೇಟೆ.

* ವೃತ್ತಿ ರಂಗಾಯಣ ನಿರ್ದೇಶಕರಾಗಿ ಮಲ್ಲಿಕಾರ್ಜುನ ಕಡಕೋಳ ನೇಮಕ.

ಆ. 14- ರಾಜ್ಯ ಮಹಿಳಾ ಕಾಂಗ್ರೆಸ್ ಅಧ್ಯಕ್ಷರಾಗಿ ಸೌಮ್ಯ ರೆಡ್ಡಿ ನೇಮಕ.

* ಅಂಡಾಣು ದಾನ ಮಾಡಿದವರಿಗೆ ಮಕ್ಕಳ ಮೇಲೆ ಹಕ್ಕಿಲ್ಲ: ಹೈಕೋರ್ಟ್.

ಆ. 15- ಸಾಹಿತಿ, ತರಳಬಾಳು ವಿದ್ಯಾಸಂಸ್ಥೆ ಆಡಳಿತಾಧಿಕಾರಿ ಪ್ರೊ.ಎಸ್. ಬಿ ರಂಗನಾಥ್ ಇನ್ನಿಲ್ಲ.

ಆ. 16- ಕೆರೆಗಳ ಅಭಿವೃದ್ಧಿಗೆ ಮಾಸ್ಟರ್ ಪ್ಲಾನ್: ಧ್ವಜಾರೋಹಣ ನೆರವೇರಿಸಿದ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್ ಮಲ್ಲಿಕಾರ್ಜುನ್.

* ಕೊಲ್ಕೊತಾ: ವೈದ್ಯೆ ಮೇಲೆ ಅತ್ಯಾಚಾರ, ಹತ್ಯೆ: ಆಸ್ಪತ್ರೆ ಮೇಲೆ ದಾಳಿ.

ಆ. 17- ಕನ್ನಡ ಚಿತ್ರರಂಗಕ್ಕೆ 7 ರಾಷ್ಟ್ರೀಯ ಪ್ರಶಸ್ತಿಗಳು: ಕಾಂತಾರ ನಟ ರಿಶಬ್ ಶೆಟ್ಟಿಗೆ ಅತ್ಯುತ್ತಮ ನಟ ಪ್ರಶಸ್ತಿ.

* ಮಳೆ ನಷ್ಟ ಪರಿಹಾರ ನೀಡುವಲ್ಲಿ ತ್ವರಿತ ಕ್ರಮಕ್ಕೆ ಸಿಎಂ ಸೂಚನೆ.

ಆ. 18- ಮುಡಾ ಪ್ರಕರಣ; ಸಿಎಂ ವಿರುದ್ಧ ಕ್ರಿಮಿನಲ್ ಮೊಕದ್ದಮೆಗೆ ಅನುಮತಿ ನೀಡಿದ ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್.

* ತುಂಗಭದ್ರಾ ಜಲಾಶಯದ ಗೇಟ್ ದುರಸ್ತಿ ಪೂರ್ಣ.

ಆ. 19 -ತುಂಬಿದ ಭದ್ರೆಗೆ ಬಾಗಿನ ಅರ್ಪಿಸಿದ ಜಿಲ್ಲಾ ಉಸ್ತುವಾರಿ ಸಚಿವ ಎಸ್ಸೆಸ್ಸೆಂ, ಸಂಸದೆ ಡಾ.ಪ್ರಭಾ ಮತ್ತು ಜಿಲ್ಲೆಯ ಶಾಸಕರು.

ಆ.20-ರಾಜ್ಯದ ವಿವಿಧೆಡೆ ಸಿದ್ದರಾಮಯ್ಯ ತನಿಖೆ ಪರ-ವಿರೋಧ ಪ್ರತಿಭಟನೆ.

* ಶಿವಮೊಗ್ಗ: ಝೀಕಾ ವೈರಸ್ ಸೋಂಕಿತನ ಸಾವು.

ಆ.21-ಡಾ.ಶಿವಮೂರ್ತಿ ಶ್ರೀಗಳೇ ಸಿರಿಗೆರೆ ಮಠಕ್ಕೆ ಮುಂದುವರಿಯಲಿ; ರಕ್ತದಲ್ಲಿ ಸಹಿ ಮಾಡಿದ ಪತ್ರ ಮಠಕ್ಕೆ ಕಳಿಸಿದ ಹೆಮ್ಮನಬೇತೂರು ಭಕ್ತರು.

ಆ.24- ಕನ್ನಡ ನಾಮಫಲಕ ಕಡ್ಡಾಯಕ್ಕೆ ಸರ್ಕಾರದ ಆದೇಶ.


* ಸೂಳೆಕೆರೆ ಬಳಿ 52 ಎಕರೆ ಅರಣ್ಯ ಭೂಮಿ ಒತ್ತುವರಿ ತೆರವು.

ಆ.26- ಸಿಎಂಗೆ ನೈತಿಕ ಬೆಂಬಲ ವ್ಯಕ್ತಪಡಿಸಿದ ದಲಿತ, ಹಿಂದುಳಿದ ವರ್ಗಗಳ ಸ್ವಾಮೀಜಿಗಳು.

ಆ.27- ಖರ್ಗೆ ಪುತ್ರನ ಟ್ರಸ್ಟ್‌ಗೆ ಜಮೀನು; ಸರ್ಕಾರದ ಸಮರ್ಥನೆ.

* ಆಸ್ತಿ ನೋಂದಣಿಗೆ ಆಧಾರ್ ಕಡ್ಡಾಯಗೊಳಿಸಿ ಸರ್ಕಾರದ ಆದೇಶ.

* ದರ್ಶನ್‌ಗೆ ಜೈಲಲ್ಲಿ ರಾಜಾತಿಥ್ಯ; ಜೈಲು ಅಧೀಕ್ಷಕ ಸೇರಿ 9 ಅಧಿಕಾರಿಗಳ ಅಮಾನತ್ತು.



ಆ.28- ಮುಂಬೈನಲ್ಲಿ ಶಿವಾಜಿ ಪ್ರತಿಮೆ ಕುಸಿತ; ಪ್ರಕರಣ ದಾಖಲು.

* ದಾವಣಗೆರೆ ಹೋಟೆಲ್ ಉದ್ದಿಮೆದಾರರ ಸಂಘದ ಗೌರವಾಧ್ಯಕ್ಷ, ಜನತಾ ಹೋಟೆಲ್‌ನ ಕೆ.ವಿ. ಆನಂದರಾವ್ ನಿಧನ.

ಆ.30- ರಾಜ್ಯಪಾಲರ ಹುದ್ದೆ ರದ್ದುಗೊಳಿಸಲು ಆಗ್ರಹಿಸಿ ಭಾರತ ಕಮ್ಯುನಿಸ್ಟ್ ಪಕ್ಷದಿಂದ ಪ್ರತಿಭಟನೆ.

## ☛ ಸೆಪ್ಟೆಂಬರ್

**ನವೀಕೃತ ಸರ್ಕಾರಿ ಬಸ್ ನಿಲ್ದಾಣಕ್ಕೆ ಪಂಪಾಪತಿ ಹೆಸರು..**

ಸೆ.1- ಕೋವಿಡ್ ಭ್ರಷ್ಟಾಚಾರ: ತನಿಖಾ ಆಯೋಗದ ವರದಿ ಸಲ್ಲಿಕೆ

ಸೆ.2- ಮಠಕ್ಕೆ ಉತ್ತರಾಧಿಕಾರಿ ನೇಮಿಸಿ ಟ್ರಸ್ಟ್ ಡೀಡ್ ರದ್ದುಗೊಳಿಸಲು ಸಿರಿಗೆರೆ ಜಗದ್ಗುರುಗಳಿಗೆ 'ಬಂಡಾಯ ಭಕ್ತರ' ಆಗ್ರಹ.

* ಪಂಚಮಸಾಲಿ ಸಮಾಜದ ರಾಜ್ಯಾಧ್ಯಕ್ಷರಾಗಿ ಸೋಮನಗೌಡ ಪಾಟೀಲ್.

ಸೆ.3- ಹರಿಹರ ನಗರಸಭೆ ಅಧ್ಯಕ್ಷರಾಗಿ ಕವಿತಾ ಮಾರುತಿ ಆಯ್ಕೆ.

* ಬಿ.ಎನ್ ಮಲ್ಲೇಶ್ 'ಉತ್ತರೆ ಮಳೆ' ಕವಿತೆ ಬಿಎಸ್ಸಿ ತರಗತಿ ಪಠ್ಯಕ್ಕೆ ಆಯ್ಕೆ.

ಸೆ.4- ಡೆಂಗ್ಯೂ ಸಾಂಕ್ರಾಮಿಕ ಕಾಯಿಲೆ ರಾಜ್ಯ ಸರ್ಕಾರ ಘೋಷಣೆ.

* ಹರಿಹರ ತಾ. ಹಿಂಡಸಘಟ್ಟದ ಅರುಣ್‌ಗೆ ರಾಜ್ಯ ಉತ್ತಮ ಶಿಕ್ಷಕ ಪ್ರಶಸ್ತಿ.

ಸೆ.5- ರಾಜಸ್ಥಾನ: ಶೇ.33ರಷ್ಟು ಪೊಲೀಸ್ ಹುದ್ದೆ ಮಹಿಳೆಯರಿಗೆ.

ಸೆ.9- ಎಲ್ಲೆಡೆ ಗಣೇಶ ಚತುರ್ಥಿ ಸಂಭ್ರಮ.

ಸೆ.11- ಜಿಲ್ಲೆಯಲ್ಲಿ 39 ಸಾವಿರ ಅನರ್ಹ ಬಿಪಿಎಲ್ ಕಾರ್ಡುಗಳು: ಜಿಲ್ಲಾ ಗ್ಯಾರಂಟಿ ಯೋಜನಾ ಸಮಿತಿ ಸಭೆಯಲ್ಲಿ ಅಧಿಕಾರಿಗಳ ಮಾಹಿತಿ.

ಸೆ.12- ಅಖಿಲ ಭಾರತ ವೀರಶೈವ ಮಹಾಸಭಾದ ರಾಷ್ಟ್ರೀಯ ಅಧ್ಯಕ್ಷರಾಗಿ ಸತತ 3ನೇ ಬಾರಿಗೆ ಎಸ್ಸೆಸ್ ಆಯ್ಕೆ.

* 70 ಮೀರಿದ ಎಲ್ಲರಿಗೂ 'ಆಯುಷ್ಮಾನ್ ಭಾರತ್' ಸಂಪುಟ ಒಪ್ಪಿಗೆ.

ಸೆ.13- ಮಂಡ್ಯ ಜಿಲ್ಲೆ ನಾಗಮಂಗಲದಲ್ಲಿ ಗಣೇಶ ವಿಸರ್ಜನೆ ವೇಳೆ ಕಲ್ಲು ತೂರಾಟ: ಸರ್ಕಾರದ ವಿರುದ್ಧ ವಿಪಕ್ಷಗಳ ಕಿಡಿ.

ಸೆ.14- ದೆಹಲಿ ಸಿಎಂ ಕೇಜ್ರಿವಾಲ್‌ಗೆ ಸುಪ್ರೀಂ ಕೋರ್ಟ್ ಜಾಮೀನು.

ಸೆ.15- ಜಾತಿ ನಿಂದನೆ, ಲಂಚ ಪ್ರಕರಣ ಬಿಜೆಪಿ ಶಾಸಕ ಮುನಿರತ್ನ ಬಂಧನ.

ಸೆ.17- ಟ್ರಂಪ್ ಹತ್ಯೆಗೆ ಮತ್ತೊಂದು ಯತ್ನ.

* ಮೊದಲ ವಂದೇ ಭಾರತ್ ಮೆಟ್ರೋಗೆ ಚಾಲನೆ.

ಸೆ.18- ಕೇಜ್ರಿವಾಲ್ ರಾಜೀನಾಮೆ;ದೆಹಲಿ ನೂತನ ಮುಖ್ಯಮಂತ್ರಿ ಆತಿಶಿ.

*ಮಹಿಳೆಯರ ರಾತ್ರಿ ಪಾಳಿ ನಿರ್ಬಂಧಕ್ಕೆ ಸುಪ್ರೀಂ ಕೋರ್ಟ್ ಆಕ್ಷೇಪ.

ಸೆ.19- 'ಚಂದ್ರಯಾನ-4' ಮತ್ತು ಶುಕ್ರಗ್ರಹ ಅಧ್ಯಯನಕ್ಕೆ ಉಪಗ್ರಹ ರವಾನಿಸುವ ಯೋಜನೆಗೆ ಕೇಂದ್ರದ ಒಪ್ಪಿಗೆ.

* ಪೇಜರ್ ನಂತರ ವಾಕಿಟಾಕಿಗಳೂ ಸ್ಫೋಟ; ಇಸ್ರೇಲ್ ಚಾಣಾಕ್ಷ ದಾಳಿಗೆ ಲೆಬನಾನ್ ಹೆಜ್ಬೊಲ್ಲಾ ತತ್ತರ.

ಸೆ.20- ಗಣಪತಿ ಮೆರಣಿಗೆ ವೇಳೆ ಕಲ್ಲು ತೂರಾಟ ಹಳೇ ದಾವಣಗೆರೆಯಲ್ಲಿ ಬಿಗುವಿನ ವಾತಾವರಣ.

*ತಿರುಪತಿ ತಿಮ್ಮಪ್ಪನ ಲಡ್ಡುವಿನಲ್ಲಿ ಪ್ರಾಣಿ ಕೊಬ್ಬು: ಪ್ರಯೋಗಾಲಯದ ವರದಿ ಪ್ರದರ್ಶಿಸಿದ ಆಡಳಿತಾರೂಢ ತೆಲುಗು ದೇಶಂ ಪಕ್ಷ.

ಸೆ.21 - ಮುಜರಾಯಿ ದೇವಾಲಯಗಳ ಪ್ರಸಾದಕ್ಕೆ ನಂದಿನಿ ತುಪ್ಪ ಕಡ್ಡಾಯ, ತಿರುಪತಿ ಲಡ್ಡು ಪ್ರಕರಣದ ನಂತರ ರಾಜ್ಯ ಸರ್ಕಾರದ ಕ್ರಮ.

* ಶಾಸಕ ಮುನಿರತ್ನ ವಿರುದ್ಧ ಅತ್ಯಾಚಾರ ಪ್ರಕರಣ: ಬಂಧನ.

ಸೆ.22 -57ನೇ ಹುಟ್ಟು ಹಬ್ಬದ ಸಂಭ್ರಮದಲ್ಲಿ ಸಚಿವ ಶಾಮನೂರು ಮಲ್ಲಿಕಾರ್ಜುನ್; ಅಭಿಮಾನಿಗಳಿಂದ ಶುಭ ಹಾರೈಕೆ.



ಸೆ.23 - ನವೀಕೃತ ಹೊಸ ಬಸ್ ಸ್ಟ್ಯಾಂಡ್‌ಗೆ ಚಾಲನೆ: ಬಸ್ ನಿಲ್ದಾಣಕ್ಕೆ ಪಂಪಾಪತಿ ಹೆಸರು : ಸಚಿವ ಎಸ್ಸೆಸ್ಸೆಂ ಸೂಚನೆ.

* ಹಿರಿಯ ಕುಸ್ತಿಪಟು, ದೂಡಾ ಮಾಜಿ ಅಧ್ಯಕ್ಷ ಟಿ.ದಾಸಕರಿಯಪ್ಪ ನಿಧನ.

ಸೆ.25 - ಮುಡಾ: ಮುಖ್ಯಮಂತ್ರಿಗೆ ಮುಖಭಂಗ: ರಾಜ್ಯಪಾಲರ ಪ್ರಾಸಿಕ್ಯೂಷನ್ ಅನುಮತಿ ನಿರ್ಧಾರ ಎತ್ತಿ ಹಿಡಿದ ಹೈಕೋರ್ಟ್.

ಸೆ.27 - ಗ್ರಾಮೀಣ ಪತ್ರಕರ್ತರಿಗೆ ಉಚಿತ ಬಸ್ ಪಾಸ್ ಜಾರಿ.

* ಕರ್ನಾಟಕ ಮಾಧ್ಯಮ ಅಕಾಡೆಮಿ ಸದಸ್ಯರಾಗಿ ಜನತಾವಾಣಿ ಉಪ ಸಂಪಾದಕ ಮಂಜುನಾಥ ಏಕಬೋಟೆ ನೇಮಕ.

ಸೆ.28- ದಾವಣಗೆರೆ ಪಾಲಿಕೆ ಮೇಯರ್ ಆಗಿ ಕೆ. ಚಮನ್‌ಸಾಬ್, ಉಪಮೇಯರ್ ಆಗಿ ಸೋಗಿ ಶಾಂತಕುಮಾರ್ ಆಯ್ಕೆ.



* ಕೇಂದ್ರ ಆರೋಗ್ಯ-ಕುಟುಂಬ ಕಲ್ಯಾಣ ಇಲಾಖೆ ಸ್ಥಾಯಿ ಸಮಿತಿ ಸದಸ್ಯರಾಗಿ ಸಂಸದೆ ಡಾ.ಪ್ರಭಾ ಮಲ್ಲಿಕಾರ್ಜುನ್ ನೇಮಕ.

ಸೆ.28 - ನಗರದ ಧೋಬಿಘಾಟ್‌ಗೆ ಬಟ್ಟೆ ಒಗೆಯುವ ಯಂತ್ರಗಳು ಮಂಜೂರು.

ಸೆ.30 - ಕೇಂದ್ರ ಸಚಿವ ಹೆಚ್ಡಿಕೆ ಹಂದಿ' ಎಂದ ಲೋಕಾಯುಕ್ತ ಎಡಿಜಿಪಿ ಚಂದ್ರಶೇಖರ್ ವಿರುದ್ಧ ಕ್ರಮ: ಪ್ರಹ್ಲಾದ ಜೋಷಿ.

## ❖ ಅಕ್ಟೋಬರ್

**ಉದ್ಯಮಿ ರತನ್ ಟಾಟಾ ಇನ್ನಿಲ್ಲ**

ಅ.1 - ಹಿಂದಿ ಚಿತ್ರನಟ ಮಿಥುನ್ ಚಕ್ರವರ್ತಿಗೆ ಫಾಲ್ಕೆ ಪ್ರಶಸ್ತಿ.

* ಮುಡಾ ನಿವೇಶನ ಮರಳಿಸಲು ಮುಂದಾದ ಸಿಎಂ ಪತ್ನಿ ಪಾರ್ವತಿ. ಷಡ್ಯಂತ್ರದಿಂದ ನೊಂದು ನಿವೇಶನ ವಾಪಾಸ್ ಎಂದ ಸಿಎಂ ಸಿದ್ದರಾಮಯ್ಯ.

* ದೇವರನ್ನಾದರೂ ರಾಜಕೀಯದಿಂದ ದೂರವಿಡಿ. ತಿಮ್ಮಪ್ಪನ ಪ್ರಸಾದದ ಬಗ್ಗೆ ಸಿಎಂ ನಾಯ್ಡು ಹೇಳಿಕೆಗೆ ಸುಪ್ರೀಂ ಕೋರ್ಟ್ ಆಕ್ಷೇಪ.

ಅ.4 - ಮರಾಠಿ, ಪಾಲಿ, ಪ್ರಾಕೃತ, ಅಸ್ಸಾಮಿ ಮತ್ತು ಬಂಗಾಳಿ ಭಾಷೆಗಳಿಗೆ ಶಾಸ್ತ್ರೀಯ ಸ್ಥಾನಮಾನಕ್ಕೆ ಕೇಂದ್ರ ಸಂಪುಟದ ಒಪ್ಪಿಗೆ.

ಅ.8- ಶಾಮನೂರು ಶಿವಶಂಕರಪ್ಪ ಖಾಸಗಿ ಬಸ್ ನಿಲ್ದಾಣ ಕಾರ್ಯಾರಂಭ.



* ಮುರುಘಾ ಶರಣರು ಜೈಲಿನಿಂದ ಬಿಡುಗಡೆ.

ಅ.10 - ಹಿರಿಯ ಉದ್ಯಮಿ ರತನ್ ಟಾಟಾ ಇನ್ನಿಲ್ಲ.

* ಜಗಳೂರು: 27ಲಕ್ಷ ದುರುಪಯೋಗ; ಗ್ರಾಪಂ ಕಾರ್ಯದರ್ಶಿ ಟಿ.ತಿಮ್ಮಪ್ಪ ವಿರುದ್ಧ ದೂರು ದಾಖಲು.

ಅ.11 - ದ. ಕೋರಿಯಾ ಲೇಖಕಿ ಹ್ಯಾನ್ ಕಾಂಗ್‌ಗೆ ನೊಬೆಲ್ ಪ್ರಶಸ್ತಿ.

* ಜನಸಾಗರದ ನಡುವೆ ರತನ್ ಟಾಟಾಗೆ ಅಂತಿಮ ವಿದಾಯ.

ಅ.13 - ಜಂಬೂ ಸವಾರಿಯೊಂದಿಗೆ ದಸರಾ ವೈಭವಕ್ಕೆ ತೆರೆ.

ಅ.14- ಐದು ಎಕರೆ ಜಮೀನು ಬೇಡವೆಂದ ಖರ್ಗೆ ಟ್ರಸ್ಟ್; ಕೆಐಎಡಿಬಿಗೆ ಸಲ್ಲಿಸಿದ್ದ ಮನವಿ ವಾಪಸ್.

* ದಾವಣಗೆರೆ-ಹರಿಹರ ಅರ್ಬನ್ ಬ್ಯಾಂಕ್ ಸುವರ್ಣ ಮಹೋತ್ಸವ.

ಅ.15 - ಹುಬ್ಬಳ್ಳಿ ಗಲಭೆ ಪ್ರಕರಣ ವಾಪಸ್ ಪಡೆದ ರಾಜ್ಯ ಸರ್ಕಾರ: ರಾಜ್ಯಪಾಲರಿಗೆ ದೂರು ಸಲ್ಲಿಸಿದ ಬಿಜೆಪಿ.

* ವಾಲ್ಮೀಕಿ ನಿಗಮದ ಹಗರಣ ಮಾಜಿ ಸಚಿವ ನಾಗೇಂದ್ರಗೆ ಜಾಮೀನು.

ಅ.17 - ಯುಬಿಡಿಟಿ ಉಳಿಸಿ ಅಭಿಯಾನ: ದಾವಣಗೆರೆ ಬಂದ್ ಕರೆಗೆ ಮಿಶ್ರ ಪ್ರತಿಕ್ರಿಯೆ.

* ಜಮ್ಮು-ಕಾಶ್ಮೀರದ ಮುಖ್ಯಮಂತ್ರಿಯಾಗಿ ಓಮರ್ ಅಬ್ದುಲ್ಲಾ ಪ್ರಮಾಣ.

ಅ.18- ಜಿಲ್ಲೆಯಲ್ಲಿ ಆರ್ಭಟಿಸಿದ ಮಳೆರಾಯ; ತಗ್ಗು ಪ್ರದೇಶಗಳಿಗೆ ನೀರು.

* ಸಾಹಿತಿ ಬಾ.ಮ ಬಸವರಾಜಯ್ಯಗೆ ಲಲಿತಮ್ಮ ಚಂದ್ರಶೇಖರ್ ಪ್ರಶಸ್ತಿ.

ಅ.22 - ಒಳ ಮೀಸಲಾತಿ ಜಾರಿ ಮಾಡಲು ಮಾದಿಗ ಸಮುದಾಯದ ವಕೀಲರ ಆಗ್ರಹ.

ಅ.23 - ವಿಮಾನಗಳಿಗೆ ಹುಸಿ ಬಾಂಬ್ ಬೆದರಿಕೆಯಿಂದ 600 ಕೋಟಿ ರೂಪಾಯಿ ನಷ್ಟ.

ಅ.24 - ಕೂಡಲೇ ಒಳ ಮೀಸಲಾತಿ ಜಾರಿಗಾಗಿ ಆಗ್ರಹಿಸಿ ಜಿಲ್ಲಾ ಛಲವಾದಿ ಸಮುದಾಯಗಳ ಒಕ್ಕೂಟದಿಂದ ಬೃಹತ್ ಪ್ರತಿಭಟನೆ.

* ಕಾಂಗ್ರೆಸ್ ಸೇರಿದ ಸಿ.ಪಿ ಯೋಗೀಶ್ವರ್.

ಅ.27 - ಇರಾನ್ ಸೈನಿಕ ತಾಣಗಳ ಮೇಲೆ ಇಸ್ರೇಲ್ ದಾಳಿ. 1980ರ ನಂತರ ಮೊದಲ ಬಾರಿಗೆ ಶತ್ರು ದೇಶದ ದಾಳಿ ಎದುರಿಸಿದ ಇರಾನ್.

* ದೀಪಾವಳಿ: ಹಸಿರು ಪಟಾಕಿಗಳಿಗೆ ಮಾತ್ರ ಅವಕಾಶ: ಸಿಎಂ ಆದೇಶ.

ಅ.29 - ಒಳ ಮೀಸಲಾತಿಗೆ ಸಂಪುಟ ಅಸ್ತು: ಹೈಕೋರ್ಟ್ ನಿವೃತ್ತ ನ್ಯಾಯಾಧೀಶರ ನೇತೃತ್ವದಲ್ಲಿ ಆಯೋಗ ರಚನೆ.

* ವಕ್ಫ್ ವಿವಾದ: ಆಡಳಿತ, ವಿರೋಧ ಪಕ್ಷಗಳ ವಾಕ್ಸಮರ.

ಅ.30- ವಕ್ಫ್ ನೋಟೀಸ್ ವಾಪಸ್: ರೈತರನ್ನು ಒಕ್ಕಲೆಬ್ಬಿಸುವುದಿಲ್ಲ. ಸಿಎಂ ಸಿದ್ದರಾಮಯ್ಯ ಸ್ಪಷ್ಟನೆ.

ಅ.31 -ಹತ್ಯೆ ಪ್ರಕರಣ: ನಟ ದರ್ಶನ್ ಶಸ್ತ್ರ ಚಿಕಿತ್ಸೆಗೆ ಜಾಮೀನು.

* ಸಲ್ಮಾನ್ ಖಾನ್‌ಗೆ ಮತ್ತೆ ಪ್ರಾಣ ಬೆದರಿಕೆ, ಓರ್ವನ ಬಂಧನ.

## ☛ ನವಂಬರ್

**ಉಲ್ಬಣಿಸಿದ ವಕ್ಫ್ ವಿವಾದ..**

ನ.1- ಹಾವೇರಿ ವಕ್ಫ್ ವಿವಾದ: ಕಲ್ಲು ತೂರಾಟ, 32 ಜನರ ಬಂಧನ.

ನ.2- ಪಾವತಿ ಬಾಕಿ; ಬಾಂಗ್ಲಾಗೆ ಅದಾನಿ ಕಂಪನಿ ವಿದ್ಯುತ್ ಕಟ್.

ನ.4- ಚಲನಚಿತ್ರ ನಿರ್ದೇಶಕ ಗುರುಪ್ರಸಾದ್ ಆತ್ಮಹತ್ಯೆ.

* ಜಮ್ಮು-ಕಾಶ್ಮೀರದಲ್ಲಿ ಲಷ್ಕರ್ ಉನ್ನತ ಉಗ್ರ ಉಸ್ಮಾನ್ ಹತ್ಯೆ.

ನ.5- ವಕ್ಫ್ ನೋಟಿಸ್: ಬಿಜೆಪಿ ಪ್ರತಿಭಟನೆ-ಸಚಿವ ಜಮೀರ್ ಮೂಲಕ ಕೃಷಿ ಭೂಮಿ ಕಸಿಯಲು ಯತ್ನ ಸಿದ್ದರಾಮಯ್ಯ ಯತ್ನ ಬಿಜೆಪಿ ಆರೋಪ.

* ವಕ್ಫ್ ಆಸ್ತಿ ತೆರವಿಗೆ ಬಿಜೆಪಿ ಸರ್ಕಾರದಲ್ಲಿ 216 ನೋಟಿಸ್; ಬೊಮ್ಮಾಯಿ ಈಗ ಉಲ್ಟಾ ಹೊಡೆದಿದ್ದಾರೆ ಎಂದು ಸಿದ್ದರಾಮಯ್ಯ ತರಾಟೆ.

* ವಿಜಯಪುರ ಗೋಲ್ ಗುಂಬಜ್ ಸೇರಿ 43 ಸ್ಮಾರಕಗಳು ತನ್ನದೆಂದ ವಕ್ಫ್; ಗದಗಿನ ಅನ್ನದಾನೇಶ್ವರ ಮಠದ ಪ್ರಸಾದ ನಿಲಯವೂ ವಕ್ಫ್ ಆಸ್ತಿಯೆಂದು ದಾಖಲು. ರಾಜ್ಯದ ಎಲ್ಲೆಡೆ ಪ್ರತಿಭಟನೆಗಳ ಸಾಲು-ಸಾಲು.

ನ.6- ಭದ್ರಾ ಸಕ್ಕರೆ ಕಾರ್ಖಾನೆ ಚುನಾವಣೆ: ಹೆಚ್.ಎಸ್ ಶಿವಶಂಕರ್ ಗುಂಪಿಗೆ ಭರ್ಜರಿ ಜಯ.

* ಈ ವರ್ಷ ದಾಖಲೆಯ 119.93 ದಶಲಕ್ಷ ಟನ್ ಭತ್ತದ ಇಳುವರಿ.

ನ.7- ಅಮೆರಿಕಾದಲ್ಲಿ ಮತ್ತೆ ಟ್ರಂಪ್ ಸರ್ಕಾರ;

*ಲೋಕಾಯುಕ್ತ ಎದುರು ಸಿಎಂ ಹಾಜರಿ: ಮೊದಲ ಬಾರಿ ಭ್ರಷ್ಟಾಚಾರ ಆರೋಪದ ವಿಚಾರಣೆ ಎದುರಿಸಿದ ಸಿದ್ದರಾಮಯ್ಯ.

ನ.8- ಆಸ್ಟ್ರೇಲಿಯಾದಲ್ಲಿ 16ರ ಒಳಗಿನ ಮಕ್ಕಳಿಗೆ ಜಾಲತಾಣ ನಿರ್ಬಂಧ.

* ಶಿಗ್ಗಾಂವ್ ಉಪ ಚುನಾವಣೆ ವೀಕ್ಷಕರಾಗಿ ಡಿ.ಬಸವರಾಜ್ ನೇಮಕ.

ನ.10- ಪಿ.ಜೆ ಬಡಾವಣೆ ಪಹಣಿಯಲ್ಲಿನ ವಕ್ಫ್ ಹೆಸರು ರದ್ಧತಿಗೆ ಪಾಲಿಕೆ ವಿಪಕ್ಷ ನಾಯಕ ಪ್ರಸನ್ನಕುಮಾರ್ ಆಗ್ರಹ.

* ಕೋವಿಡ್ ಹಗರಣ: ಬಿಎಸ್‌ವೈ, ಶ್ರೀರಾಮುಲು ವಿರುದ್ಧ ತನಿಖಾ ಆಯೋಗದ ಶಿಫಾರಸ್ಸು.

* ದೊಡ್ಡಬಾತಿ ಕೆರೆ ಅಭಿವೃದ್ಧಿಗೆ 12 ಕೋಟಿ ಮೀಸಲು : ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್ ಮಲ್ಲಿಕಾರ್ಜುನ್.

ನ.11- ಜಮೀರ್ ಮುಡಾ ಮುಶ್ಕಿಲ್: ನ್ಯಾಯಾಂಗ ನಿಂದನೆ; ಕ್ರಮಕ್ಕೆ ರಾಜ್ಯಪಾಲರ ಸೂಚನೆ.

* ವಕ್ಫ್ ನೆನಪೋಲೆಗಳು ವಾಪಸ್, ಮ್ಯುಟೇಷನ್‌ಗೆ ತಡೆ ರಾಜ್ಯ ಸರ್ಕಾರದ ಆದೇಶ.

ನ.12- ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿಯಾಗಿ ಅಧಿಕಾರ ವಹಿಸಿಕೊಂಡ ಸಂಜೀವ್ ಖನ್ನಾ.

* ಪ್ರಜ್ವಲ್ ಜಾಮೀನು ಅರ್ಜಿ ಸುಪ್ರೀಂ ಕೋರ್ಟ್‌ನಲ್ಲಿ ವಜಾ.

ನ.16- ಅಪ್ರಾಪ್ತೆ ಪತ್ನಿ ಜೊತೆ ಬಲವಂತವಾಗಿ ಸೇರುವುದು ಅತ್ಯಾಚಾರ: ಮುಂಬೈ ಹೈಕೋರ್ಟ್ ತೀರ್ಪು.

* ಮಲ್ಲಿಕಾರ್ಜುನ ಕಡಕೋಳರಿಗೆ ಮಹಲಿಂಗರಂಗ ಜಿಲ್ಲಾ ಸಾಹಿತ್ಯ ಪ್ರಶಸ್ತಿ.

ನ.18- ದೂರಗಾಮಿ ಹೈಪರ್‌ಸಾನಿಕ್ ಕ್ಷಿಪಣಿ ಪರೀಕ್ಷೆ ಯಶಸ್ವಿ: ಆಯ್ದ ಕೆಲವೇ ದೇಶಗಳ ಸಾಲಿಗೆ ಭಾರತ ಸೇರ್ಪಡೆ.

ನ.20- ಜಿಲ್ಲೆಯಲ್ಲಿ 49 ಸಾವಿರ ಬಿಪಿಎಲ್ ಕಾರ್ಡ್ ಅನರ್ಹ.

* ಭದ್ರಾ ಸಕ್ಕರೆ: ಅಧ್ಯಕ್ಷರಾಗಿ ಹೆಚ್.ಎಸ್ ಶಿವಶಂಕರ್ ಪುನರಾಯ್ಕೆ.

ನ.22- ಲಂಚದ ಸುಳಿಯಲ್ಲಿ ಸಿಲುಕಿದ ಅದಾನಿ; ಅಮೆರಿಕಾ ನ್ಯಾಯಾಲಯದಲ್ಲಿ ದೋಷಾರೋಪ. ಅದಾನಿ ಷೇರು ಮೌಲ್ಯ 2.19 ಲಕ್ಷ ಕೋಟಿ ಕುಸಿತ.

ನ.24- ಮಹಾರಾಷ್ಟ್ರ ವಿಧಾನಸಭೆ ಕೇಸರಿ ಸುನಾಮಿ; ಜಾರ್ಖಂಡ್‌ನಲ್ಲಿ ಜೆಎಂಎಂ ಮೈತ್ರಿ ಜಯಭೇರಿ.

* ಉಪಚುನಾವಣೆ: ಮೂರೂ ಕ್ಷೇತ್ರಗಳು ಕಾಂಗ್ರೆಸ್ ವಶ: ಚನ್ನಪಟ್ಟಣ ಸಿ.ಪಿ ಯೋಗೀಶ್ವರ್, ಸಂಡೂರು ಇ.ಅನ್ನಪೂರ್ಣಗೆ ಗೆಲುವು. ನಿಖಿಲ್‌ಕುಮಾರಸ್ವಾಮಿಗೆ ಮೂರನೇ ಸೋಲು.

* ಬೊಮ್ಮಾಯಿ ಭದ್ರಕೋಟೆ ಶಿಗ್ಗಾಂವಿ ಯಾಸಿರ್ ಖಾನ್ ಪಠಾಣ್ ಪಾಲು.

ನ.25- ಪಿ.ಜೆ ಬಡಾವಣೆ ವಕ್ಫ್ ಆಸ್ತಿಯಲ್ಲ, ಸರ್ಕಾರದ ದಾಖಲೆಯಲ್ಲಿ ತಿದ್ದುಪಡಿ. ಸಚಿವ ಮಲ್ಲಿಕಾರ್ಜುನ್, ದೂಡಾ ಅಧ್ಯಕ್ಷ ದಿನೇಶ್ ಶೆಟ್ಟಿ ಶ್ರಮ.



ನ.26- ಶಾಮನೂರು ಪಾರ್ವತಮ್ಮ ಶಿವಶಂಕರಪ್ಪ ಸ್ಮರಣಾರ್ಥ 17 ನೇ ವರ್ಷದ ಕ್ರಿಕೆಟ್ ಪಂದ್ಯಾವಳಿಗೆ ಚಾಲನೆ.

ನ.27- ಲಖ್ನೌ: ರಾಹುಲ್ ಪೌರತ್ವ ಕುರಿತು ವರದಿ ಸಲ್ಲಿಸಲು ಹೈಕೋರ್ಟ್ ಸೂಚನೆ.

ನ.29- ಸಂವಿಧಾನದ ಪ್ರತಿ ಹಿಡಿದು ಪ್ರಿಯಾಂಕ ಗಾಂಧಿ ಪ್ರಮಾಣ ವಚನ.

ನ.30- ಪ್ರಧಾನಿ ಮೋದಿ ಭೇಟಿ ಮಾಡಿದ ಸಿಎಂ, ಡಿಸಿಎಂ ವಿವಿಧ ಬೇಡಿಕೆಗಳ ಮನವಿ ಸಲ್ಲಿಕೆ.

## ☛ ಡಿಸೆಂಬರ್

**ಚೆಸ್ ಆಟಗಾರ ಗುಕೇಶ್ ವಿಶ್ವ ಚಾಂಪಿಯನ್**

ಡಿ.1- ರಾಜ್ಯದಲ್ಲಿ ಹೆಚ್ಚಿದ ಬಾಣಂತಿಯರ ಸಾವು ಎಸ್‌ಐಟಿ ತನಿಖೆಗೆ ವಿಪಕ್ಷ ನಾಯಕ ಆರ್.ಅಶೋಕ್ ಆಗ್ರಹ.

ಡಿ.2- ಐಸಿಸಿ ಅಧ್ಯಕ್ಷರಾಗಿ ಅಧಿಕಾರ ವಹಿಸಿಕೊಂಡ ಜಯ್ ಶಾ.

* ಆಂಧ್ರಪ್ರದೇಶದಲ್ಲಿ ವಕ್ಫ್ ಮಂಡಳಿ ರದ್ದು ಮಾಡಿದ ಸರ್ಕಾರ.

* ಬ್ರಹ್ಮಗಂಟು ಖ್ಯಾತಿಯ ನಟಿ ಶೋಭಿತಾ ಆತ್ಮಹತ್ಯೆ.

ಡಿ.3- ತಮಿಳುನಾಡು: ಫೆಂಗಲ್ ಚಂಡಮಾರುತದ ಅಬ್ಬರ; ಪ್ರವಾಹದಲ್ಲಿ ಕೊಚ್ಚಿ ಹೋದ ವಾಹನಗಳು.

*ರಾಜ್ಯದಲ್ಲಿಯೂ ಸುರಿಯುತ್ತಿರುವ ಮಳೆ- ಶಾಲೆಗಳಿಗೆ ರಜೆ.

ಡಿ.5-ಬಾಂಗ್ಲಾದಲ್ಲಿ ಹಿಂದೂಗಳ ಮೇಲಿನ ದಾಳಿ ಖಂಡಿಸಿ ನಗರದಲ್ಲಿ ಬೃಹತ್ ಪ್ರತಿಭಟನೆ.

ಡಿ.6- ಮಹಾರಾಷ್ಟ್ರ ರಾಜ್ಯದ ಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸಿದ ದೇವೇಂದ್ರ ಫಡ್ನವೀಸ್.


* ಹೈದರಾಬಾದ್: ಪುಷ್ಪ-2 ಚಿತ್ರ ವೀಕ್ಷಣೆ ವೇಳೆ ಕಾಲ್ತುಳಿತ ಮಹಿಳೆ ಸಾವು.

ಡಿ.7- ಜೈಪುರ: ಕೃಷ್ಣನ ದೇವಾಲಯದ ಹುಂಡಿಯಲ್ಲಿ ಬೆಳ್ಳಿ ಪಿಸ್ತೂಲ್, 1 ಕೆಜಿ ಚಿನ್ನ, 23 ಕೋಟಿ ರೂ. ನಗದು ಸಂಗ್ರಹ.

ಡಿ.8- 14ನೇ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷರಾಗಿ ಪ್ರೊ. ಎ.ಬಿ ರಾಮಚಂದ್ರಪ್ಪ ಆಯ್ಕೆ.

ಡಿ.10-ಅಕಾಲಿಕ ಮಳೆ; ಕೊಯ್ಲಿಗೆ ಬಂದ 1095 ಹೆಕ್ಟೇರ್ ಬೆಳೆ ಹಾನಿ ಸರ್ಕಾರಕ್ಕೆ ಜಿಲ್ಲಾಡಳಿತದ ವರದಿ.

ಡಿ.11- ಮಾಜಿ ಮುಖ್ಯಮಂತ್ರಿ ಎಸ್.ಎಂ ಕೃಷ್ಣ ವಿಧಿವಶ; ಸರ್ಕಾರಿ ರಜಾ ಘೋಷಣೆ ಮೂರು ದಿನ ಶೋಕಾಚರಣೆ.



* ಸಂಘರ್ಷಕ್ಕೆ ತಿರುಗಿದ ಪಂಚಮಸಾಲಿ ಹೋರಾಟ: ಲಾಠಿ ಚಾರ್ಜ್ ಸ್ವಾಮೀಜಿ ಸೇರಿದಂತೆ ಮುಖಂಡರ ಪೊಲೀಸರ ವಶಕ್ಕೆ.

ಡಿ.13- ಏಕಕಾಲದ ಚುನಾವಣೆಗೆ ಕೇಂದ್ರ ಸಂಪುಟ ಅಸ್ತು.

* ಭಾರತದ ಚೆಸ್ ಆಟಗಾರ ಗುಕೇಶ್ ವಿಶ್ವ ಚಾಂಪಿಯನ್.

ಡಿ.14- ದರ್ಶನ್ ಸೇರಿ ಏಳು ಮಂದಿಗೆ ಷರತ್ತುಬದ್ಧ ಜಾಮೀನು.

ಡಿ.17-ವಿಶ್ವವಿಖ್ಯಾತ ತಬಲಾ ವಾದಕ ಪದ್ಮವಿಭೂಷಣ ಉಸ್ತಾದ್ ಜಾಕೀರ್ ಹುಸೇನ್ ನಿಧನ. ಬೆಳಗಾವಿ ಅಧಿವೇಶನದಲ್ಲಿ ಸಂತಾಪ.

ಡಿ.18- ಮಾಸ್ಕೋದಲ್ಲಿ ಬಾಂಬ್ ಸಿಡಿದು ರಷ್ಯಾ ಜನರಲ್ ಸಾವು. ಸ್ಫೋಟ ನಡೆಸಿದ್ದು ತಾನೇ ಎಂದ ಉಕ್ರೇನ್.

ಡಿ.19 - ಅಂತರಾಷ್ಟ್ರೀಯ ಕ್ರಿಕೆಟ್‌ಗೆ ಸ್ಪಿನ್ನರ್ ಆರ್.ಅಶ್ವಿನ್ ಗುಡ್ ಬೈ.

* ಉತ್ತರಾಖಂಡದಲ್ಲಿ ಏಕರೂಪ ನಾಗರಿಕ ಸಂಹಿತೆ ಜಾರಿ.

* ಮುಂಬೈ: ನೌಕಾದಳದ ದೋಣಿ ಪ್ರವಾಸಿ ಹಡಗಿಗೆ ಡಿಕ್ಕಿ 13 ಸಾವು.

ಡಿ.20- ಆಕ್ಷೇಪಾರ್ಹ ಹೇಳಿಕೆ; ಪರಿಷತ್ ಸದಸ್ಯ ಸಿ.ಟಿ ರವಿ ವಿರುದ್ಧ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ದೂರು.

* ಸಿ.ಟಿ ರವಿ ಮೇಲೆ ಸುವರ್ಣಸೌಧದ ಮೊಗಸಾಲೆಯಲ್ಲಿಯೇ ಹಲ್ಲೆ.

ಡಿ.21- ರವಿ ಬಂಧನಕ್ಕೆ ಸರಿಯಾದ ಪ್ರಕ್ರಿಯೆ ಪಾಲಿಸಿಲ್ಲ ಎಂಬ ವಾದಕ್ಕೆ ಹೈಕೋರ್ಟ್ ಪುರಸ್ಕಾರ: ಬಿಡುಗಡೆಗೆ ಆದೇಶ.

* ಅಂಬೇಡ್ಕರ್ ಬಗ್ಗೆ ಅವಹೇಳನ: ಅಮಿತ್ ಷಾ ಕ್ಷಮೆಗೆ ಸಂಸತ್‌ನಲ್ಲಿ ಪ್ರಿಯಾಂಕ ಗಾಂಧಿ, ಡಾ. ಪ್ರಭಾ ಮಲ್ಲಿಕಾರ್ಜುನ್ ಆಗ್ರಹ.

ಡಿ.23- ಕಲಬುರಗಿಯಲ್ಲಿ ಜಯದೇವ ಹೃದ್ರೋಗ ಆಸ್ಪತ್ರೆ ಕಟ್ಟಡ ಲೋಕಾರ್ಪಣೆ ಮಾಡಿದ ಸಿಎಂ ಸಿದ್ದರಾಮಯ್ಯ.

* ತೆಲುಗು ನಟ ಅಲ್ಲು ಅರ್ಜುನ್ ಮನೆಗೆ ನುಗ್ಗಿ ಧ್ವಂಸ.

ಡಿ.24- ಶೇಖ್ ಹಸೀನಾ ವಾಪಸ್ ಕಳುಹಿಸುವಂತೆ ಭಾರತಕ್ಕೆ ಬಾಂಗ್ಲಾ ಸರ್ಕಾರದ ಪತ್ರ.

* ಅಮಿತ್ ಶಾ ಹೇಳಿಕೆ ವಿರುದ್ದ ದೇಶಾದ್ಯಂತ ಕಾಂಗ್ರೆಸ್ ಪ್ರತಿಭಟನೆ.


ಡಿ.25- ಸಿ.ಟಿ.ರವಿ ಅಶ್ಲೀಲ ಪದ ಬಳಕೆ ಆರೋಪ ಪ್ರಕರಣ ಸಿಐಡಿ ತನಿಖೆಗೆ ಆದೇಶಿಸಿದ ರಾಜ್ಯ ಸರ್ಕಾರ.

ಡಿ.26- ಮಧ್ಯಪ್ರದೇಶದಲ್ಲಿ ಕೆನ್-ಬೆಟ್ವಾ ನದಿ ಜೋಡಣೆ ಯೋಜನೆ ಶಿಲಾನ್ಯಾಸ ನೆರವೇರಿಸಿದ ಪ್ರಧಾನಿ ಮೋದಿ.

* ರಸ್ತೆ ಅಪಘಾತದಲ್ಲಿ ಹರಿಹರದ ಒಂದೇ ಕುಟುಂಬದ ನಾಲ್ವರ ಸಾವು.

* ಆಫ್ಘಾನ್ ಉಗ್ರರ ನೆಲೆಗಳ ಮೇಲೆ ಪಾಕ್ ದಾಳಿ: ಕನಿಷ್ಟ 13 ಸಾವು.

ಡಿ.27- ಆರ್ಥಿಕ ಸುಧಾರಣೆಯ ಹರಿಕಾರ, ಮಾಜಿ ಪ್ರಧಾನಿ ಮನ ಮೋಹನ ಸಿಂಗ್ ಇನ್ನಿಲ್ಲ. ಏಳು ದಿನ ಶೋಕಾಚರಣೆ, ಸರ್ಕಾರಿ ರಜೆ ಘೋಷಣೆ.



ಡಿ.30- ದಕ್ಷಿಣ ಕೊರಿಯಾ ವಿಮಾನ ದುರಂತ 179 ಸಾವು.

* ಯಮುನಾ ನದಿಯಲ್ಲಿ ಸಿಂಗ್ ಚಿತಾಭಸ್ಮ ವಿಸರ್ಜನೆ.

■■■■

# ಖರ್ಗೆ ರಾಜೀನಾಮೆಗೆ ಪೋಸ್ಟರ್ ವಾರ್

## ಪೋಸ್ಟರ್ ಅಭಿಯಾನದಲ್ಲಿದ್ದ ಬಿಜೆಪಿ ಮುಖಂಡರ ಬಂಧನ




ಬೆಂಗಳೂರು, ಡಿ.31- ಗುತ್ತಿಗೆದಾರ ಸಚಿನ್ ಪಾಂಚಾಳ್ ಆತ್ಮಹತ್ಯೆ ಪ್ರಕರಣದಲ್ಲಿ ಆರೋಪ ಎದುರಿಸುತ್ತಿರುವ ಸಚಿವ ಪ್ರಿಯಾಂಕ್ ಖರ್ಗೆ ರಾಜೀನಾಮೆಗೆ ಆಗ್ರಹಿಸಿ ಬಿಜೆಪಿ ಪೋಸ್ಟರ್ ವಾರ್ ಆರಂಭಿಸಿದೆ.

ಪೋಸ್ಟರ್ ಅಂಟಿಸುವ ಅಭಿಯಾನದಲ್ಲಿ ತೊಡಗಿದ್ದ ಬಿಜೆಪಿ ನಾಯಕರು ಹಾಗೂ ಕಾರ್ಯಕರ್ತರನ್ನು ಪೊಲೀಸರು ಬಂಧಿಸಿದ್ದಾರೆ.

ಈ ಮಧ್ಯೆ ಪ್ರತ್ಯೇಕ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ, ಗುತ್ತಿಗೆದಾರ ಸಚಿನ್ ಆತ್ಮಹತ್ಯೆ ಏಕೆ ಆಯಿತು ಎಂಬುದು ತನಿಖೆಯಿಂದ ಹೊರ ಬರಬೇಕಿದೆ. ಸುಪಾರಿ, ಹನಿಟ್ರ್ಯಾಪ್ ವಿಷಯವೂ ಇದರೊಂದಿಗೆ ಹೆಣೆದುಕೊಂಡಿದ್ದು, ಮಹಾರಾಷ್ಟ್ರದವರ ಹೆಸರುಗಳು ಆರೋಪದಲ್ಲಿ ಕೇಳಿಬಂದಿರುವುದರಿಂದ ಇದು ಅಂತರರಾಜ್ಯ ವಿಚಾರವಾಗಿದ್ದು, ಸಿಬಿಐ ತನಿಖೆಗೆ ನೀಡಬೇಕು ಎಂದರು.

ಸಚಿವ ಪ್ರಿಯಾಂಕ್ ಖರ್ಗೆ ಬಿಜೆಪಿ ಮತ್ತು ಪಕ್ಷದ ನಾಯಕರಿಗೆ ಸವಾಲು ಹಾಕಿದ್ದು, ಬಟ್ಟೆ ಹರಿದುಕೊಂಡರೂ ರಾಜೀನಾಮೆ ಕೊಡುವುದಿಲ್ಲ ಎಂದಿದ್ದಾರೆ, ನ್ಯಾಯ ಕೇಳುವುದು ತಪ್ಪೇ ? ಎಂದು ಪ್ರಶ್ನಿಸಿದರು. ಪ್ರಕರಣದಲ್ಲಿ ಪ್ರಿಯಾಂಕ್ ಖರ್ಗೆ ಅವರ ಲೆಫ್ಟ್ ಹ್ಯಾಂಡ್, ರೈಟ್ ಹ್ಯಾಂಡ್ ಇದ್ದಾರೆ, ತಪ್ಪು ಮಾಡಿದ್ದನ್ನು ಕೇಳುವುದು ವಿರೋಧ ಪಕ್ಷದವರ ಅಧಿಕಾರ ಮತ್ತು ಹಕ್ಕು, ಉತ್ತರ ಕೊಡಲು ಗೊತ್ತಿಲ್ಲದಿದ್ದರೆ ಕೇಳಿ ತಿಳಿದುಕೊಳ್ಳಲಿ.

ಸಚಿವರೇ ಉದ್ಧಟತನ ಬದಿಗಿಡಿ. ನಿಮ್ಮನ್ನು ಟಾರ್ಗೆಟ್ ಮಾಡಿ ಬಿಜೆಪಿಗೆ ಏನೂ ಆಗಬೇಕಾಗಿಲ್ಲ, ಆಪಾದನೆ ಬಂದಾಗ ಯಾವ ರೀತಿ ಎದುರಿಸಬೇಕು ಎಂಬುದನ್ನು ಕಲಿತುಕೊಳ್ಳಿ, ನ್ಯಾಯ ಕೇಳುತ್ತಿದ್ದೇವೆ, ನೀವು ಭಿತ್ತಿಪತ್ರ ಅಂಟಿಸಿದ ಮಾದರಿಯಲ್ಲೇ ನಾವು ನಿಮ್ಮ ರಾಜೀನಾಮೆಗೆ ಆಗ್ರಹಿಸಿ ಭಿತ್ತಿಪತ್ರ ಅಂಟಿಸಿದ್ದೇವೆ ಎಂದರು.

ಸಚಿನ್ ಆತ್ಮಹತ್ಯೆ ಪ್ರಕರಣ ರಾಜ್ಯಾದ್ಯಂತ ಸದ್ದು ಮಾಡುತ್ತಿದೆ, ಇದರಲ್ಲಿ ಸಚಿವ ಪ್ರಿಯಾಂಕ್ ಖರ್ಗೆ ಹೆಸರು ಪ್ರಸ್ತಾಪವಾಗಿದೆ, ಪ್ರಕರಣದ ತನಿಖೆಯನ್ನು ಸಿಬಿಐಗೆ ನೀಡುವಂತೆ ಬಿಜೆಪಿ ಮಾತ್ರವಲ್ಲ, ಮೃತನ ಕುಟುಂಬದವರದ್ದೂ ಆಗ್ರಹವಾಗಿದೆ.

ಬಿಜೆಪಿ ಕಾರ್ಯಕರ್ತರು, ಮುಖಂಡರು 10 ಲಕ್ಷ ರೂ. ಸಂಗ್ರಹಿಸಿ ಮೃತನ ಕುಟುಂಬಕ್ಕೆ ನೀಡಲು ಹೋಗಿದ್ದೆವು, ಅವರು ಕೈಮುಗಿದು 'ನಮಗೆ ಹಣ ಬೇಡ, ನ್ಯಾಯ ಬೇಕು' ಎಂದು ತಿಳಿಸಿದರು.

ಪೊಲೀಸರು ನ್ಯಾಯ ಕೊಡಿಸುವ ಭರವಸೆ ಇಲ್ಲ, ಸಿಐಡಿ ತನಿಖೆ ಬೇಕಾಗಿಲ್ಲ, ಸಿಬಿಐಗೆ ಒಪ್ಪಿಸಿ ನ್ಯಾಯ ಕೊಡಿಸಿ ಎಂದು ಮೃತರ ಸೋದರಿಯರು ಮನವಿ ಮಾಡಿದ್ದಾರೆ ಎಂದರು.

# ಸರ್ಕಾರದಿಂದ 'ಜುಲೈ ದಂಗೆ ಘೋಷಣೆ'

(1ನೇ ಪುಟದಿಂದ) ಹೋರಾಟವನ್ನು 'ಜುಲೈ ದಂಗೆ' ಎಂದು ಪರಿಗಣಿಸುವ ಪ್ರಸ್ತಾವನೆ ಇಲ್ಲ ಎಂದು ಬಾಂಗ್ಲಾ ಸರ್ಕಾರ ನೆನ್ನೆಯಷ್ಟೆ ತಿಳಿಸಿತ್ತು.

ಕೆಲವೇ ದಿನಗಳಲ್ಲಿ ಘೋಷಣೆಯನ್ನು ಸಿದ್ದಪಡಿಸಲಾಗುವುದು. ಸಹಭಾಗಿತ್ವ ಹಾಗೂ ಸರ್ವಸಮ್ಮತಿಯಿಂದ ಈ ಕ್ರಮ ತೆಗೆದುಕೊಳ್ಳಲಾಗುವುದು. ಘೋಷಣೆಯನ್ನು ದೇಶದ ಎದುರು ಮಂಡಿಸಲಾಗುವುದು ಎಂದು ಹಂಗಾಮಿ ಸರ್ಕಾರದ ಮುಖ್ಯ ಸಲಹೆಗಾರ ಮಹಮದ್ ಯೂನಸ್ ಅವರ ಪತ್ರಿಕಾ ಕಾರ್ಯದರ್ಶಿ ಶಫಿಕುಲ್ ಆಲಂ ತಿಳಿಸಿದ್ದಾರೆ. ಪತ್ರಕರ್ತರೊಂದಿಗೆ ಮಾತನಾಡಿದ ಅವರು, ವಿದ್ಯಾರ್ಥಿಗಳು, ರಾಜಕೀಯ ಪಕ್ಷಗಳು ಹಾಗೂ ಸಂಬಂಧಿತ ಎಲ್ಲರ ಜೊತೆ ಚರ್ಚಿಸಿ ನಿರ್ಧಾರ ತೆಗೆದುಕೊಳ್ಳಲಾಗುವುದು ಎಂದಿದ್ದಾರೆ.

# ನಗರದಲ್ಲಿ ವಿಶ್ವ ಕನ್ನಡ ಸಮ್ಮೇಳನದ ಆಯೋಜನೆಗೆ ಆಗ್ರಹಿಸಲು ನಾಳೆ ಸಭೆ




ದಾವಣಗೆರೆ, ಡಿ. 31- ದಾವಣಗೆರೆಯಲ್ಲಿ ವಿಶ್ವ ಕನ್ನಡ ಸಮ್ಮೇಳನ ಆಯೋಜಿಸುವಂತೆ ಸರ್ಕಾರವನ್ನು ಒತ್ತಾಯಿಸಲು ನಾಡಿದ್ದು ದಿನಾಂಕ 2 ರ ಗುರುವಾರ ಮಧ್ಯಾಹ್ನ 3 ಘಂಟೆಗೆ ಕುವೆಂಪು ಕನ್ನಡ ಭವನದಲ್ಲಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಆಶ್ರಯದಲ್ಲಿ ಸರ್ವ ಕನ್ನಡಿಗರ ಪೂರ್ವಭಾವಿ ಸಭೆ ಕರೆಯಲಾಗಿದೆ ಎಂದು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಬಿ.ವಾಮದೇವಪ್ಪ ತಿಳಿಸಿದ್ದಾರೆ.

ಇದೇ ದಿನಾಂಕ 5 ರ ಭಾನುವಾರ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ನಗರಕ್ಕೆ ಭೇಟಿ ನೀಡಲಿದ್ದು, ಅಂದು ಅವರನ್ನು ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್, ಲೋಕಸಭಾ ಸದಸ್ಯರಾದ ಡಾ.ಪ್ರಭಾ ಮಲ್ಲಿಕಾರ್ಜುನ ಹಾಗೂ ಜಿಲ್ಲೆಯ ಎಲ್ಲಾ ಶಾಸಕರ ನೇತೃತ್ವದಲ್ಲಿ ನಿಯೋಗದ ಮೂಲಕ ಭೇಟಿ ಮಾಡಿ ಮನವಿ ಸಲ್ಲಿಸಬೇಕಾಗಿರುವ ಹಿನ್ನೆಲೆ ಯಲ್ಲಿ ಈ ಸಭೆಯನ್ನು ಆಯೋಜಿಸಲಾಗಿದೆ.

ಜಿಲ್ಲೆಯ ವಿದ್ವಾಂಸರು, ಸಾಹಿತಿಗಳು, ಕವಿಗಳು, ಕಲಾವಿದರು, ಪತ್ರಕರ್ತರು, ಜನಪ್ರತಿನಿಧಿಗಳು, ರಾಜಕೀಯ ಮುಖಂಡರು, ಸಂಘ-ಸಂಸ್ಥೆಗಳ ಪದಾಧಿಕಾರಿಗಳು, ಕನ್ನಡಪರ ಹೋರಾಟಗಾರರು, ಸರ್ಕಾರಿ-ಸರ್ಕಾರೇತರ ನೌಕರ ಸಂಘಟನೆಗಳ ನಾಯಕರು, ಕಾರ್ಮಿಕ ಸಂಘಟನೆಗಳ ಮುಖಂಡರು, ರೈತ ಮುಖಂಡರು, ಕನ್ನಡ ಸಾಹಿತ್ಯ ಪರಿಷತ್ತಿನ ಸದಸ್ಯರು ಸೇರಿದಂತೆ ಸರ್ವ ಕನ್ನಡಿಗರು ಸಭೆಗೆ ಆಗಮಿಸಿ ತಮ್ಮ ಅತ್ಯಮೂಲ್ಯ ಸಲಹೆ, ಸೂಚನೆ, ಮಾರ್ಗದರ್ಶನವನ್ನು ನೀಡುವಂತೆ ಬಿ.ವಾಮದೇವಪ್ಪ ವಿನಂತಿಸಿದ್ದಾರೆ.

# ಇಂದು ವಿಶ್ವೇಶತೀರ್ಥ ಶ್ರೀಪಾದಂಗಳವರ 5ನೇ ಆರಾಧನೆ

**ಹರಿಹರ**



ಅಖಿಲ ಭಾರತ ಮಾಧ್ವ ಮಹಾಮಂಡಲ ಹರಿಹರ ಶಾಖೆ ವತಿಯಿಂದ ಶ್ರೀ ವಿಶ್ವೇಶತೀರ್ಥ ಶ್ರೀಪಾಂದಂಗಳವರ 5 ನೇ ಆರಾಧನಾ ಮಹೋತ್ಸವವು ಇಂದು ಬಿರ್ಲಾ ಕಲ್ಯಾಣ ಮಂಟಪ ದಲ್ಲಿ ನಡೆಯಲಿದೆ ಎಂದು ವಿ. ವೆಂಕಟೇಶಾಚಾರ್ ತಿಳಿಸಿದರು. ಶ್ರೀ ವಿಶ್ವ ಮಾಧ್ವ ಮಹಾ ಪರಿಷತ್ತು ಉತ್ತಾರದಿಮಠ ಇವರಿಂದ ಇಂದು ಬೆಳಿಗ್ಗೆ 8 ಗಂಟೆಗೆ ವಾಯುಸ್ತುತಿ ಪುನಶ್ಚರಣೆ ಕಾರ್ಯಕ್ರಮ. ಬೆಳಗ್ಗೆ 10 ಕ್ಕೆ ಭಾರತಿ ಭಜನಾ ಮಂಡಳಿಯ ವತಿಯಿಂದ ಭಜನೆ, 11 ಕ್ಕೆ ಪಂ, ವಿ, ಶ್ರೀ ಸುರೇಶಾಚಾರ್ಯ ರವರಿಂದ ಪ್ರವಚನ, 12 ಕ್ಕೆ ಪಂ.ವಿ. ಗುರುರಾಜಾಚಾರ್ಯ ಗುಡಿ ಅಥಣಿ ಪೂರ್ಣಪ್ರಜ್ಞಾ ಪೀಠದ ವಿದ್ವಾಂಸರಿಂದ ಉಪನ್ಯಾಸ ನಂತರ ಪ್ರಸಾದ ವಿನಿಯೋಗ ನಡೆಯಲಿದೆ.

# ಹರಿಹರದಲ್ಲಿ ಇಂದು ಡಾ. ಬಸವಲಿಂಗ ಶ್ರೀಗಳ 75ನೇ ವರ್ಷದ ಹುಟ್ಟುಹಬ್ಬ ಆಚರಣೆ



ಹರಿಹರ, ಡಿ. 31 - ನಗರದ ಹೊಸ ಭರಂಪುರ ಬಡಾವಣೆಯ ನೂರ ಎಂಟು ಲಿಂಗೇಶ್ವರ ದೇವಸ್ಥಾನದ ಸ್ವಾಮಿಗಳಾದ ಶರಣ ಡಾ. ಶ್ರೀ ಬಸವಲಿಂಗ ಮಹಾಸ್ವಾಮಿಗಳವರ (ಸೊಲ್ಲಾಪುರ) ಹುಟ್ಟು ಹಬ್ಬವನ್ನು ಜನವರಿ 1 ರಂದು ಅದ್ದೂರಿಯಾಗಿ ಆಚರಣೆ ಮಾಡಲಾಗುತ್ತದೆ ಎಂದು ನೂರ ಎಂಟು ಲಿಂಗೇಶ್ವರ ದೇವಸ್ಥಾನ ಸಮಿತಿಯ ಅಧ್ಯಕ್ಷ ಬೆಣ್ಣೆ ರೇವಣಸಿದ್ದಪ್ಪ ತಿಳಿಸಿದರು.

108 ಲಿಂಗೇಶ್ವರ ದೇವಸ್ಥಾನದ ಆವರಣದಲ್ಲಿ ಕರೆದಿದ್ದ ಪತ್ರಿಕಾ ಗೋಷ್ಠಿಯಲ್ಲಿ ಅವರುಗಳು ಮಾತನಾಡಿದರು. 108 ಲಿಂಗೇಶ್ವರ ದೇವಸ್ಥಾನದ ಗುರುಗಳಾದ ಶ್ರೀ ಶರಣ ಡಾ. ಬಸವಲಿಂಗ ಶ್ರೀಗಳು 75ನೇ ವರ್ಷಕ್ಕೆ ಪಾದಾರ್ಪಣೆ ಮಾಡುತ್ತಿರುವ ಹಿನ್ನೆಲೆಯಲ್ಲಿ ಶ್ರೀಗಳ ಜನ್ಮದಿನದ ಪ್ರಯುಕ್ತ ಬೆಳಗ್ಗೆ ಶ್ರೀ ನೂರ ಎಂಟು ಲಿಂಗೇಶ್ವರ, ಬಸವೇಶ್ವರ, ನವಗ್ರಹ, ಆಂಜನೇಯ, ಗಣಪತಿ, ಕುಂಬಳೇಶ್ವರ, ವೆಂಕಟೇಶ್ವರ, ಸುಬ್ರಹ್ಮಣ್ಯ, ಮೂಕ ಬಸವೇಶ್ವರ ದೇವರುಗಳಿಗೆ ವಿಶೇಷ ಪೂಜೆಯನ್ನು ಭಕ್ತರ ಸಮ್ಮುಖದಲ್ಲಿ ಮಾಡಲಾಗುತ್ತದೆ. ನಂತರ ಬೆಳಗ್ಗೆ 11 ಗಂಟೆಗೆ ವೇದಿಕೆ ಕಾರ್ಯಕ್ರಮ ನಡೆಯಲಿದೆ.

ವೇದಿಕೆ ಕಾರ್ಯಕ್ರಮದಲ್ಲಿ ಕೂಡಲ ಸಂಗಮದ ಪಂಚಮಸಾಲಿ ಪೀಠದ ಜಗದ್ಗುರು ಶ್ರೀ ಬಸವ ಜಯ ಮೃತ್ಯುಂಜಯ ಶ್ರೀಗಳು ಹಾಗೂ ಸರ್ವೋದಯ ಮಠದ ಶಿವಕುಮಾರ ಶ್ರೀಗಳು ಸಾನ್ನಿಧ್ಯ ವಹಿಸುವರು. ಶಾಸಕ ಬಿ.ಪಿ. ಹರೀಶ್, ಮಾಜಿ ಶಾಸಕ ಎಚ್.ಎಸ್. ಶಿವಶಂಕರ್, ಎಸ್. ರಾಮಪ್ಪ, ಕಾಂಗ್ರೆಸ್ ಮುಖಂಡ ಶ್ರೀನಿವಾಸ್ ನಂದಿಗಾವಿ ಸೇರಿದಂತೆ ವಿವಿಧ ಗಣ್ಯರು ಭಾಗವಹಿಸುವರು. ಜನವರಿ 2 ರಂದು ಸಂಜೆ 6 ಗಂಟೆಗೆ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.

ಶರಣ ಡಾ. ಬಸವಲಿಂಗ ಶ್ರೀಗಳು ಮಾತನಾಡಿದರು. ಪತ್ರಿಕಾ ಗೋಷ್ಠಿಯಲ್ಲಿ ದೇವಸ್ಥಾನ ಸಮಿತಿಯ ಗೌರವಾಧ್ಯಕ್ಷ ಜಿ. ನಂಜಪ್ಪ, ಖಜಾಂಚಿ ಬೆಣ್ಣೆ ಸಿದ್ದೇಶ್, ಉಪಾಧ್ಯಕ್ಷ ಹರಪನಹಳ್ಳಿ ಬಸವ ರಾಜಪ್ಪ, ಕಾರ್ಯದರ್ಶಿ ಮಾಲತೇಶ್, ಸಹ ಕಾರ್ಯದರ್ಶಿ ಕೆ.ಜಿ. ಶಿವಕುಮಾರ್, ಸದಸ್ಯರಾದ ಗಜೇಂದ್ರ, ಕರಿಬಸಪ್ಪ ಕಂಚಿಕೇರಿ, ಮುರಿಗೆಮ್ಮ , ಹಾವನೂರು ಈರಣ್ಣ, ಮಜ್ಜಿಗೆ ಚಂದ್ರಪ್ಪ, ನೀಲಗುಂದ್ ಪರಮೇಶ್ವರಪ್ಪ, ಬೆಟ್ಟಪ್ಪ, ಪಂಡಿತ ರುದ್ರಯ್ಯ, ಅರ್ಚಕ ಮಹಾರುದ್ರಪ್ಪ ಸೇರಿದಂತೆ ಇತರರಿದ್ದರು.

# ನಂದಿಬೇವೂರು ಪ್ರಾಥಮಿಕ ಗ್ರಾಮೀಣ ಕೃಷಿ ಸಹಕಾರ ಸಂಘಕ್ಕೆ ಆಯ್ಕೆ



**ಹರಪನಹಳ್ಳಿ**

ಹರಪನಹಳ್ಳಿ,ಡಿ.31- ನಂದಿಬೇವೂರು ಗ್ರಾಮದ ವಿವಿಧೋದ್ದೇಶ ಪ್ರಾಥಮಿಕ ಗ್ರಾಮೀಣ ಕೃಷಿ ಸಹಕಾರ ಸಂಘದ ಆಡಳಿತ ಮಂಡಳಿಗೆ ನಡೆದ ಚುನಾವಣೆಯಲ್ಲಿ ನಂದಿಬೇವೂರು ಗ್ರಾಮದ ರೇವಣಸಿದ್ದಪ್ಪ ಅವರ ಬೆಂಬಲಿಗ 7 ಅಭ್ಯರ್ಥಿಗಳು ಜಯ ಸಾಧಿಸಿದ್ದಾರೆ.

12 ನಿರ್ದೇಶಕರ ಸ್ಥಾನಗಳಿಗೆ ಚುನಾವಣೆ ನಡೆಸಲಾಯಿತು. ಸಾಲಗಾರರ ಕ್ಷೇತ್ರದ ಒಟ್ಟು ಮತಗಳು 519, ಇದರಲ್ಲಿ ಚಲಾವಣೆಗೊಂಡ ಮತಗಳು 498.ಸಾಲಗಾರರಲ್ಲದ ಕ್ಷೇತ್ರದ ಒಟ್ಟು ಮತಗಳು 28, ಚಲಾವಣೆಗೊಂಡ ಮತಗಳು 27. ಅಭ್ಯರ್ಥಿಗಳಾದ ಹೆಚ್.ಅಶೋಕಗೌಡ, ಕೆಸರಳ್ಳಿ ಕರಿಬಸಪ್ಪ, ಗಂಗಮ್ಮ, ದಸ್ಸಾಪುರ ವೀರಣ್ಣ, ಎ.ಹೆಚ್.ಶಂಕ್ರಪ್ಪ, ಚಿಗಟೇರಿ ನಾಗಮ್ಮ, ಚನ್ನವೀರಮ್ಮ, ಕುರುಬರ ಶಿವಪ್ಪ, ಉಜ್ಜಳ್ಳಿ ಜಗದೀಶ, ಪೂಜಾರ್ ಹನುಮಪ್ಪ, ಹರಿಜನ ಚಾರೆಪ್ಪ, ಎಂ.ಪರಮೇಶ ಇವರುಗಳು ಚುನಾಯಿತರಾಗಿದ್ದಾರೆ ಎಂದು ಚುನಾವಣಾ ಅಧಿಕಾರಿ ಕೆ.ಮಂಜುನಾಥ ತಿಳಿಸಿದ್ದಾರೆ.

ಈ ವೇಳೆ ಬಿಜೆಪಿ ಎಸ್ಸಿ ಮೋರ್ಚಾ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಕಣವಿಹಳ್ಳಿ ಮಂಜುನಾಥ, ಕೊಂಗನಹೊಸೂರು ಶಿವಪ್ಪ, ಉತ್ತಂಗಿ ರಾಮನಗೌಡ, ಕೊಟ್ರಯ್ಯ, ಬ್ಯಾಲಾಳ್ ಈರಣ್ಣ, ಹಾವನೂರು ಪ್ರಕಾಶ್, ಸಹಕಾರಿ ಸಂಘದ ಕಾರ್ಯದರ್ಶಿ ಕೆ.ಎಸ್.ಶಿವಕುಮಾರ್ ಸೇರಿದಂತೆ ಅನೇಕರು ಹಾಜರಿದ್ದರು.

# ಕೊಕ್ಕನೂರು ಹಾಲು ಉತ್ಪಾದಕರ ಸಂಘದ ಅಧ್ಯಕ್ಷರಾಗಿ ಹನುಮಗೌಡ

ಮಲೇಬೆನ್ನೂರು, ಡಿ. 31 - ಕೊಕ್ಕನೂರು ಹಾಲು ಉತ್ಪಾದಕರ ಸಹಕಾರ ಸಂಘದ ನೂತನ ಅಧ್ಯಕ್ಷರಾಗಿ ಹನುಮಗೌಡ ಕಡೂರು ಮತ್ತು ಉಪಾಧ್ಯಕ್ಷರಾಗಿ ಎಂ. ಷಣ್ಮುಖ ಅವರು ಮಂಗಳವಾರ ನಡೆದ ಚುನಾವಣೆಯಲ್ಲಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಸಂಘದ ನೂತನ ನಿರ್ದೇಶಕರಾಗಿ ಶ್ರೀಮತಿ ನಿರ್ಮಲ, ಕೆ.ಪಿ. ನಿರಂಜನ್, ಕೆ.ಹೆಚ್. ಚಂದ್ರಶೇಖರ್, ಡಿ.ಕೆ. ಲೋಕಪ್ಪ, ಶ್ರೀಮತಿ ಶಂಕ್ರಮ್ಮ, ಎ.ಕೆ. ಅಂಜಿನಪ್ಪ, ಡಿ. ಮಾರುತಿ, ರೂಪಮ್ಮ, ಹುಗ್ಗಿ ಬಸಪ್ಪ, ಪಿ.ಎಲ್. ಅಂಜಿನಪ್ಪ, ಇವರು ಅವಿರೋಧವಾಗಿ ಆಯ್ಕೆ ಯಾಗಿದ್ದಾರೆ ಎಂದು ಚುನಾವಣಾಧಿಕಾರಿ ಸಹಕಾರ ಅಭಿವೃದ್ಧಿ ಅಧಿಕಾರಿ ಸುನೀತ ಪ್ರಕಟಿಸಿದ್ದಾರೆ.

ಗ್ರಾಮದ ಮುಖಂಡರಾದ ಎಂ. ನಿಂಗನಗೌಡ, ದಾಸರ ಸೋಮಶೇಖರಪ್ಪ, ಹೆಚ್.ಹೆಚ್. ನಾಗರಾಜ್, ಡಿ.ಎಲ್. ನಾಗರಾಜ್, ಹೋಸೂರು ರಂಗಪ್ಪ, ಕೆ.ಹೆಚ್. ಹನುಮಂತಪ್ಪ, ಹೆಚ್. ಹನುಮಂತಪ್ಪ, ದಾಸರ ಬಸವರಾಜಪ್ಪ, ಡಿ. ಸುರೇಶಪ್ಪ, ಹೆಚ್. ಪರಮೇಶಗೌಡ, ಜಿ. ಪರಮೇಶಪ್ಪ, ಎಂ. ಹನುಮಂತಪ್ಪ, ಎಲ್‌ಐಸಿ. ಹನುಮಂತ, ಬಿ. ಕೃಷ್ಣಪ್ಪ, ಟಿ.ಆರ್. ಹನುಮಗೌಡ ಹಾಗೂ ಇತರರು ಈ ವೇಳೆ ಹಾಜರಿದ್ದರು. ಸಂಘದ ಕಾರ್ಯದರ್ಶಿ ಡಿ. ಶಾಂತಪ್ಪ ಸ್ವಾಗತಿಸಿದರು.






ಸಮಸ್ತ ಕಾರ್ಮಿಕ ಬಂಧುಗಳಿಗೆ
2025 ಹೊಸ ವರ್ಷದ ಶುಭಾಶಯಗಳು


ಬಾಳೆಹೊಲದ ರೇವಣಸಿದ್ದಪ್ಪ
ಜಿಲ್ಲಾ ಕಾರ್ಯದರ್ಶಿ ಕಾರ್ಮಿಕರ ವಿಭಾಗ, ಕಾಂಗ್ರೆಸ್ ಪಕ್ಷ


ಜಿ. ಸುರೇಶ್
ಜಿಲ್ಲಾ ಸಂಘಟನಾ ಕಾರ್ಯದರ್ಶಿ ಕಾರ್ಮಿಕರ ವಿಭಾಗ, ಕಾಂಗ್ರೆಸ್ ಪಕ್ಷ


ಆಲೂರು ಪ್ರಕಾಶ್
ಕಾಂಗ್ರೆಸ್ ಮುಖಂಡರು


ಲೋಕೇಶ್ ನಾಯ್ಕ
ರಾಜ್ಯ ಸಂಘಟನಾ ಕಾರ್ಯದರ್ಶಿ ಕಾರ್ಮಿಕರ ವಿಭಾಗ, ಕಾಂಗ್ರೆಸ್ ಪಕ್ಷ


ಎಸ್. ಚೌಡಪ್ಪ
ಜಿಲ್ಲಾ ಉಪಾಧ್ಯಕ್ಷರು ಕಾರ್ಮಿಕರ ವಿಭಾಗ, ಕಾಂಗ್ರೆಸ್ ಪಕ್ಷ


ಆರ್. ವೆಂಕಟೇಶ್
ತಾಲ್ಲೂಕು ಉಪಾಧ್ಯಕ್ಷರು ಕಾರ್ಮಿಕರ ವಿಭಾಗ, ಕಾಂಗ್ರೆಸ್ ಪಕ್ಷ


## ಮಾನ್ಯ ಭೂಮಾಪನ ಉಪ ನಿರ್ದೇಶಕರ ನ್ಯಾಯಾಲಯ, ದಾವಣಗೆರೆ.

**ಭೂಮಿ ಉಪ ನಿರ್ದೇಶಕರ ಅಪೀಲು ನಂ. 472/2024-25**
**ಅಪೀಲುದಾರರು : ಶ್ರೀಮತಿ ಕಲ್ಪನ ಕೋಂ ಮಲ್ಲಿಕಾರ್ಜುನಪ್ಪ ವಿರುದ್ಧ/-**
**ಎದುರುದಾರರು : ಮಾನ್ಯ ಭೂ.ಸಾ.ನಿ. ಮತ್ತು ಇತರರು**

### ಸಾರ್ವಜನಿಕ ಪತ್ರಿಕಾ ಪ್ರಕಟಣೆ

ದಾವಣಗೆರೆ ತಾಲ್ಲೂಕು, ಮಾಯಕೊಂಡ ಹೋಬಳಿ, ಕಬ್ಬೂರು ಗ್ರಾಮದ ರಿ.ಸರ್ವೆ ನಂ. 79/11, ರಲ್ಲಿ ಅಪೀಲುದಾರರಿಗೆ 02 ಎಕರೆ ಜಮೀನಿದ್ದು, ಆ ಪ್ರಕಾರ ಹಕ್ಕು ದಾಖಲೆ ಅನುಭವದಂತೆ ಪೋಡು ಮಾಡದೇ, ಹಕ್ಕು ಮತ್ತು ಅನುಭವಕ್ಕೂ ವಿರುದ್ಧವಾಗಿ ವಿಸ್ತೀರ್ಣವನ್ನು ವ್ಯತ್ಯಾಸ ಮಾಡಿ ಅನುಭವಕ್ಕೂ ಪೋಡಿಗೂ ವ್ಯತ್ಯಾಸ ಮಾಡಿ ದೂಷಿತ ಆದೇಶವನ್ನು 1ನೇ ಎದುರುದಾರರು ಮಾಡಿದ್ದು ಮಾನ್ಯ ಘನ ನ್ಯಾಯಾಲಯದಲ್ಲಿ ಕರ್ನಾಟಕ ಭೂ ಕಂದಾಯ ಅಧಿನಿಯಮ ಕಾಯ್ದೆ ಕಲಂ 49 (ಎ)ರ ಅಡಿಯಲ್ಲಿ ಅಪೀಲನ್ನು ಎದುರುದಾರ ವಿರುದ್ಧ ಅಪೀಲುದಾರರಾದ ಶ್ರೀಮತಿ ಕಲ್ಪನ ವಿ. ಕೋಂ ಮಲ್ಲಿಕಾರ್ಜುನಪ್ಪ ವಯಸ್ಸು ಸುಮಾರು 35 ವರ್ಷ ಗೃಹಿಣಿ, ವಾಸ : ಕಬ್ಬೂರು ಗ್ರಾಮ, ಇವರು ಅಪೀಲನ್ನು ಸಲ್ಲಿಸಿರುತ್ತಾರೆ. ಸದರಿ ಅಪೀಲಿನಲ್ಲಿ ಎದುರುದಾರ ಸಂಖ್ಯೆ 7) ಶ್ರೀಮತಿ ಸುಮಾ ಯಾನೆ ಸುನೀತ ಕೋಂ ಲೇಟ್ ನರಸಿಂಹಪ್ಪ 10) ಶ್ರೀ ದೇವೇಂದ್ರಪ್ಪ ಜಿ.ಕೆ. ಬಿನ್ ಲೇಟ್ ಕರಿಯಪ್ಪ 14, ಶ್ರೀಮತಿ ಜಿ.ಎಂ. ಗೀತಾ ಬಿನ್ ಲೇಟ್ ಮಾಹಾದೇವಪ್ಪ ಎಲ್ಲರೂ ವಯಸ್ಕರು ವಾಸ : ಕಬ್ಬೂರು ಗ್ರಾಮ, ದಾವಣಗೆರೆ ತಾಲ್ಲೂಕು, ಇವರುಗಳ ವಿಚಾರಣೆಗೆ/ಹಾಜರಾತಿಗಾಗಿ, ಮಾನ್ಯ ಘನ ನ್ಯಾಯಾಲಯವು ದಿನಾಂಕ : 9.1.2025 ರಂದು ಮಧ್ಯಾಹ್ನ 03 ಗಂಟೆಗೆ ವಿಚಾರಣೆಗಾಗಿ ದಿನಾಂಕವನ್ನು ನಿಗದಿ ಮಾಡಿರುತ್ತದೆ. ಈ ಬಗ್ಗೆ ಮೇಲ್ಕಂಡ ವ್ಯಕ್ತಿಗಳು ಯಾವುದೇ ರೀತಿ ತಂಟೆ - ತಕರಾರುಗಳು ಇದ್ದಲ್ಲಿ, ಖುದ್ದಾಗಿ ಅಥವಾ ಅವರ ಪ್ರತಿನಿಧಿಸುವ ಪರ ವಕೀಲರಿಂದಾಗಲೀ ಹಾಜರಾಗತಕ್ಕದ್ದು. ತಪ್ಪಿದ್ದಲ್ಲಿ ಮಾನ್ಯ ಘನ ನ್ಯಾಯಾಲಯವು ಯಾವುದೇ ತಂಟೆ - ತಕರಾರು ಇಲ್ಲವೆಂದು ಪರಿಗಣಿಸಿ ಪ್ರಕರಣವನ್ನು ಕಾನೂನು ರೀತಿ ಮುಂದಿನ ಕ್ರಮ ಕೈಗೊಳ್ಳುತ್ತದೆ ತಿಳಿಯಿರಿ.

**ಅಪೀಲುದಾರರ ಪರ ವಕೀಲರು**
**ಡಿ.ಎನ್. ಅಶೋಕ್ ಕುಮಾರ್**
**ಕೆ.ಸಿ. ರುದ್ರೇಶ್**
**ಸ್ಥಳ : ದಾವಣಗೆರೆ.**
**ದಿನಾಂಕ : 19.12.2024**

**ಸಹಿ/- ಮಾನ್ಯ ಭೂ ದಾಖಲೆಗಳ ಉಪನಿರ್ದೇಶಕರವರ ನ್ಯಾಯಾಲಯ, ದಾವಣಗೆರೆ.**

## ಬಾಪೂಜಿ ಕೋ-ಆಪರೇಟಿವ್ ಬ್ಯಾಂಕ್ ಲಿ.,

**ಆಡಳಿತ ಕಛೇರಿ, ನಂ.120, ಹರ್ಡೇಕರ್ ಮಂಜಪ್ಪ ರಸ್ತೆ, ದಾವಣಗೆರೆ-577 001**

### ಸ್ಥಿರಾಸ್ತಿ ಸ್ವತ್ತಿನ ಮಾರಾಟ ಸೂಚನೆ

ಸೆಕ್ಯೂರಿಟೈಜೇಶನ್ ಅಂಡ್ ರಿಕನ್ಸ್ಟ್ರಕ್ಷನ್ ಆಫ್ ಫೈನಾನ್ಸಿಯಲ್ ಅಸೆಟ್ಸ್ ಮತ್ತು ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯೂರಿಟಿ ಇಂಟರೆಸ್ಟ್ ಆ್ಯಕ್ಟ್ ನ 2002 ನಿಯಮ 8(6) ರ ಸೆಕ್ಯೂರಿಟಿ ಇಂಟರೆಸ್ಟ್ (ಎನ್‌ಪೋರ್ಸ್‌ಮೆಂಟ್) ನಿಯಮ 2002 ರ ಪ್ರಕಾರ ಕೆಳಗೆ ಸೂಚಿಸಿರುವ ಸಾಲಗಾರರು ಬ್ಯಾಂಕಿಗೆ ಬರಬೇಕಾದ ಬಾಕಿಯನ್ನು ಪಾವತಿಸುವಲ್ಲಿ ವಿಫಲರಾಗಿರುವುದರಿಂದ ಈ ನೋಟೀಸನ್ನು ನೀಡಲಾಗಿದೆ. ಸೆಕ್ಯೂರಿಟೈಜೇಶನ್ ಅಂಡ್ ರಿಕನ್ಸ್ಟ್ರಕ್ಷನ್ ಆಫ್ ಫೈನಾನ್ಸಿಯಲ್ ಅಸೆಟ್ಸ್ ಮತ್ತು ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯೂರಿಟಿ ಇಂಟರೆಸ್ಟ್ ಆ್ಯಕ್ಟ್ 2002 ರ ಕಾಯ್ದೆಯಲ್ಲಿ ಸೆಕ್ಷನ್ 13(4) ರ ಅನ್ವಯ ಬಾಪೂಜಿ ಕೋ-ಆಪರೇಟಿವ್ ಬ್ಯಾಂಕ್ ಲಿ., ದಾವಣಗೆರೆ-577 001 ಅಧಿಕೃತ ಅಧಿಕಾರಿಯವರಿಂದ ಮೇಲ್ಕಂಡ ಕಾಯ್ದೆಯ ಅನ್ವಯ ಬ್ಯಾಂಕು ತನ್ನ ಅಧಿಕಾರಗಳನ್ನು ಚಲಾಯಿಸಿ, ಬ್ಯಾಂಕು ತನಗೆ ಬರಬೇಕಾದ ಬಾಕಿ ವಸೂಲಿಗಾಗಿ ಷೆಡ್ಯೂಲ್-1, ಭಾಗ-ಬಿ ಮತ್ತು ಷೆಡ್ಯೂಲ್ -1, ಭಾಗ-ಎ ಯಲ್ಲಿರುವ ಸೂಚಿಸಿರುವಂತೆ ಕೆಳಕಂಡ ನಿಯಮ ಮತ್ತು ಷರತ್ತುಗಳಿಗೆ ಅನುಗುಣವಾಗಿ ಮಾರಾಟ ಮಾಡಲಾಗುತ್ತದೆ.

| | |
|---|---|
| ಮಾರಾಟದ ದಿನಾಂಕ | 05-02-2025 |
| ಮಾರಾಟದ ಸಮಯ | ಷೆಡ್ಯೂಲ್ -1 ಭಾಗ-ಎ, ಕಲಂ-5 ನ್ನು ಆಧಾರ ಮಾಡಿ |
| ಮಾರಾಟದ ಸ್ಥಳ | ಆಧಾರವಾಗಿರುವ ಸೊತ್ತಿನ ಮುಂಭಾಗದಲ್ಲಿ |
| ಸ್ಥಿರಪಡಿಸಿದ ಮೀಸಲು ಬೆಲೆ | ಷೆಡ್ಯೂಲ್-1 ಭಾಗ-ಎ, ಕಲಂ-3 ನ್ನು ಆಧಾರ ಮಾಡಿ |
| ಮುಂಗಡ ಹಣ ಠೇವಣಿ | ಷೆಡ್ಯೂಲ್-1 ಭಾಗ-ಎ, ಕಲಂ-4ನ್ನು ಆಧಾರ ಮಾಡಿ |

**ಷೆಡ್ಯೂಲ್-1, ಭಾಗ-ಎ**

| ಕ್ರ. ಸಂ. | ಸಾಲಗಾರರು/ಸಹ ಸಾಲಗಾರರ ಹೆಸರು | ಆಸ್ತಿಯ ವಿವರಣೆ | ಮೀಸಲು ಬೆಲೆ ರೂಗಳಲ್ಲಿ | ಮುಂಗಡ ಠೇವಣಿ ರೂ.ಗಳಲ್ಲಿ 10% | ಮಾರಾಟದ ಸಮಯ |
|---|---|---|---|---|---|
| | 1 | 2 | 3 | 4 | 5 |
| | ಮೆ॥ ಎಸ್.ಪಿ. ರಾಕ್ಸ್ ಅಂಡ್ ಗ್ರಾನೈಟ್ಸ್ ಡೋರ್ ನಂ.1962, ಎಂ.ಸಿ.ಸಿ. ಬಿ ಬ್ಲಾಕ್, ವಾಟರ್ ಟ್ಯಾಂಕ್ ಎದುರು, ದಾವಣಗೆರೆ. ಮಾಲೀಕರು: ಪುಷ್ಪ. ಜಿ.ಎಸ್. ಕೋಂ ಲೇಟ್ ಸಿದ್ದೇಶ್ ಮತ್ತು ಮಕ್ಕಳು. ಜಾಮೀನುದಾರರು: 1)ಡಾ. ವಿ. ಭಾಗ್ಯ ಸಿ/ಆಫ್ ವಿರುಪಾಕ್ಷಪ್ಪ, ಚಂದ್ರಗಿರಿ ಅಪಾರ್ಟ್‌ಮೆಂಟ್, ಆಂಜನೇಯ ಬಡಾವಣೆ, ದಾವಣಗೆರೆ. 2)ಡಾ. ಅನೀಲ್‌ಕುಮಾರ್ ನೆಲ್ಲಿಗಿ ಬಿನ್ ಎಸ್.ಆರ್. ನೆಲ್ಲಿಗಿ, ಡೋರ್ ನಂ.2007/18, 2ನೇ ತಿರುವು, ಸಿದ್ದವೀರಪ್ಪ ಬಡಾವಣೆ, ದಾವಣಗೆರೆ. | ದಾವಣಗೆರೆ ನಗರದ 6ನೇ ಮುಖ್ಯರಸ್ತೆ, ಎಂ.ಸಿ.ಸಿ. ಎ ಬ್ಲಾಕ್, ದಾವಣಗೆರೆ, ಸೈಟ್ ನಂ.9, ಹಳೇ ಡೋರ್ ನಂ.827, ಚಾಲ್ತಿ ಮಹಾನಗರಪಾಲಿಕೆ ಡೋರ್ ನಂ.1962, ಅಳತೆ ಪೂರ್ವ-ಪಶ್ಚಿಮ 95 ಅಡಿಗಳು, ಉತ್ತರ-ದಕ್ಷಿಣ 95 ಅಡಿಗಳು, (95X95 ಅಡಿಗಳು) ಇದರ ಚೆಕ್ಕುಬಂದಿ:- ಪೂರ್ವಕ್ಕೆ : ಸೈಟ್ ನಂ.8, ಪಶ್ಚಿಮಕ್ಕೆ : 6ನೇ ಮುಖ್ಯರಸ್ತೆ, ಉತ್ತರಕ್ಕೆ : ಇದೇ ಸೈಟ್ ಪೈಕಿ ಬಾಕಿ ಉಳಿದಿರುವ ಸೈಟ್, ದಕ್ಷಿಣಕ್ಕೆ : ರಸ್ತೆ. | ರೂ.6,38,56,784-00 | ರೂ.63,85,678-00 | ಬೆಳಗ್ಗೆ 12.00 ಗಂಟೆಗೆ |

**ಷೆಡ್ಯೂಲ್-1, ಭಾಗ-ಬಿ**

| ಸಾಲಗಾರರು/ಸಹ ಸಾಲಗಾರರ ಹೆಸರು | ಸಾಲ ಸೌಲಭ್ಯದ ಸ್ವರೂಪ | ಸಾಲದ ಬಾಕಿ (ಮೊಬಲಗು ರೂ.ಗಳಲ್ಲಿ) |
|---|---|---|
| ಮಾಲೀಕರು: ಪುಷ್ಪ. ಜಿ.ಎಸ್. ಕೋಂ ಲೇಟ್ ಸಿದ್ದೇಶ್. ಜಿ. ಮತ್ತು ಮಕ್ಕಳು | ಎಂಟಿಎಲ್-132 Business (Working Capital) | ರೂ.6,38,56,784-00 + ಇತರೆ ಖರ್ಚು, (ದಿನಾಂಕ 25-12-2024 ರ ವರೆಗೆ) ತಗಲುವ ವೆಚ್ಚ, ಬಡ್ಡಿ ಮತ್ತು ಇತ್ಯಾದಿ |

**ಈ ಮೊದಲು ಯಾವುದೇ ಮೊತ್ತವನ್ನು ಪಾವತಿಸಿದಲ್ಲಿ ಅದನ್ನು ಒಟ್ಟು ಬಾಕಿಯೊಂದಿಗೆ ಹೊಂದಿಸಿಕೊಳ್ಳಲಾಗುವುದು.**

ಷೆಡ್ಯೂಲ್-1, ಭಾಗ-ಬಿ ಯಲ್ಲಿರುವಂತೆ ಸಾಲಗಳು ಮತ್ತು ವೆಚ್ಚಗಳನ್ನು ದಿನಾಂಕ 04-02-2025 ರಂದು ಸಂಜೆ 4.30 ಗಂಟೆಗೆ ಅಥವಾ ಮುಂಚಿತವಾಗಿ ಪಾವತಿಸಿದ್ದಲ್ಲಿ ಅಧಿಕೃತ ಅಧಿಕಾರಿಯವರು ಮಾರಾಟ ಪ್ರಕ್ರಿಯೆಯನ್ನು ಸ್ಥಗಿತಗೊಳಿಸಬಹುದು, ಮಾರಾಟ ಪ್ರಕ್ರಿಯೆ ಪೂರ್ಣಗೊಂಡ ನಂತರ ಮಾಹಿತಿಗಳು ಅಥವಾ ಆಫರ್‌ಗಳನ್ನು ನಿಮ್ಮಿಂದ ಸ್ವೀಕರಿಸಲಾಗುವುದಿಲ್ಲ. ಈ ಮೂಲಕ ಸೂಚಿಸುವುದೇನೆಂದರೆ ಷೆಡ್ಯೂಲ್ -1, ಭಾಗ-ಎ ಯಲ್ಲಿ ಆಸ್ತಿಯು ಹಾಗೂ ಷೆಡ್ಯೂಲ್-1 ಭಾಗ-ಬಿ ಯಲ್ಲಿ ನಮೂದಿಸಿರುವ ಸಾಲಗಳಿಗಿಂತ ಕಡಿಮೆ ಇದ್ದಲ್ಲಿ ಬರಬೇಕಾದ ಬಾಕಿ ವಸೂಲಾತಿಗಾಗಿ ಕಾನೂನಿನನ್ವಯ ಬ್ಯಾಂಕು ಕ್ರಮ ಕೈಗೊಳ್ಳುತ್ತದೆ.

**ಮಾರಾಟದ ನಿಯಮಗಳು:-**

1) ಮಾರಾಟವನ್ನು ಎಲ್ಲಿ ಹೇಗಿದೆಯೋ ಹಾಗೆ ಮತ್ತು ಯಾವುದೇ ಆಧಾರವನ್ನು ಪಡೆಯದೆ ಮತ್ತು ಯಾವುದೇ ಸ್ಥಿತಿಯಲ್ಲಿ ಅಥವಾ ಇತರೆ ಯಾವುದೇ ಕಾರಣಗಳು ಆಸ್ತಿಗೆ ಧಕ್ಕೆಯಾಗದಂತೆ ಮಾರಾಟ ಮಾಡಲಾಗುವುದು. ಬ್ಯಾಂಕು ಆಸ್ತಿಗೆ ಧಕ್ಕೆ ಬರಬಹುದಾದ ಯಾವುದೇ ಸ್ಥಿತಿಗೆ ಅಥವಾ ಯಾವುದೇ ಹಕ್ಕುಗಳಿಗೆ ಜವಾಬ್ದಾರರಾಗಿರುವುದಿಲ್ಲ. 2) ಷೆಡ್ಯೂಲ್-1, ಭಾಗ-ಬಿ ರಲ್ಲಿ ನಿರ್ಧಿಷ್ಟವಾಗಿ ನಮೂದಿಸಲಾಗಿರುವ ವಿವರಗಳು ಬ್ಯಾಂಕಿಗೆ ತಿಳಿದಿರುವ ನಿಖರವಾದ ವಿವರಗಳಾಗಿರುತ್ತವೆ ಮತ್ತು ಇದರಲ್ಲಿನ ಯಾವುದೇ ತಪ್ಪುಗಳಿಗೆ, ತಪ್ಪು ಹೇಳಿಕೆ ಅಥವಾ ತೆಗೆದು ಹಾಕಿರುವ ವಿವರಗಳಿಗೆ ಬ್ಯಾಂಕು ಉತ್ತರದಾಯಿತ್ವವಲ್ಲ. 3) ದಾಖಲಾದ ಕಾರಣಗಳಿಗೆ ಮಾರಾಟವನ್ನು ರದ್ದುಗೊಳಿಸುವ/ಮುಂದೂಡುವ ಮತ್ತು ಸಲ್ಲಿಸಲಾದ ಬಿಡ್‌ಗಳನ್ನು ವಾಪಾಸ್ಸು ಮಾಡುವ ಹಕ್ಕನ್ನು ಅಧಿಕೃತ ಅಧಿಕಾರಿಯವರ ನಿರ್ಣಯಕ್ಕೆ ಬಿಟ್ಟದ್ದು ಮತ್ತು ಈ ಕುರಿತು ಬಿಡ್‌ದಾರರಿಂದ ಯಾವುದೇ ಕ್ಲೈಮನ್ನು ಅಥವಾ ಯಾವುದೇ ಪ್ರತಿನಿಧಿಗೆ ಬ್ಯಾಂಕ್ ಅವಕಾಶ ನೀಡುವುದಿಲ್ಲ. 4) ಸ್ಥಿರಾಸ್ತಿಯ ಮಾರಾಟದಲ್ಲಿ ಯಶಸ್ವಿ ಬಿಡ್‌ದಾರರೆಂದು ನಿಗದಿಯಾದ ವ್ಯಕ್ತಿಯು 25% ಮೊತ್ತವನ್ನು ಸ್ಥಳದಲ್ಲೇ ಕೂಡಲೇ ಪಾವತಿಸಬೇಕು ಮತ್ತು ಬಾಕಿ ಮೊತ್ತವನ್ನು ಬ್ಯಾಂಕಿನಿಂದ ಮಾರಾಟವು ದೃಢೀಕರಣಗೊಳಿಸಿ, 15 ದಿನಗಳೊಳಗೆ ಪಾವತಿಸಬೇಕು. ಸದರಿ ಮೊತ್ತವನ್ನು ನಿಗಧಿಪಡಿಸಿದ ದಿನಾಂಕದ ಒಳಗೆ ಪಾವತಿಸಲು ವಿಫಲರಾದಲ್ಲಿ ಖರೀದಿದಾರರೆಂದು ನಿರ್ಧರಿಸಿದ ವ್ಯಕ್ತಿಯು ಈವರೆಗೆ ಪಾವತಿಸಿದ ಇಎಂಡಿಯೂ ಒಳಗೊಂಡಂತೆ ಪೂರ್ತಿ ಮೊತ್ತವನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು ಮತ್ತು ಆಸ್ತಿಯನ್ನು ಮರು ಮಾರಾಟ ಮಾಡಲಾಗುವುದು ಹಾಗೂ ಈ ಸುಸ್ತಿದಾರರಿಂದ ಖರೀದಿದಾರರಿಗೆ ಆಸ್ತಿಯ ಮೇಲೆ ಯಾವುದೇ ಮೊತ್ತದ ಮೇಲೆ ಯಾವುದೇ ಕ್ಲೈಮುಗಳು ಇರುವುದಿಲ್ಲ. 5) ಮಾರಾಟ ಪತ್ರವನ್ನು ನೀಡಿದ ನಂತರ ಮಾರಾಟವನ್ನು ಪೂರ್ಣಗೊಳಿಸಲಾಗುವುದು ಮತ್ತು ಆ ಕುರಿತು ಯಾವುದೇ ಕ್ಲೈಮುಗಳಿಗೆ ಬ್ಯಾಂಕು ಅವಕಾಶ ನೀಡುವುದಿಲ್ಲ. 6) ಆಸ್ತಿಯನ್ನು ಮಾರಾಟ ಮಾಡಲು ಬ್ಯಾಂಕು ಯಾರನ್ನೂ ನಿಯೋಜಿಸುವುದಿಲ್ಲ ಅಥವಾ ನಿಯೋಜಿಸುವ ಒಪ್ಪಂದವಾಗಲಿ ಪ್ರತಿನಿಧಿಯನ್ನಾಗಲಿ ಸೂಚಿಸುವುದಿಲ್ಲ. ಮಾರಾಟವನ್ನು ಯಾವುದೇ ಸೂಕ್ತ ಕಾರಣಗಳಿಂದ ರದ್ದುಗೊಳಿಸುವ/ಮುಂದೂಡುವ ಅಥವಾ ಯಾವುದೇ ಕಾರಣಗಳನ್ನು ನೀಡದೇ ರದ್ದುಗೊಳಿಸುವ ಅಧಿಕಾರವನ್ನು, ಬ್ಯಾಂಕು ಹೊಂದಿದ್ದು ಇದನ್ನು ಯಾವುದೇ ಬಿಡ್‌ದಾರರು ಪ್ರಶ್ನಿಸುವಂತಿಲ್ಲ. 7) ಬ್ಯಾಂಕ್ ಬಿಡ್ಡುಗಳನ್ನು ಯಾವುದೇ ಹಂತದಲ್ಲಿ ಅಂಗೀಕರಿಸುವ/ತಿರಸ್ಕರಿಸುವ /ಬದಲಾಯಿಸುವ/ಮಾರ್ಪಡಿಸುವ ಯಾವುದೇ ಮಾರಾಟದ ನಿಯಮವನ್ನು ಮನ್ನಾ ಮಾಡುವ ಅಧಿಕಾರವನ್ನು ಬ್ಯಾಂಕ್ ಕಾಯ್ದಿರಿಸಿಕೊಂಡಿದೆ. 8) ಶಾಸನಬದ್ದ ಬಾಕಿಗಳಾದ ಆಸ್ತಿ ತೆರಿಗೆಗಳು/ಖಾತ/ಸೆಸ್ ಮತ್ತು /ಅಥವಾ ಬಿಲ್ಡರ್/ಸೊಸೈಟಿ ಅಸೋಸಿಯೇಷನ್/ಅಪಾರ್ಟ್‌ಮೆಂಟ್ ಅಭಿವೃದ್ಧಿ ಬಾಕಿಗಳು, ಸಂಘದ ನಿಧಿಗಳಿಗೆ ಕೊಡುಗೆ, ವರ್ಗಾವಣೆ ಚಾರ್ಜ್‌ಗಳು, ವಿದ್ಯುತ್ ಬಾಕಿಗಳು ನೀರಿನ ಚಾರ್ಜ್‌ಗಳ ಬಾಕಿಗಳನ್ನು ಬಿಡ್ಡುದಾರರು/ಆಫರ್‌ಗಳು/ಭಾವಿ ಖರೀದಿದಾರರು ಮೊದಲೇ ಖಚಿತ ಪಡಿಸಿಕೊಳ್ಳಬೇಕು ಮತ್ತು ಅದನ್ನು ಖರೀದಿದಾರನು ಮಾರಾಟ ಪ್ರಮಾಣ ಪತ್ರವನ್ನು ಬರೆದುಕೊಡುವ ಮುಂಚೆ ಪಾವತಿ ಮಾಡತಕ್ಕದ್ದು ಮತ್ತು ಮಾರಾಟಕ್ಕೆ ಪ್ರಾಸಂಗಿಕವಾದ ಎಲ್ಲಾ ವೆಚ್ಚಗಳನ್ನು ಖರೀದಿದಾರನೇ ಭರಿಸತಕ್ಕದ್ದು. 9) ಬ್ಯಾಂಕಿಗೆ ಆಧಾರವಾಗಿರುವ ಆಸ್ತಿಯನ್ನು ಅಧಿಕೃತ ಅಧಿಕಾರಿಯವರು ಎಲ್ಲಿ ಹೇಗಿದೆಯೋ ಹಾಗೆ ಮಾರಾಟ ಮಾಡುತ್ತಾರೆ ಮಾರಾಟ ಪ್ರಕ್ರಿಯೆ ಮುಗಿದ ನಂತರ ಯಶಸ್ವಿ ಬಿಡ್‌ದಾರರಿಂದ ಮಾರಾಟವಾಗಿರುವ ಆಸ್ತಿಯ ಬಗ್ಗೆ ಯಾವುದೇ ಸಮಸ್ಯೆ ತಂಟೆ/ತಕರಾರು ಬಂದಲ್ಲಿ ಅದಕ್ಕೆ ಅಧಿಕೃತ ಅಧಿಕಾರಿಯವರು ಜವಾಬ್ದಾರರಾಗಿರುವುದಿಲ್ಲ, ಆಸ್ತಿಯನ್ನು ತೆರವು ಮಾಡಿಸುವುದಕ್ಕಾಗಲೀ/ಸ್ವಾಧೀನಕ್ಕೆ ತೆಗೆದುಕೊಳ್ಳುವುದಕ್ಕಾಗಲೀ ಅಥವಾ ಯಾವುದೇ ತಖರಾರುಗಳನ್ನು ಪರಿಹರಿಸಿಕೊಳ್ಳಲು ಯಶಸ್ವಿ ಬಿಡ್‌ದಾರರೇ ಏರ್ಪಾಡು ಮಾಡಿಕೊಳ್ಳಬೇಕು. ಮಾರಾಟ ಪ್ರಕ್ರಿಯೆ ಮುಗಿದ ನಂತರ ಯಶಸ್ವಿ ಬಿಡ್‌ದಾರರು ಯಾವುದೇ ಕ್ಲೈಮುಗಳು/ತಗಾದೆಯನ್ನುಅಧಿಕೃತ ಅಧಿಕಾರಿಯವರ ಗಮನಕ್ಕೆ ತರುವಂತಿಲ್ಲ

**ಮೇಲೆ ತಿಳಿಸಿರುವ ಮಾರಾಟದ ನಿಯಮ ನಿಬಂಧನೆಗಳಿಗೆ ಅನುಗುಣವಾಗಿ ಷೆಡ್ಯೂಲ್ -1, ಭಾಗ-ಎ ನಲ್ಲಿರುವ ಆಸ್ತಿಯನ್ನು ಖರೀದಿಸಲು ಆಸಕ್ತಿಯುಳ್ಳ ವ್ಯಕ್ತಿಗಳಿಂದ ಮೊಹರಾದ ಟೆಂಡರ್ ಗಳನ್ನು ಆಹ್ವಾನಿಸಲಾಗಿದೆ.**

- ಮೊಹರಾದ ಟೆಂಡರ್‌ಗಳನ್ನು ಮೇಲೆ ತಿಳಿಸಿರುವ ಬ್ಯಾಂಕಿನ ವಿಳಾಸಕ್ಕೆ ದಿನಾಂಕ 04-02-2025 ರಂದು ಸಂಜೆ 4-30 ಗಂಟೆಯ ಒಳಗೆ ಭರ್ತಿ ಮಾಡಿದ ಅರ್ಜಿಯ ಜೊತೆ ಪಾವತಿಸಬೇಕು. ಡಿ.ಡಿ/ಆರ್.ಟಿ.ಜಿ.ಎಸ್. ಅನ್ನು ಬಾಪೂಜಿ ಕೋ-ಆಪರೇಟಿವ್ ಬ್ಯಾಂಕ್ ಲಿ., ದಾವಣಗೆರೆ-577 001, ಇವರ ಹೆಸರಿನಲ್ಲಿ ದಾವಣಗೆರೆಯಲ್ಲಿ ಪಾವತಿಯಾಗುವಂತೆ ಪಡೆಯಬೇಕು ಬಿಡ್ ಅರ್ಜಿಗಳನ್ನು ಬಾಪೂಜಿ ಕೋ-ಆಪರೇಟಿವ್ ಬ್ಯಾಂಕ್ ಲಿ., ದಾವಣಗೆರೆ-577 001, ಆಫೀಸಿನಿಂದ ಪಡೆಯಬಹುದು. ಚೆಕ್ ಮೂಲಕ ಸ್ವೀಕರಿಸಲಾಗುವುದಿಲ್ಲ. ಚೆಕ್‌ಗಳ ಜೊತೆಗೆ ಕಳುಹಿಸಲಾಗುವ ಬಿಡ್‌ಗಳನ್ನು ಅನರ್ಹಗೊಳಿಸಲಾಗುವುದು. ಬಿಡ್‌ಗಳು ತೆರೆಯುವ ದಿನಾಂಕ:05-02-2025 ರಂದು ಬೆಳಿಗ್ಗೆ 11-00 ಗಂಟೆಗೆ ಅಧಿಕೃತ ಅಧಿಕಾರಿಯವರ ಉಪಸ್ಥಿತಿಯಲ್ಲಿ ಮತ್ತು ಪ್ರಸ್ತುತ ಬಿಡ್‌ದಾರರ ಸಮ್ಮುಖದಲ್ಲಿ ಬಾಪೂಜಿ ಕೋ-ಆಪರೇಟಿವ್ ಬ್ಯಾಂಕ್ ಲಿ., ದಾವಣಗೆರೆ-577 001, ಇವರ ಸಮ್ಮುಖದಲ್ಲಿ ತೆರೆಯಲಾಗುವುದು.
- ಬಿಡ್ ಷರತ್ತು ರಹಿತವಾಗಿರುತ್ತದೆ ಮತ್ತು ಷರತ್ತುಗಳಿಗೆ ಬಿಡ್‌ಗಳನ್ನು ತಿರಸ್ಕರಿಸಲಾಗುವುದು.
- ಒಂದು ವೇಳೆ ಒಂದಕ್ಕಿಂತ ಹೆಚ್ಚು ಗರಿಷ್ಟ ಬಿಡ್‌ಗಳು ಇದ್ದು, ಒಂದೇ ಆಫರ್ ಬೆಲೆಯನ್ನು ಹೊಂದಿದ್ದರೆ, ಒಂದೇ ಮೊತ್ತದ ಆಫರ್‌ಗಳನ್ನು ಹೊಂದಿರುವ ಬಿಡ್‌ಗಳನ್ನು ಮತ್ತೊಮ್ಮೆ ತೆರೆಯುವ ನಿರ್ಧಾರವನ್ನು ಅಧಿಕೃತ ಅಧಿಕಾರಿಯವರ ನಿರ್ಣಯಕ್ಕೆ ಬಿಟ್ಟದ್ದು.
- ಇಂಥ ಸಮಯದಲ್ಲಿ ಬಿಡ್ಡಿನ ಮೊತ್ತವನ್ನು ಹೆಚ್ಚಿಸುವ ಅಥವಾ ಬಿಡ್‌ನ ವಿಧಾನವನ್ನು ಬದಲಾಯಿಸುವ ಅಧಿಕಾರವನ್ನು ಅಧಿಕೃತ ಅಧಿಕಾರಿಯವರು ಹೊಂದಿರುತ್ತಾರೆ. ● ಬಿಡ್‌ದಾರರು ಮಾತ್ರ ಹರಾಜಿನಲ್ಲಿ ಭಾಗವಹಿಸತಕ್ಕದ್ದು.
- ಸಾಲಗಾರರಿಗೆ ಮಾರಾಟದ ನೋಟೀಸ್ ನೀಡಲಾದ ದಿನಾಂಕ:31-12-2024
- ಇಚ್ಚಿಸುವ ಬಿಡ್‌ದಾರರು ಆಸ್ತಿಯನ್ನು ಪರಿವೀಕ್ಷಿಸಲು ಮತ್ತು ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ: ಎಂ. ಬಸವರಾಜ, ಪ್ರಧಾನವ್ಯವಸ್ಥಾಪಕರು, ಮೊಬೈಲ್ ನಂ. 98441 11012.

ದಿನಾಂಕ : 31-12-2024
ಸ್ಥಳ : ದಾವಣಗೆರೆ

ಸಹಿ/-
ಅಧಿಕೃತ ಅಧಿಕಾರಿ
ಬಾಪೂಜಿ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್, ದಾವಣಗೆರೆ.

